

# ಸತ್ಯಮೇವ ಜಯತೇ

(ದೈವೀಸತ್ಯ ಜಯ ಸಾಧಿಸುತ್ತದೆ)

## ಅಖಿಲ ಭಾರತ ಪತ್ರಿಕೆ

## ಮೇ – 2015

ಬೆಲೆ : 15/-



*Take Truth for your force,*
*take Truth for your refuge.*

- The Mother

## ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org


## ಪರಿವಿಡಿ

### "ಸತ್ಯಮೇವ ಜಯತೇ"
**(ದೈವೀಸತ್ಯ ಜಯ ಸಾಧಿಸುತ್ತದೆ)**


**ಅನು : ಡಾ. ಕೆ.ಎಸ್. ಆಮೂರ**

ದೈವೀಸತ್ಯ ಎಂದರೇನು? 3

ದೈವೀಸತ್ಯದ ಮಾರ್ಗ 12

**ಅನು : ಶ್ರೀ ವೀರೇಂದ್ರ ಸಿಂಪಿ**

ಪ್ರತಿದಿನದ ಜೀವನದಲ್ಲಿ ದೈವೀಸತ್ಯ 17

**ಅನು : ಡಾ. ಕೆ.ಎಸ್. ಆಮೂರ**

ದೈವೀಸತ್ಯದ ನಿಯಮ 25


**ಅನು : ಶ್ರೀ ಪುರುಷೋತ್ತಮ ಗಲಗಲಿ**

ದೈವೀಸತ್ಯದ ಸೇವೆ 42

**ಅನು : ಡಾ. ಕೆ.ಎಸ್. ಆಮೂರ**

ದೈವೀಸತ್ಯಕ್ಕೆ ಅಂಟಿಕೊಳ್ಳಿರಿ 49

**ವಾರ್ತಾಪತ್ರ** 52

ಸನಾತನ ದೈವೀಸತ್ಯದ ಓ ಭವ್ಯತೆಯೆ,
ನಾನು ನಿನಗೆ ಕರೆ ಕೊಡುತ್ತೇನೆ.
ಓ ನಾಳಿನ ದೈವೀ ಸೂರ್ಯನೆ, ನಿನಗೆ ವಂದಿಸುತ್ತೇನೆ.



ಈ ಜಗತ್ತಿನಲ್ಲಿ ನನಗೆ ಕೇವಲ ಒಂದೇ ಒಂದು ವಿಷಯದ ಬಗ್ಗೆ
ಭರವಸೆ ಇದೆ: ಅದೆಂದರೆ "ದೈವೀಸತ್ಯದ ವಿಜಯ".

**(Ref: Mother You Said So, Jan 1973)** – **ಶ್ರೀಮಾತೆ**

*

**ಸತ್ಯೇನ ಲಭ್ಯಸ್ತಪಸಾ ಹ್ಯೇಷ ಆತ್ಮಾ ಸಮ್ಯಗ್ ಜ್ಞಾನೇನ ಬ್ರಹ್ಮಚರ್ಯೇನ ನಿತ್ಯಮ್ ।**
**ಅಂತಃ ಶರೀರೆ ಜ್ಯೋತಿರ್ಮಯೋ ಹಿ ಶುಭ್ರೋ ಯಂ ಪಶ್ಯಂತಿ ಯತಯಃ ಕ್ಷೀಣದೋಷಾಃ ॥**

5. ದಿವ್ಯಾತ್ಮವನ್ನು ಸತ್ಯದಿಂದ, ಸ್ವ–ಶಿಸ್ತುಪಾಲನೆಯಿಂದ, ಸಮಗ್ರ ಜ್ಞಾನದಿಂದ, ಪರಿಶುದ್ಧ ಜೀವನದಿಂದ, ಯಾವಾಗಲೂ ಗೆದ್ದುಕೊಳ್ಳಬಹುದು – ಆಂತರಿಕ ದೇಹದಲ್ಲಿರುವ ಈ ದಿವ್ಯಾತ್ಮ ಎಲ್ಲ ಪ್ರಕಾಶದಿಂದ ಒಡಗೂಡಿ ಜ್ಯೋತಿರ್ಮಯ–ವಾಗಿರುತ್ತದೆ, ತಪಸ್ಸನ್ನು ಆಚರಿಸುವವರು ದೋಷರಹಿತರಾದಾಗ ಅದನ್ನು ನೋಡುತ್ತಾರೆ.

**ಸತ್ಯಮೇವ ಜಯತೇ ನಾನೃತಂ ಸತ್ಯೇನ ಪಂಥಾ ವಿತತೋ ದೇವಯಾನಃ ।**
**ಯೇನಾಕ್ರಮಂತಿ ಋಷಯೋ ಹ್ಯಾಪ್ತಕಾಮಾ ಯತ್ರ ತತ್ ಸತ್ಯಸ್ಯ ಪರಮಂ ವಿಧಾನಮ್ ॥**

6. ಜಯಗಳಿಸುವುದು ದೈವೀಸತ್ಯವೇ ಹೊರತು ಮಿಥ್ಯೆಯಲ್ಲ. ದೇವತೆಗಳ ಪ್ರಯಾಣದ ಮಾರ್ಗವನ್ನು ದೈವೀಸತ್ಯದಿಂದ ಮಾಡಿಕೊಡಲಾಗಿತ್ತು. ಅದರ ಮೂಲಕ ಋಷಿಗಳು, ತಾವು ಬಯಸಿದ್ದನ್ನು ಸಿದ್ಧಿಸಿಕೊಂಡು, ದೈವೀಸತ್ಯದ ಪರಮೋಚ್ಚ ನಿವಾಸವಿರುವತ್ತ ಆರೋಹಣ ಮಾಡುತ್ತಾರೆ.

**(ಮಾಂಡೂಕ ಉಪನಿಷತ್ತು CWSA 18/143)** **ಅನು: ಶ್ರೀ ಅರವಿಂದರು**

*

## ದೈವೀಸತ್ಯ ಎಂದರೇನು?

### ಮನಸ್ಸಿನ ಮೂಲಕ ದೈವೀಸತ್ಯಕ್ಕೆ ವ್ಯಾಖ್ಯೆ ಕೊಡಲಾಗುವುದಿಲ್ಲ

ದೈವೀಸತ್ಯ ಕುರಿತು ಮನಸ್ಸಿನ ಮೂಲಕ ಕೊಡಬಹುದಾದ ವ್ಯಾಖ್ಯೆ ನಿಮಗೆ ಬೇಕಾಗಿದೆಯೆ? ಅದನ್ನು ಮನಸ್ಸಿನಲ್ಲಿ ಮೂಡುವ ಪದಗಳ ಮೂಲಕ ಅಭಿವ್ಯಕ್ತಪಡಿಸಲಾಗುವುದಿಲ್ಲ.

ದೈವೀಸತ್ಯಕ್ಕೆ ರೂಪ ನೀಡಲಾಗುವುದಿಲ್ಲ, ಅದಕ್ಕೆ ವ್ಯಾಖ್ಯೆ ಕೊಡಲಾಗುವುದಿಲ್ಲ, ಅದನ್ನು ಜೀವಿಸಬೇಕಾಗಿರುತ್ತದೆ.

ದೈವೀಸತ್ಯಕ್ಕೆ ಇಡಿಯಾಗಿ ಮುಡಿಪಾಗಿರಿಸಿಕೊಂಡವನು, ಅದನ್ನು ಜೀವಿಸಬೇಕೆನ್ನುವವನು, ಅದಕ್ಕೆ ಸೇವೆ ಸಲ್ಲಿಸಬೇಕೆನ್ನುವವನು ಪ್ರತಿಯೊಂದು ಕ್ಷಣ ಏನನ್ನು ಕೈಕೊಳ್ಳಬೇಕು ಎಂಬುದನ್ನು ತಿಳಿದಿರುತ್ತಾನೆ: ಅದು ಒಂದು ಬಗೆಯ



ಅಂತರ್ಬೋಧೆ ಇಲ್ಲವೆ ದಿವ್ಯಜ್ಞಾನ, ಅದು ಪ್ರತಿಯೊಂದು ಕ್ಷಣದಲ್ಲಿ ಆ ಕ್ಷಣದ ಸತ್ಯವೇನು ಎಂಬುದನ್ನು ತಿಳಿದುಕೊಳ್ಳುವಂತೆ ಮಾಡುವುದು. ಸ್ವಾರಸ್ಯಕರವಾಗಿರುವ ವಿಷಯ ಇದೇ ಆಗಿದೆ. ಸರಿಯಾದ ವ್ಯಾಖ್ಯೆ ನೀಡಲಾದ, ಸರಿಯಾಗಿ ವರ್ಗೀಕರಣ ಮಾಡಲಾದ, ಸರಿಯಾಗಿ ಸ್ಥಾಪಿತಗೊಂಡ ದೈವೀಸತ್ಯವನ್ನು ನೀವು ತಿಳಿದುಕೊಳ್ಳಲು ಬಯಸುತ್ತೀರಿ, ನಂತರ ನೀವು ವಿಶ್ರಾಂತಿ ಸ್ಥಿತಿಯಲ್ಲಿರುತ್ತೀರಿ, ಹೆಚ್ಚಿನದನ್ನು ಅರಸುವ ಆವಶ್ಯಕತೆ ಇರುವುದಿಲ್ಲ! ನೀವದನ್ನು ಕೈಕೊಳ್ಳುತ್ತೀರಿ ಮತ್ತು ಇಲ್ಲಿ ದೈವೀಸತ್ಯವಿದೆ ಎಂದು ಹೇಳುತ್ತೀರಿ, ಮತ್ತು ನಂತರ ಅದು ಸ್ಥಿರವಾಗಿಬಿಡುತ್ತದೆ. ಇದನ್ನೇ ಎಲ್ಲ ಧರ್ಮಗಳು ಕೈಕೊಂಡಿವೆ, ಅವು ತಮ್ಮ ಸತ್ಯಗಳನ್ನು ಧರ್ಮತತ್ವಗಳೆಂದು ಸ್ಥಾಪಿತಗೊಳ್ಳುವಂತೆ ಮಾಡಿವೆ. ಆದರೆ ಅದು ಇನ್ನುಮುಂದೆ ದೈವೀಸತ್ಯವಾಗಿ ಉಳಿದುಕೊಳ್ಳುವುದಿಲ್ಲ.

ದೈವೀಸತ್ಯ ಜೀವಂತವಿರುವ, ಚಲಿಸುತ್ತಿರುವ, ಪ್ರತಿ ಕ್ಷಣ ತನ್ನನ್ನು ಅಭಿವ್ಯಕ್ತಗೊಳಿಸುತ್ತಿರುವ ಏನೋ ಒಂದು, ಮತ್ತು ಅದು ಪರಮೋಚ್ಚನನ್ನು ಸಮೀಪಿಸಲು ಒಂದು ಮಾರ್ಗ. ಪರಮೋಚ್ಚನನ್ನು ಸಮೀಪಿಸಲು ಪ್ರತಿಯೊಬ್ಬನಿಗೆ ಅವನದೇ ಮಾರ್ಗವಿರುತ್ತದೆ. ಒಂದೇ ಸಮಯದಲ್ಲಿ ಎಲ್ಲ ಬದಿಗಳಿಂದ ಪರಮೋಚ್ಚನನ್ನು ಸಮೀಪಿಸುವ ಜನರು ಬಹುಶಃ ಇರಬಹುದು, ಆದರೆ ದೈವೀಪ್ರೇಮದ ಮೂಲಕ, ಇಲ್ಲವೆ ದೈವೀ ಸಾಮರ್ಥ್ಯದ ಮೂಲಕ, ದೈವೀ ಪ್ರಜ್ಞೆಯ ಮೂಲಕ, ದೈವೀಸತ್ಯದ ಮೂಲಕ ಪರಮೋಚ್ಚನನ್ನು ಸಮೀಪಿಸುವವರು ಇರುತ್ತಾರೆ. ಆದರೆ ಈ ಮುಖಗಳಲ್ಲಿ ಪ್ರತಿಯೊಂದು ಸ್ವತಃ ಪರಮೋಚ್ಚನಿರುವ ಹಾಗೆ ಪರಿಪೂರ್ಣವಾದದ್ದು, ಅತ್ಯಗತ್ಯವಾದದ್ದು ಮತ್ತು ವ್ಯಾಖ್ಯೆ ನೀಡಲಾಗದ್ದು ಆಗಿರುತ್ತದೆ. ಪರಮೋಚ್ಚ ಪ್ರಭು ತನ್ನ ಕ್ರಿಯೆಯಲ್ಲಿ ಪರಿಪೂರ್ಣನಾದವನು, ಆಜ್ಞಾರ್ಥಕನಾದವನು ಮತ್ತು ವ್ಯಾಖ್ಯಿಸಲಾಗದವನು ಮತ್ತು ಹಿಡಿತಕ್ಕೆ ಸಿಗದವನು ಆಗಿರುತ್ತಾನೆ. ಅವನ ಗುಣ ಲಕ್ಷಣಗಳಿಗೆ ಒಂದೇ ಬಗೆಯ ಈ ಗುಣಮಟ್ಟವಿರುತ್ತದೆ.

ಒಮ್ಮೆ ಮನುಷ್ಯ ಇದನ್ನು ತಿಳಿದುಕೊಂಡು ತನ್ನನ್ನು ಈ ಮುಖಗಳಲ್ಲಿ ಯಾವುದೋ ಒಂದರ ಸೇವೆಯಲ್ಲಿ ತೊಡಗಿಸಿಕೊಂಡಾಗ (ಅದು ಜೀವನದಲ್ಲಿ, ಕಾಲಗತಿಯಲ್ಲಿ, ಕಾಲದ ಚಲನೆಯಲ್ಲಿ ಅಭಿವ್ಯಕ್ತವಾಗುತ್ತದೆ) ಪ್ರತಿಯೊಂದು ಕ್ಷಣ ದೈವೀಸತ್ಯವೆಂದರೇನು, ದೈವೀ ಪ್ರಜ್ಞೆಯೆಂದರೇನು, ದೈವೀ ಸಾಮರ್ಥ್ಯವೆಂದರೇನು, ದೈವೀ ಪ್ರೇಮವೆಂದರೇನು ಎಂಬುದನ್ನು ತಿಳಿದುಕೊಳ್ಳುತ್ತಾನೆ. ಮತ್ತು ಅದು ಪ್ರಕಟಣೆಯಲ್ಲಿ ಅನೇಕ ರೀತಿಗಳಲ್ಲಿ ಅಭಿವ್ಯಕ್ತಪಡಿಸುವ ಹಲವಾರು ರೂಪ

ತಳೆದಿರುವ ದೈವೀ ಸಾಮರ್ಥ್ಯ, ದೈವೀ ಪ್ರೇಮ, ದೈವೀ ಪ್ರಜ್ಞೆ ಹಾಗೂ ಸತ್ಯ. ಅದು ದೈವೀ ಪ್ರಭು ಪ್ರಕಟಣೆಯಲ್ಲಿ ಹಲವಾರು ರೀತಿಗಳಲ್ಲಿ ತನ್ನನ್ನು ಅಭಿವ್ಯಕ್ತಗೊಳಿಸುವ ರೀತಿಯದಾಗಿರುತ್ತದೆ.

**(CWM, 15/396–97)**

*

**ಮನಸ್ಸು ದೈವೀಸತ್ಯವನ್ನು ವಿರೂಪಗೊಳಿಸುತ್ತದೆ**

ಸಾರಭೂತವಾದ ಸತ್ಯವನ್ನು ನಿರ್ಮಲ, ಕಣ್ಣು ಕುಕ್ಕಿಸುವ ಬಿಳಿ ಬಣ್ಣದ ಗೋಲವೊಂದಕ್ಕೆ ಹೋಲಿಸಿದರೆ ಮಾನಸಿಕ ಮಾಧ್ಯಮದಲ್ಲಿ, ಮಾನಸಿಕ ವಾತಾವರಣದಲ್ಲಿ ಈ ಸಮಗ್ರ ಬಿಳಿ ಬಣ್ಣ ಸಾವಿರಾರು ಛಾಯೆಗಳ ರೂಪಗಳಲ್ಲಿ ಪರಿವರ್ತನೆ ಹೊಂದುತ್ತದೆ ಎಂದು ನಾವು ಹೇಳಬಹುದು, ಅವುಗಳಲ್ಲಿ ಪ್ರತಿಯೊಂದು ಛಾಯೆಗೆ ಅದರದೇ ಭಿನ್ನ ಬಣ್ಣವಿರುತ್ತದೆ, ಏಕೆಂದರೆ ಅವೆಲ್ಲ ಛಾಯೆಗಳು ಒಂದರಿಂದ ಒಂದು ಪ್ರತ್ಯೇಕಗೊಂಡಿರುತ್ತವೆ. ಮಾಧ್ಯಮ ಬಿಳಿ ಬಣ್ಣವನ್ನು ವಿರೂಪಗೊಳಿಸುತ್ತದೆ ಮತ್ತು ಆ ಬಣ್ಣ ಅನೇಕ ಭಿನ್ನ ಬಣ್ಣಗಳಾಗಿ ತೋರಿಬರುವಂತೆ ಮಾಡುತ್ತದೆ: ಆ ಬಣ್ಣಗಳು ಕೆಂಪು, ಹಸಿರು, ಹಳದಿ, ನೀಲಿ ಇತ್ಯಾದಿಯಾಗಿರುತ್ತವೆ, ಕೆಲವೊಮ್ಮೆ ಬಹಳ ಅಸಾಮರಸ್ಯದಲ್ಲಿರುತ್ತವೆ. ಮತ್ತು ಮನಸ್ಸಿಗೆ ಆ ಗೋಲದ ಬಿಳಿ ಬಣ್ಣದ ಚಿಕ್ಕ ತುಂಡೊಂದನ್ನು ಹಿಡಿದುಕೊಳ್ಳ–ಲಾಗುವುದಿಲ್ಲ. ಆದರೆ ಅದು ನಾನಾ ಬಗೆಯ ಬಣ್ಣಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಇಲ್ಲವೆ ಕಡಿಮೆ ಸಂಖ್ಯೆಯಲ್ಲಿ ಹಿಡಿದುಕೊಳ್ಳುತ್ತದೆ, ಅವುಗಳೊಡನೆ ಅದು ಬಿಳಿ ಬಣ್ಣದ ಹಿಂದಿನ ಸ್ಥಿತಿಗೆ ಬರಲಾಗುವುದಿಲ್ಲ. ಆದ್ದರಿಂದ ಅದು ಸತ್ಯವನ್ನು ತಲುಪಲಾರದು. ಅದು ಸತ್ಯದ ತುಂಡುಗಳನ್ನು ವಶಪಡಿಸಿಕೊಳ್ಳಲಾರದು, ಆದರೆ ವಿಚ್ಛಿನ್ನವಾದ ಸತ್ಯವನ್ನು ವಶಪಡಿಸಿಕೊಳ್ಳುತ್ತದೆ. ಅದು ವಿಘಟನೆ ಹೊಂದಿದ ಸ್ಥಿತಿಯಾಗಿರುತ್ತದೆ.

ಸತ್ಯ ಇಡಿಯಾಗಿರುವಂತಹದು ಮತ್ತು ಅದರಲ್ಲಿರುವ ಪ್ರತಿಯೊಂದೂ ಅವಶ್ಯವಾಗಿರುತ್ತದೆ. ಮಾನಸಿಕ ವಾತಾವರಣದಲ್ಲಿ ವಿರೂಪಗೊಂಡ ಮಾಧ್ಯಮದ ಮೂಲಕ ನೀವು ನೋಡುವುದು ಎಲ್ಲ ಅಂಶಗಳ ಪ್ರಕಟಣೆಗಾಗಿ ಇಲ್ಲವೆ ಅಭಿವ್ಯಕ್ತಿಗಾಗಿ ಇಲ್ಲವೆ ಗ್ರಹಿಸುವುದಕ್ಕಾಗಿಯೂ ಕೂಡ ಅನುಚಿತ(unsuitable)–ವಾಗಿರುತ್ತದೆ – ಮತ್ತು ಒಳ್ಳೆಯ ಭಾಗ ಕಳೆದು ಹೋಗಿರುತ್ತದೆಂದು ಹೇಳಬಹುದು. ಹಾಗಾಗಿ ಅದನ್ನು ಇನ್ನುಮುಂದೆ ಸತ್ಯ ಎಂದು ಕರೆಯಲಾಗದು, ಆದರೆ, ಅದಕ್ಕೂ



ಹೆಚ್ಚಾಗಿ, ಅದು ಸಾರದಲ್ಲಿ ಸತ್ಯವಾದದದ್ದು, ಆದಾಗ್ಯೂ ಮಾನಸಿಕ ವಾತಾವರಣದಲ್ಲಿ ಅದು ಇನ್ನುಮುಂದೆ ಹಾಗಿರುವುದಿಲ್ಲ – ಅದು ಅಜ್ಞಾನ.

**(CWM, 10/2)**

*

**ದೈವೀಸತ್ಯಕ್ಕೆ ತರ್ಕ ಅತ್ಯಂತ ಕೆಟ್ಟ ಶತ್ರು**

ಒಂದು ವಿಚಾರದಿಂದ ಇನ್ನೊಂದನ್ನು ಊಹಿಸುವ ಕಲೆ ಮತ್ತು ಒಂದು ವಾಸ್ತವ ಸಂಗತಿಯಿಂದ ಅದರ ಎಲ್ಲ ಪರಿಣಾಮಗಳನ್ನು ನಿರ್ಣಯಿಸುವ ಕಲೆ ತರ್ಕವಾಗಿರುತ್ತದೆ. ಆದರೆ ತರ್ಕವೇ ಸ್ವತಃ ಸತ್ಯದಲ್ಲಿರುವ ತಾರತಮ್ಯವನ್ನು ಅರಿತುಕೊಳ್ಳುವ ಕ್ಷಮತೆಯನ್ನು ವಶದಲ್ಲಿಟ್ಟುಕೊಂಡಿರುವುದಿಲ್ಲ. ನಿಮ್ಮ ತರ್ಕ ವಾದಾತೀತವಾಗಿರಬಹುದು, ಆದರೆ ನಿಮ್ಮ ಪ್ರಾರಂಭಬಿಂದುವೇ ತಪ್ಪಾಗಿದ್ದರೆ, ನಿಮ್ಮ ತೀರ್ಮಾನಗಳೂ ಕೂಡ ತಪ್ಪಾಗಿರುತ್ತವೆ, ನಿಮ್ಮ ತರ್ಕ ಸರಿಯಾಗಿದ್ದಾಗಲೂ, ಅದರಿಂದಾಗಿಯೇ ತಪ್ಪುಗಳಾಗುತ್ತವೆ. ತಾನು ಮಾತ್ರ ಧರ್ಮಿಷ್ಠನೆಂದು ಭಾವಿಸಿ ಮನುಷ್ಯ ಸದ್ಗುಣದ ಹಿರಿಮೆಯ ಭಾವನೆ ತಂದುಕೊಳ್ಳುವುದಕ್ಕೂ ಕೂಡ ಇದೇ ಅನ್ವಯವಾಗುತ್ತದೆ.

ನಿಮ್ಮ ಸದ್ಗುಣ ಇತರರ ಬಗ್ಗೆ ಅಸಡ್ಡೆಯ ಭಾವನೆ ತಂದುಕೊಡುತ್ತದೆ – ಅವರು ನಿಮಗಿಂತ ಕಡಿಮೆ ಸದ್ಗುಣವಿದ್ದವರು ಎಂಬ ಅಸಡ್ಡೆಯ ಭಾವನೆ ನಿಮ್ಮಲ್ಲಿ ತುಂಬಿಕೊಳ್ಳುತ್ತದೆ – ಅದು ನಿಮ್ಮ ಸದ್ಗುಣವನ್ನು ಸಂಪೂರ್ಣವಾಗಿ ನಿರರ್ಥಕ–ವಾದದ್ದನ್ನಾಗಿ ಮಾಡುತ್ತದೆ.

ಆ ಕಾರಣದಿಂದಾಗಿಯೆ ಶ್ರೀ ಅರವಿಂದರು ತಮ್ಮ ಸೂಕ್ತಿಗಳಲ್ಲಿ, ಸದ್ಗುಣದ ಬಗ್ಗೆ ಹಿರಿಮೆಯ ಭಾವವನ್ನಿರಿಸಿಕೊಳ್ಳುವುದು ಸದ್ಗುಣದ ಅತ್ಯಂತ ಕೆಟ್ಟ ಶತ್ರುವಿದ್ದ ಹಾಗೆ, ತರ್ಕ ದೈವೀಸತ್ಯದ ಅತ್ಯಂತ ಕೆಟ್ಟ ಶತ್ರುವಾಗಿದೆ ಎಂದು ಹೇಳಿದ್ದಾರೆ.

**(CWM, 10/67)**

*

**ದೈವೀಸತ್ಯ ಸ್ವತಃಸಿದ್ಧವಾದದ್ದು ಮತ್ತು ಅದನ್ನು ಒತ್ತಾಯದಿಂದ ಹೇರಬೇಕಾಗಿರುವುದಿಲ್ಲ**

ದೈವೀಸತ್ಯ ಸ್ವತಃಸಿದ್ಧವಾದದ್ದು, ಅದನ್ನು ಜಗತ್ತಿನ ಮೇಲೆ ಒತ್ತಾಯದಿಂದ ಹೇರಬೇಕಾಗಿರುವುದಿಲ್ಲ. ಜನರು ಅದನ್ನು ಸ್ವೀಕರಿಸಬೇಕೆಂಬ ಆವಶ್ಯಕತೆ

ಅದಕ್ಕಿರುವುದಿಲ್ಲ, ಏಕೆಂದರೆ ಅದು ಸ್ವ–ಅಸ್ತಿತ್ವದಲ್ಲಿರುವಂತಹದು, ಜನರು ಅದರ ಬಗ್ಗೆ ಏನು ಹೇಳುತ್ತಾರೆ ಎಂಬುದರ ಮೂಲಕವಾಗಲಿ ಇಲ್ಲವೆ ಅವರು ಅದಕ್ಕೆ ಅಂಟಿಕೊಳ್ಳುತ್ತಾರೆ ಎಂಬುದರ ಮೇಲೆಯಾಗಲಿ ಅದು ಅಸ್ತಿತ್ವದಲ್ಲಿರುವುದಿಲ್ಲ. ಧರ್ಮವನ್ನು ಸ್ಥಾಪಿಸುವವನಿಗೆ ಹಲವಾರು ಅನುಯಾಯಿಗಳ ಆವಶ್ಯಕತೆ ಇರುತ್ತದೆ. ... ಧರ್ಮಗಳು ತಮ್ಮ ಶ್ರೇಷ್ಠತೆಯನ್ನು ಅನುಯಾಯಿಗಳ ಸಂಖ್ಯೆಯ ಮೇಲಿಂದ ಗುರುತಿಸಬಹುದು, ಆದರೆ ದೈವೀಸತ್ಯವೊಂದಕ್ಕೆ ಒಬ್ಬ ಅನುಯಾಯಿ ಇಲ್ಲದೇ ಇದ್ದರೂ ಅದು ದೈವೀಸತ್ಯವಾಗಿರುವುದು. ಸಾಮಾನ್ಯ ಮನುಷ್ಯ ದೊಡ್ಡ ನಟನೆ ಮಾಡುವವರತ್ತ ಎಳೆತಕ್ಕೊಳಗಾಗುತ್ತಾನೆ, ಅವನು ದೈವೀಸತ್ಯ ಶಾಂತ ರೀತಿಯಲ್ಲಿ ಪ್ರಕಟವಾಗುತ್ತಿರುವುದರತ್ತ ಹೋಗುವುದಿಲ್ಲ. ಭವ್ಯ ರೀತಿಯಲ್ಲಿ ನಟನೆ ಮಾಡುತ್ತಿರುವವರಿಗೆ ದೊಡ್ಡ ದನಿಯಲ್ಲಿ ಸಾರಿ ಹೇಳುವ, ಜಾಹಿರಾತು ಮಾಡುವ ಆವಶ್ಯಕತೆ ಇರುತ್ತದೆ, ಹಾಗೆ ಮಾಡದೆ ಹೋದರೆ ಬಹಳ ಜನರು ತಮ್ಮತ್ತ ಬರುವಂತೆ ಆಕರ್ಷಿಸಲಾರರು. ಜನರು ಏನು ಯೋಚಿಸುತ್ತಾರೆ ಎಂಬುದಕ್ಕೆ ಕಾಳಜಿ ಮಾಡದೆ ಕೈಕೊಂಡ ಕಾರ್ಯ ಹೆಚ್ಚು ಪ್ರಸಿದ್ಧಿ ಪಡೆಯುವುದಿಲ್ಲ, ಹೆಚ್ಚಿನ ಸಂಖ್ಯೆಯಲ್ಲಿ ಜನರನ್ನು ತನ್ನತ್ತ ಎಳೆದು ತರುವುದಿಲ್ಲ. ಆದರೆ ದೈವೀಸತ್ಯಕ್ಕೆ ಜಾಹೀರಾತಿನ ಆವಶ್ಯಕತೆ ಇರುವುದಿಲ್ಲ; ಅದು ತನ್ನನ್ನು ಅಡಗಿಸಿಟ್ಟುಕೊಂಡಿರುವುದಿಲ್ಲ, ಹಾಗೆಯೇ ತನ್ನ ಬಗ್ಗೆ ಸಾರಿ ಹೇಳುವುದಿಲ್ಲ. ಅದು ಪ್ರಕಟವಾಗುವುದರಲ್ಲಿ ತೃಪ್ತಿ ಕಂಡುಕೊಳ್ಳುತ್ತದೆ, ಪರಿಣಾಮಗಳತ್ತ ಲಕ್ಷ್ಯಗೊಡುವುದಿಲ್ಲ; ಪ್ರಶಂಸೆಯನ್ನು ಅರಸುವುದಿಲ್ಲ, ಹಾಗೆಯೇ ಅದನ್ನು ದೂರವಿರಿಸುವುದಿಲ್ಲ. ಜಗತ್ತಿನ ಸ್ವೀಕೃತಿಯಿಂದ ಆಕರ್ಷಣೆಗೆ ಒಳಗಾಗುವುದಿಲ್ಲ ಇಲ್ಲವೆ ಅದರ ನಿರಾಕರಣೆಯಿಂದ ಕ್ಷೋಭೆಗೊಳ–ಗಾಗುವುದಿಲ್ಲ.

**(CWM, 3/83)**

*

**ಸದ್ಗುಣವನ್ನು ದೈವೀಸತ್ಯವೆಂದು ತಿಳಿದು ಗೊಂದಲಕ್ಕೀಡಾಗುವುದು**

ಪ್ರತಿಯೊಬ್ಬನೂ "ದೈವೀಸತ್ಯದ ಸಂರಕ್ಷಕ". ಒಬ್ಬ ಆಹಾರ ಕುರಿತು, ಇನ್ನೊಬ್ಬ ಹಣ ಕುರಿತು, ಮತ್ತೊಬ್ಬ ವ್ಯವಹಾರ ಕುರಿತು, ಮಗುದೊಬ್ಬ ಸಂಬಂಧಗಳನ್ನು ಕುರಿತು ಇರುವ ದೈವೀಸತ್ಯದ ಸಂರಕ್ಷಕನಾಗಿರುತ್ತಾನೆ. ಆಶ್ಚರ್ಯಕರ ಸಂಗತಿ ಎಂದರೆ ಇಲ್ಲಿಯವರೆಗೆ ಯಾರೂ ನನಗೆ "ನನ್ನ ಅಭಿಪ್ರಾಯಗಳು ಸತ್ಯವಾಗಿರದೇ ಇರಬಹುದು" ಎಂದು ಹೇಳಿಲ್ಲ – ಯಾರೊಬ್ಬರೂ ಹೇಳಿಲ್ಲ. "ನಾನು ನೋಡುವ ರೀತಿ, ಭಾವನೆಗೆ ತಂದುಕೊಳ್ಳುವ ರೀತಿ ಸತ್ಯವಾಗಿರಲಿಕ್ಕಿಲ್ಲ" ಎಂದು ಯಾರೂ ಹೇಳಿಲ್ಲ. ಅವರೆಲ್ಲ ದೈವೀಸತ್ಯದಿಂದ ತುಂಬಿಕೊಂಡಿದ್ದಾರೆ!



ಅದು ಹಾಗಿರುವುದಿಲ್ಲ. ಅವರೆಲ್ಲರೂ ಅದೇ ತಪ್ಪನ್ನು ಮಾಡುತ್ತಾರೆ: ಸದ್ಗುಣ ಕುರಿತು ಇರುವ ಹಳೆಯ ವಿಚಾರ ಸತ್ಯವೆಂದು ತಿಳಿದು ಗೊಂದಲಕ್ಕೀಡಾಗುತ್ತಾರೆ. ನೈತಿಕ ದೋಷದಂತಹ ತಪ್ಪನ್ನೇ ಅವರು ಮಾಡುತ್ತಾರೆ. ಮತ್ತು ಎಲ್ಲದಕ್ಕಿಂತಲೂ ಹೆಚ್ಚಾಗಿ ಸ್ಪಷ್ಟ ಹಾಗೂ ಸರಿಯಾಗಿ ವ್ಯಾಖ್ಯೆ ನೀಡಿದ, ಕಡಿಮೆ ಶಬ್ದಗಳಲ್ಲಿ ಅಭಿವ್ಯಕ್ತಪಡಿಸಿದ ಸತ್ಯ ಅವರಿಗೆ ಬೇಕಾಗಿರುತ್ತದೆ, ಅದರಿಂದಾಗಿ "ಇದು ಸತ್ಯ" ಎಂದು ಅವರು ಹೇಳಬಲ್ಲರು. "ಇದು ಸತ್ಯ" – ಆದ್ದರಿಂದ ಉಳಿದದ್ದೆಲ್ಲ ಮಿಥ್ಯೆ ಎಂದು ಹೇಳುವುದು ಹಳೆಯ ಧರ್ಮಗಳಲ್ಲಿರುವ ಅನಾಹುತ.

ಶ್ರೀ ಅರವಿಂದರು (ಮತ್ತು ನಾನೂ ಕೂಡ) "ಒಂದು ವಿಷಯ ಸತ್ಯವಾಗಿದ್ದರೆ, ಅದಕ್ಕೆ ವಿರುದ್ಧವಾದದ್ದೂ ಕೂಡ ಸತ್ಯವಾಗಿರುತ್ತದೆ. ಇದನ್ನು ನೀವು ಅರಿತುಕೊಂಡಾಗ, ಸರಿಯಾಗಿ ತಿಳಿದುಕೊಳ್ಳಲು ಪ್ರಾರಂಭಿಸುತ್ತೀರಿ" ಎಂದು ಎಷ್ಟೋ ಸಲ ಹೇಳಿಯಾಗಿದೆ.

ಇಂದು ಬೆಳಿಗ್ಗೆ ಶ್ರೀ ಅರವಿಂದರ ಬರಹಗಳಿಂದ ಉದ್ಧರಿಸಿದ ವಾಕ್ಯ ಕುರಿತು ನನ್ನ ಮೇಲೆ ಪ್ರಶ್ನೆಗಳ ಮಳೆಗರೆಯಲಾಯಿತು (ಅವರು ಶ್ರೀ ಅರವಿಂದರ ಹೆಸರಿನಲ್ಲಿ ಪ್ರಶ್ನೆಗಳ ಮಳೆಗರೆದರು). ಶ್ರೀಮಾತೆ (Mother) ಗ್ರಂಥದದಲ್ಲಿ ಅವರು ಬರೆದಿದ್ದ ವಾಕ್ಯ: "ದೈವೀಕೃಪೆ ಕೇವಲ ದೈವೀಸತ್ಯದಲ್ಲಿ ಕಾರ್ಯ ಮಾಡಬಲ್ಲದು" ಕುರಿತು ಅವರ ಪ್ರಶ್ನೆಗಳಿದ್ದವು. – ಮತ್ತು ನಾನು ಅದನ್ನು ಮರೆಯಬಾರದು! (ಶ್ರೀಮಾತೆಯವರು ನಗುತ್ತಾರೆ). ಶ್ರೀ ಅರವಿಂದರ ಬರಹಗಳಲ್ಲಿ ಒಂದು ವಾಕ್ಯವಿದೆ: "ದೈವೀಕೃಪೆ ಉತ್ತರ ನೀಡುತ್ತದೆ, ಆದರೆ ಅದು ಮಿಥ್ಯೆಯಲ್ಲಿ ಉತ್ತರ ನೀಡುತ್ತದೆಂದು ಯೋಚಿಸಬೇಡಿರಿ" ಅದು ಪ್ರಶಂಸನೀಯ ವಾಕ್ಯ. ಅವರು ಅದನ್ನು ತಿಳಿದುಕೊಂಡಿಲ್ಲ. ಅವರು ದೈವೀಸತ್ಯವನ್ನು ವಶದಲ್ಲಿಟ್ಟುಕೊಂಡವರು – ಮಿಥ್ಯೆ ಇತರರಿಗಾಗಿ ಇದೆ!

ಮತ್ತು ಈ ಅತಿ ಅಹಂಕಾರದಲ್ಲಿರುವ ಮನಸ್ಸು ಏನನ್ನೂ ಅರ್ಥ–ಮಾಡಿಕೊಂಡಿರುವುದಿಲ್ಲ, ಅದು ತನ್ನ ಎಲ್ಲ ಸಾಮರ್ಥ್ಯಪೂರ್ಣ ಜ್ಞಾನದಿಂದ ದೃಢೀಕರಿಸುತ್ತದೆ, ಅದು ಎಷ್ಟೊಂದು ಹಾಸ್ಯಾಸ್ಪದವಾದದ್ದು!

(ಮೌನ)

ಅದು ಎಲ್ಲ ಸಾಧ್ಯತೆಗಳ ಹಾಗೂ ಅಸಾಧ್ಯತೆಗಳ, ಎಲ್ಲ ಕ್ಷಮತೆಗಳ ಹಾಗೂ ಅನರ್ಹತೆಗಳ ಗರಿಷ್ಠ ಮಟ್ಟದ ಉಪಯೋಗ; ಗರಿಷ್ಠ ಮಟ್ಟದ ಸಾಮರ್ಥ್ಯ ಹಾಗೂ ಗರಿಷ್ಠ ಮಟ್ಟದ ಕರುಣೆ ಇವುಗಳಲ್ಲಿ ಗರಿಷ್ಠ ಮಟ್ಟದ ಉಪಯೋಗ, ಹಾಗೆಯೇ ಒಂದು ಮುಗುಳ್ನಗು! ಮುಗುಳ್ನಗು ಮತ್ತು ಹಾಸ್ಯ ಪ್ರವೃತ್ತಿ, ಓಹ್! ಎಷ್ಟೊಂದು ಕರುಣೆಯಿರುವ, ಅದ್ಭುತವಾಗಿರುವ ಉಪಕಾರಿಬುದ್ಧಿಯ ವ್ಯಂಗ್ಯ ... ಈ ಅತಿ ಅಹಂಕಾರವಿರುವ ಮನಸ್ಸು ನಿಜವಾಗಿ ವಿಲಕ್ಷಣವಾದ ಗೋಚರ ಸಂಗತಿ, ಅದು ತನಗೆ ತಿಳಿಯದ್ದನ್ನು ಕುರಿತು ತೀರ್ಮಾನ ಕೈಕೊಳ್ಳುವುದರಲ್ಲಿ ಹಾಗೂ ತಾನು ಕಂಡಿರಲಾಗದುದನ್ನು ಕುರಿತು ನಿರ್ಧಾರ ಕೈಕೊಳ್ಳುವುದರಲ್ಲಿ ಸಮಯವನ್ನು ಕಳೆಯುತ್ತದೆ.

**(ಅನುಯಾಯಿಯೊಬ್ಬನೊಂದಿಗೆ ಮಾತುಕತೆ: 22, 1967)**

*

**ಇಡಿಯಾದ ದೈವೀಸತ್ಯದ ನಿರಾಕರಣೆಯೇ ಮಿಥ್ಯೆ**

ಈ ಇಡಿಯಾಗಿರುವಿಕೆಯಿಂದ ಯಾವುದೊಂದು ಅಂಶವನ್ನು ಪ್ರತ್ಯೇಕವಾಗಿ ಕೈಗೆತ್ತಿಕೊಂಡಾಗ, ಅದು ಎಷ್ಟೇ ಕೇಂದ್ರದಲ್ಲಿರುವಂತಹದು ಹಾಗೂ ಎಲ್ಲವನ್ನೂ ಒಳಗೊಳ್ಳುವಂತಹದು ಆಗಿದ್ದಾಗಲೂ ಅದನ್ನು ಏಕಮೇವ ಸತ್ಯವೆಂದು ದೃಢೀಕರಿಸಿದರೆ ಅದು ಅವಶ್ಯವಾಗಿ ಮಿಥ್ಯೆಯಾಗುತ್ತದೆ, ಏಕೆಂದರೆ ಆಗ ಅದು ಇಡೀ ದೈವೀಸತ್ಯದ ಉಳಿದ ಭಾಗವನ್ನು ನಿರಾಕರಿಸುತ್ತದೆ. ಇದೇ, ನಿಖರವಾಗಿ, ವಾದಾತೀತ ಮತತತ್ವದ ರಚನೆಯಲ್ಲಿರುತ್ತದೆ ಮತ್ತು ಈ ಕಾರಣದಿಂದಾಗಿಯೇ ಅದು ಅತ್ಯಂತ ಅಪಾಯಕಾರಿ ಮಾದರಿಯ ಮಿಥ್ಯೆ, ಏಕೆಂದರೆ ಪ್ರತಿಯೊಬ್ಬನೂ ಅದು ಏಕಮೇವ, ಪ್ರತ್ಯೇಕತೆ ಬಯಸುವ ಸತ್ಯವೆಂದು ದೃಢೀಕರಿಸುತ್ತಾನೆ. ಪರಿಪೂರ್ಣ, ಅನಂತ, ಸನಾತನ, ದೈವೀಸತ್ಯವನ್ನು ಕುರಿತು ಮನಸ್ಸು ಯೋಚಿಸಲಾರದು, ಅದು ಕೇವಲ ಸ್ಥಳ ವಿಸ್ತಾರದಲ್ಲಿದ್ದುದನ್ನು, ಲೌಕಿಕವಾದದ್ದನ್ನು ಹಾಗೂ ತುಂಡು ತುಂಡಾದದ್ದನ್ನು, ಸೀಮಿತವಾದದ್ದನ್ನು ಕಲ್ಪಿಸಿಕೊಳ್ಳಬಹುದು. ಹೀಗೆ ಮಾನಸಿಕ ಸ್ತರದಲ್ಲಿ ಪರಿಪೂರ್ಣ ದೈವೀಸತ್ಯ ಅನೇಕ ತುಂಡು ತುಂಡಾದ, ವೈರುಧ್ಯವಿರುವ ಸತ್ಯಗಳಿಗಾಗಿ ವಿಭಜನೆಗೊಳ್ಳುತ್ತದೆ, ಆ ಸತ್ಯಗಳು ಒಟ್ಟುಗೂಡಿ ಮೂಲ ದೈವೀಸತ್ಯವನ್ನು, ಸಾಧ್ಯವಿದ್ದಷ್ಟು ಒಳ್ಳೆಯ ರೀತಿಯಲ್ಲಿ ಮರು ಉತ್ಪಾದನೆ ಮಾಡಲು ಹೆಣಗುತ್ತವೆ, ಕಾರಣ ಪ್ರತಿಯೊಂದೂ, ಉಳಿದವುಗಳನ್ನು ಪ್ರತ್ಯೇಕವಾಗಿರಿಸಿ, ತಾನೇ ಏಕಮೇವ ಸತ್ಯವೆಂದು ದೃಢೀಕರಿಸಲು ಪ್ರಯತ್ನಿಸುತ್ತದೆ.



ಅನೇಕತೆಯಿರುವ ಒಟ್ಟಾಗಿರುವಿಕೆಯ ಮೂಲಕ ಅವು ಅನಂತ, ಸನಾತನ ಮತ್ತು ಪರಿಪೂರ್ಣ ದೈವೀಸತ್ಯವನ್ನು ಸಂಭೂತಿಯಲ್ಲಿ ಅಭಿವ್ಯಕ್ತಪಡಿಸುತ್ತವೆ – ಆ ಕಾರಣದಿಂದಾಗಿ ಅವು ಇಡಿಯಾದ ದೈವೀಸತ್ಯವನ್ನು ನಿರಾಕರಿಸುತ್ತವೆ.

**(CWM, 14/198)**

*

**ಮಿಥ್ಯೆ ಮತ್ತು ಸುಳ್ಳು ಇವುಗಳ ನಡುವಿರುವ ವ್ಯತ್ಯಾಸ**

ಮಿಥ್ಯೆ ಮತ್ತು ಸುಳ್ಳು ಇವುಗಳ ನಡುವೆ ಅಪಾರ ವ್ಯತ್ಯಾಸವಿದೆ. ಜನರು ಸುಳ್ಳು ಹೇಳಿದಾಗ, ಅವರ ಬಾಯಿಂದ ಶಬ್ದಗಳು ಹೊರಬರುತ್ತವೆ ಮತ್ತು ಅವು ನಿಜವಾದ ವಾಸ್ತವ ಸಂಗತಿಗೆ ವಿರುದ್ಧವಾಗಿರುತ್ತವೆ ಇಲ್ಲವೆ ಆ ಸಂಗತಿಯನ್ನು ನಿರಾಕರಿಸುತ್ತವೆ. ಉದಾಹರಣೆಗೆ ನೀವೆಲ್ಲಿಗೋ ಹೋಗಿ ಬಂದಾಗ ಅಲ್ಲಿಗೆ ಹೋಗಿದ್ದನ್ನು ನಿರಾಕರಿಸಿದರೆ, ಇಲ್ಲವೆ ನೀವೇನನ್ನೋ ಕೈಕೊಂಡಿದ್ದರ ವಾಸ್ತವ ಸಂಗತಿಯನ್ನು ನಿರಾಕರಿಸಿದರೆ – ಅದು ಸುಳ್ಳು ಹೇಳುವುದಾಗಿರುತ್ತದೆ. ಆದರೆ ಸುಳ್ಳುಗಳಿಗೆ ಬಲವಿರುವುದಿಲ್ಲ. ಸುಳ್ಳುಗಳು ಯಾವಾಗಲೂ ದೊಡ್ಡ ದೌರ್ಬಲ್ಯದ ಲಕ್ಷಣಗಳಾಗಿರುತ್ತವೆ ಮತ್ತು ಅಂತಹದು ರೂಢಿಗತವಾದಾಗ ಅದೊಂದು ದೊಡ್ಡ ವಂಚನೆ ಮಾಡುತ್ತಿರುವುದರ ಕುರುಹು.

ಮಿಥ್ಯೆ ಬಹಳ ಗಂಭೀರವಾದ ಏನೋ ಒಂದು. ಜಗತ್ತು, ಅದಿರುವ ಹಾಗೆ, ಮಿಥ್ಯೆಯ ಸ್ಥಿತಿಯಲ್ಲಿದೆ, ಅದು ಸನಾತನ ದೈವೀಸತ್ಯವನ್ನು ನಿರಾಕರಿಸುತ್ತದೆ. ಮಿಥ್ಯೆಯ ಮೂರು ಮುಖ್ಯ ವರ್ಗಗಳಿವೆ:

1. ದೈವೀಸತ್ಯಕ್ಕಾಗಿ ಅಭೀಪ್ಸೆಪಡುವ ಜನರಿರುತ್ತಾರೆ, ಆದರೆ ಅವರು ದೈವೀಸತ್ಯ ಮತ್ತು ಮಿಥ್ಯೆ ಇವುಗಳ ನಡುವಿರುವ ವ್ಯತ್ಯಾಸವನ್ನು ಗುರುತಿಸಲು ತಮ್ಮ ಅಭೀಪ್ಸೆಯಲ್ಲಿ ಸಾಕಷ್ಟು ನಿಷ್ಕಪಟರಾಗಿರುವುದಿಲ್ಲ, ಅವರು ಯಾವಾಗಲೂ ತೊಂದರೆ ಹಾಗೂ ದುಃಸ್ಥಿತಿಗಳಲ್ಲಿ ಸಿಕ್ಕಿಹಾಕಿಕೊಳ್ಳುತ್ತಾರೆ ಮತ್ತು ದೈವೀಸತ್ಯದತ್ತ ಮುನ್ನಡೆಸುವ ಮಾರ್ಗದಿಂದ ಹೊರಬೀಳುತ್ತಾರೆ.
2. ಎರಡನೆಯದು ಬಹಳ ಅಪಾಯಕಾರಿ ವರ್ಗ. ಈ ವರ್ಗದ ಜನರು ದೈವೀಸತ್ಯ ಮತ್ತು ಮಿಥ್ಯೆ ಇವುಗಳ ನಡುವಿರುವ ಭೇದವನ್ನು ಸರಿಯಾಗಿ ಗುರುತಿಸಬಲ್ಲರು, ಅವರಿಗೆ ದೈವೀಸತ್ಯ ಒಳ್ಳೆಯದೆಂದು ತಿಳಿದಿರುತ್ತದೆ, ಆದರೆ ಪ್ರಲೋಭನೆಯನ್ನು ವಿರೋಧಿಸಲು ಅವರಿಗೆ ಬಲವಿರುವುದಿಲ್ಲ ಮತ್ತು ಸತತ ಮಿಥ್ಯೆಯಲ್ಲಿ ಬಿದ್ದುಬಿಡುತ್ತಾರೆ.

3. ಕೊನೆಯದು ಎಲ್ಲದಕ್ಕಿಂತಲೂ ಹೆಚ್ಚು ಅಪಾಯಕಾರಿಯಾದ ವರ್ಗ. ದೈವೀಸತ್ಯದ ಬಗ್ಗೆ ಅರಿವುಳ್ಳ ಜನರಿರುತ್ತಾರೆ, ಆದರೆ ಆ ದೈವೀಸತ್ಯವನ್ನು ಗುರುತಿಸಲು ನಿರಾಕರಿಸುತ್ತಾರೆ ಮತ್ತು ಉದ್ದೇಶಪೂರ್ವಕವಾಗಿ ಮಿಥ್ಯೆಯನ್ನು ಆಯ್ದುಕೊಳ್ಳುತ್ತಾರೆ. ದೈವೀಸತ್ಯದ ಬಗ್ಗೆ ಅವರಲ್ಲಿ ಒಂದು ಬಗೆಯ ದ್ವೇಷವಿರುತ್ತದೆ ಮತ್ತು ಆ ಸತ್ಯವನ್ನು ಭೀಕರವಾಗಿ ತಿರಸ್ಕರಿಸುತ್ತಾರೆ.

ಸನಾತನ ಯಾದಿಯಲ್ಲಿ ಇಂತಹವರನ್ನು "ತಪ್ಪಿಸಿಕೊಂಡ ಆತ್ಮಗಳು" ಎಂದು ಗುರುತಿಸಬಹುದು. – 'ಸಾವಿತ್ರಿ'ಯಲ್ಲಿ ಇಂತಹರನ್ನು ಕುರಿತು ಹೇಳಲಾಗಿದೆ:

'ಆತ್ಮದ ಏಕೈಕ ಅವಕಾಶವನು ಕಾಲಗತಿಯಲಿ ಕಳೆದುಕೊಂಡು
ಹೀಗೆ ಮನುಷ್ಯ ಸನಾತನನ ಮಾರ್ಗದ ಮೇಲೆ ಪತನಗೊಳ್ಳಬಹುದು.
ಮತ್ತು ಕಾದುಕೊಂಡಿರುವ ದೇವತೆಗಳಿಗೆ ಅವನ ಬಗೆಗಿನ ಯಾವ
ವಾರ್ತೆಯೂ ತಲುಪದು,
ಆತ್ಮಗಳ ದಾಖಲೆ ಪುಸ್ತಕದಲ್ಲಿ ಅವನನ್ನು "ತಪ್ಪಿಸಿಕೊಂಡವನು" ಎಂದು
ಬರೆಯಲಾಗುವುದು.

**'ಸಾವಿತ್ರಿ' ಪು: 210**

ದೈವೀಸತ್ಯವನ್ನು ನಿರಾಕರಿಸಿ ಮಿಥ್ಯೆಯನ್ನು ಆಯ್ದುಕೊಳ್ಳುವ ಜನರು ಅತಿ ಕಡಿಮೆ ಸಂಖ್ಯೆಯಲ್ಲಿದ್ದಾರೆ. ಇದೊಂದು ಸಂತೋಷಕರ ಸಂಗತಿ.

ಸಹಜವಾಗಿ ಸದ್ಭಾವನೆಯುಳ್ಳ, ಸದುದ್ದೇಶವುಳ್ಳ, ಒಳ್ಳೆಯ ಅಭೀಪ್ಸೆ ಹೊಂದಿದ ಅನೇಕ ಜನರಿದ್ದಾರೆ, ಹಾಗಿದ್ದಾಗ್ಯೂ ಅವರು ಇನ್ನೂ ಮಿಥ್ಯೆಯಲ್ಲಿ ಜೀವಿಸುತ್ತಾರೆ, ಏಕೆಂದರೆ ದೈವೀಸತ್ಯಕ್ಕಾಗಿ ಹೋರಾಡುವ ಬಲ ಅವರಲ್ಲಿಲ್ಲ. ಸತತ ಜಾಗರೂಕತೆಯಿಂದಿದ್ದು ಪ್ರತಿಕ್ರಿಯಿಸದೆ ಹಾಗೆಯೇ ಸಾಗಿ ಹೋಗಲು ನಿಮ್ಮನ್ನು ನೀವು ಬಿಟ್ಟುಕೊಟ್ಟರೆ ಮಿಥ್ಯೆಯಲ್ಲಿ ಜೀವಿಸಬೇಕಾದ ಬಂಧನಕ್ಕೆ ಒಳಗಾಗುತ್ತೀರಿ, ಏಕೆಂದರೆ ಈ ಜಗತ್ತು ಮಿಥ್ಯೆಯ ಜಗತ್ತಾಗಿದೆ.

**('Mother You Said So' by Huta) – ಶ್ರೀಮಾತೆ**

*

**ಎಪ್ರಿಲ್ 18, 1932**

ಅತಿಮಾನಸ ದೈವೀಸತ್ಯವಾಗಿದೆಯಷ್ಟೇ ಅಲ್ಲ, ಆದರೆ ಅದು ಮಿಥ್ಯೆಯ ನಿರಾಕರಣೆ ಕೂಡ ಆಗಿದೆ. ಮಿಥ್ಯೆಗೆ ಎಡೆಗೊಡುತ್ತಿರುವ ಪ್ರಜ್ಞೆಯಲ್ಲಿ ಅತಿಮಾನಸ ಎಂದಿಗೂ ಕೆಳಗಿಳಿದು ಬರುವುದಿಲ್ಲ, ನೆಲೆಸುವುದಿಲ್ಲ ಮತ್ತು ಪ್ರಕಟವಾಗುವುದಿಲ್ಲ.



ಮಿಥ್ಯೆಯನ್ನು ಜಯಿಸುವುದಕ್ಕಾಗಿ ಇರುವ ಮೊದಲ ನಿಬಂಧನೆ, ಸ್ವಾಭಾವಿಕವಾಗಿ, ಸುಳ್ಳು ಹೇಳುವುದನ್ನು ನಿಲ್ಲಿಸುವುದಾಗಿದೆ, ಆದಾಗ್ಯೂ ಇದು ಕೇವಲ ಪ್ರಾಥಮಿಕ ಸ್ವರೂಪದ ಹೆಜ್ಜೆ. ಗುರಿಯನ್ನು ಸಿದ್ಧಿಸಿಕೊಳ್ಳಬೇಕೆಂದಿದ್ದರೆ, ಸತ್ತೆಯಲ್ಲಿ ಪರಿಪೂರ್ಣ ಹಾಗೂ ಸಮಗ್ರ ನಿಷ್ಕಾಪಟ್ಯವನ್ನು ಕೊನೆಗೆ ಸ್ಥಾಪಿಸಬೇಕಾಗುತ್ತದೆ.

**(CWM, 15/90) – ಶ್ರೀಮಾತೆ**

*

## ದೈವೀಸತ್ಯದ ಮಾರ್ಗ

**ನೀವು ದೈವೀಸತ್ಯದ ಉಪಕರಣವಾಗಲು ಬಯಸಿದರೆ**

ನೀವು ದೈವೀಸತ್ಯದ ಉಪಕರಣವಾಗಲು ಬಯಸಿದರೆ, ನೀವು ಯಾವಾಗಲೂ ಸತ್ಯವಾದದ್ದನ್ನು ನುಡಿಯಬೇಕು, ಮಿಥ್ಯೆಯದನ್ನಲ್ಲ. ಆದರೆ ಇದರರ್ಥ ಪ್ರತಿಯೊಬ್ಬನಿಗೆ ಪ್ರತಿಯೊಂದನ್ನು ಹೇಳಬೇಕಾಗಿರುವುದಿಲ್ಲ. ಮೌನದಲ್ಲಿದ್ದುಕೊಳ್ಳುವುದರ ಮೂಲಕ, ಮಾತನಾಡುವುದನ್ನು ನಿರಾಕರಿಸುವುದರ ಮೂಲಕ ಸತ್ಯವನ್ನು ಅಡಗಿಸಿಡುವುದಕ್ಕೆ ಅನುಮತಿ ಇದೆ, ಏಕೆಂದರೆ ಸತ್ಯವನ್ನು ಕೇಳುವುದಕ್ಕೆ ತಯಾರಿ ಮಾಡಿಕೊಳ್ಳದೆ ಇದ್ದವರು ಇಲ್ಲವೆ ಸತ್ಯವನ್ನು ವಿರೋಧಿಸುವವರು ಅಪಾರ್ಥ ಮಾಡಿಕೊಳ್ಳಬಹುದು ಇಲ್ಲವೆ ದುರುಪಯೋಗ ಮಾಡಬಹುದು – ಅಂತಹದು ಆ ಸತ್ಯವನ್ನು ವಿರೂಪಗೊಳಿಸುವುದಕ್ಕೆ ಇಲ್ಲವೆ ಪೂರ್ತಿ ಮಿಥ್ಯೆಯದನ್ನಾಗಿ ಮಾಡುವುದಕ್ಕೆ ಪ್ರಾರಂಭಬಿಂದುವನ್ನಾಗಿ ಮಾಡಿಕೊಳ್ಳಬಹುದು. ಆದರೆ ಮಿಥ್ಯೆಯನ್ನೇ ನುಡಿಯುವುದು ಬೇರೊಂದು ವಿಷಯ. ಹಾಸ್ಯಕ್ಕಾಗಿಯೂ ಕೂಡ ಅದರ ಉಪಯೋಗ ಮಾಡಬಾರದು, ಏಕೆಂದರೆ ಅದಕ್ಕೆ ಪ್ರಜ್ಞೆಯನ್ನು ಕೆಳ ಸ್ತರಕ್ಕಿಳಿಸುವ ಪ್ರವೃತ್ತಿಯಿರುತ್ತದೆ. ಕೊನೆಯದನ್ನು ಕುರಿತು ಹೇಳುವುದಾದರೆ ಅದು ಅತ್ಯುಚ್ಚ ನಿಲುವನ್ನು ಹೊಂದಿರುವಂತಹದು, – ಮನುಷ್ಯ ಮನಸ್ಸಿನಿಂದ ಅರಿತುಕೊಂಡ ಸತ್ಯ ಸಾಕಾಗುವಷ್ಟಿರುವುದಿಲ್ಲ, ಏಕೆಂದರೆ ಮನಸ್ಸಿನ ವಿಚಾರ ದೋಷಯುಕ್ತವಾಗಿರ–ಬಹುದು ಇಲ್ಲವೆ ಸಾಕಾಗದೆ ಇರಬಹುದು.

**(SABCL, 23/1559)**

*

**ಮಾತಿನಲ್ಲಿ ಹಾಗೂ ಯೋಚನೆಯಲ್ಲಿ ದೈವೀಸತ್ಯ ಬಹಳ ಮಹತ್ವದ್ದಾಗಿದೆ**

ಹೌದು, ಸಹಜವಾಗಿ, ಸಾಧಕನಿಗೆ ಅವನ ಮಾತಿನ ಸಂಪೂರ್ಣ ಸತ್ಯ ಬಹಳ ಮಹತ್ವದ್ದು, ಮತ್ತು ಪ್ರಜ್ಞೆಯಲ್ಲಿ ದೈವೀಸತ್ಯವನ್ನು ತರುವುದಕ್ಕೆ ಬಹಳ ಸಹಾಯಕವಾದದ್ದು. ಅದೇ ಕಾಲಕ್ಕೆ ಮಾತನಾಡುವುದನ್ನು ನಿಯಂತ್ರಿಸುವುದು ಕಠಿಣ, ಏಕೆಂದರೆ ಜನರು ತಮಗೆ ಹೊಳೆದದ್ದನ್ನು ಹೇಳುವ ರೂಢಿಯನ್ನಿರಿಸಿ–ಕೊಂಡಿರುತ್ತಾರೆ, ಅವರು ಹೇಳುವುದರ ಮೇಲ್ವಿಚಾರಣೆ ಮಾಡುವ, ಅದನ್ನು ನಿಯಂತ್ರಿಸುವ ರೂಢಿ ಅವರಲ್ಲಿರುವುದಿಲ್ಲ. ಮಾತನ್ನು ಕುರಿತು ಯಾಂತ್ರಿಕವಾದ ಏನೋ ಒಂದಿದೆ, ಅದನ್ನು ಪ್ರಜ್ಞೆಯ ಅತ್ಯುಚ್ಚ ಭಾಗದ ಸ್ತರಕ್ಕೆ ತಂದುಕೊಳ್ಳುವುದು ಎಂದಿಗೂ ಸುಲಭವಾಗಿರುವುದಿಲ್ಲ. ಆ ಕಾರಣದಿಂದಾಗಿ ಮಾತಿನಲ್ಲಿ ಮಿತವಾಗಿರುವುದು ಸಹಾಯಕವಾಗುತ್ತದೆ. ಅದು ಹೆಚ್ಚು ಉದ್ದೇಶಪೂರ್ವಕ ನಿಯಂತ್ರಣಕ್ಕೆ ಸಹಾಯಕವಾಗುತ್ತದೆ ಮತ್ತು ನಾಲಿಗೆ ಏನೋ ಒಂದರೊಡನೆ ಓಡುತ್ತ ಹೋಗಿ ತನಗೆ ಇಷ್ಟವಾದುದನ್ನು ಕೈಕೊಳ್ಳುವುದಕ್ಕೆ ಅದು ತಡೆ ಒಡ್ಡುತ್ತದೆ.

**(SABCL, 24/1553)**

*

**ಸಾಮಾನ್ಯವಾಗಿ ಕಂಡುಬರುವ ಚಾರಿತ್ರ್ಯದ ದೋಷ**

ನೀನು ಹೇಳುತ್ತಿರುವ ಚಾರಿತ್ರ್ಯದ ದೋಷ ಸಾಮಾನ್ಯವಾಗಿ ಕಂಡು–ಬರುವಂತಹದು ಮತ್ತು ಮಾನವ ಸ್ವಭಾವದಲ್ಲಿ, ಬಹುಮಟ್ಟಿಗೆ, ವಿಶ್ವಂಭರವಾದದ್ದು. ತನ್ನ ಜಂಬದ ಅಹಂಭಾವಕ್ಕೆ, ಆದ್ಯತೆಗಳಿಗೆ, ಬಯಕೆಗಳಿಗೆ ಪ್ರೋತ್ಸಾಹ ನೀಡಲು ಇಲ್ಲವೆ ಒಂದಿಷ್ಟು ಅನುಕೂಲತೆ ದೊರಕಿಸಲು, ಇಲ್ಲವೆ ಬಯಸಿದ ಏನೋ ಒಂದನ್ನು ಪಡೆಯಲು ಅಸತ್ಯ ನುಡಿಯುವುದು ಇಲ್ಲವೆ ಕನಿಷ್ಠಪಕ್ಷ ಉತ್ಪ್ರೇಕ್ಷೆ ಮಾಡುವುದು, ಇಲ್ಲವೆ ತಗ್ಗಿಸಿ ನುಡಿಯುವುದು ಇಂತಹದೆಲ್ಲದಕ್ಕೆ ಪ್ರಚೋದನೆ ಬಹಳ ಸರ್ವಸಾಮಾನ್ಯವಾದದ್ದು. ಆದರೆ ಮನುಷ್ಯ ಸ್ವಭಾವವನ್ನು ಬದಲಿಸುವುದರಲ್ಲಿ ಯಶಸ್ಸು ಕಂಡುಕೊಳ್ಳಬೇಕೆಂದಿದ್ದರೆ ಅವನು ಸತ್ಯವಾದದದ್ದನ್ನು ನುಡಿಯಬೇಕು.

ಸ್ವಭಾವದಲ್ಲಿ ಏನನ್ನು ಬದಲಿಸಬೇಕಾಗಿದೆ ಎಂಬುದರ ಬಗ್ಗೆ ಪ್ರಜ್ಞಾವಂತ–ನಾಗುವುದು ಬದಲಾಗಬೇಕಾದುದರತ್ತ ಮೊದಲ ಹೆಜ್ಜೆ ಇರಿಸಿದಂತೆ. ಆದರೆ ಮನುಷ್ಯ ನಿರಾಶನಾಗದೆ ಇಲ್ಲವೆ "ಅದು ನಿರರ್ಥಕ" ಇಲ್ಲವೆ "ನಾನು ಬದಲಾಗಲಾರೆ" ಎಂದು ಯೋಚಿಸದೆ ಈ ವಿಷಯಗಳನ್ನು ಅವಲೋಕಿಸಬೇಕು.



ಚೈತ್ಯಸತ್ತೆ ಜಾಗ್ರತವಾಗಿದ್ದರೆ, ತನ್ನ ಹಿಂದೆ ಶ್ರೀಮಾತೆಯವರ ಪ್ರಜ್ಞೆ ಹಾಗೂ ಶಕ್ತಿಗಳನ್ನಿರಿಸಿಕೊಂಡು, ಅವು ನಿನ್ನಲ್ಲಿ ಕಾರ್ಯ ಮಾಡುತ್ತಿದ್ದಾಗ, ಚೈತ್ಯಸತ್ತೆ ನಿನ್ನನ್ನು ಮುನ್ನಡೆಸುತ್ತಿದ್ದರೆ ಸ್ವಭಾವದಲ್ಲಿ ಯಾವುದೂ ಅಸಾಧ್ಯವಾಗಿರುವುದಿಲ್ಲ. ಅದು ಈಗ ಸಂಭವಿಸುತ್ತಿದೆ. ಎಲ್ಲವನ್ನೂ ಕೈಕೊಳ್ಳಲಾಗುವುದು ಎಂಬುದರ ಬಗ್ಗೆ ನಿಶ್ಚಿತತೆಯಿಂದಿರು.

**(SABCL, 24/1558)**

*

**ಅಜ್ಞಾನದಿಂದ ಸುಳ್ಳು ಹೇಳುವುದು ಮತ್ತು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುವುದು ಇವುಗಳ ನಡುವಿರುವ ವ್ಯತ್ಯಾಸ**

ಮೊದಲನೆಯದಾಗಿ ಮಿಥ್ಯೆಯೆಂದು ನಂಬಿಕೊಂಡದ್ದನ್ನು ಇಲ್ಲವೆ ತಿಳಿದುಕೊಂಡದ್ದನ್ನು ಸತ್ಯವೆಂದು ನುಡಿಯುವುದು ಮತ್ತು ಆತ್ಮಸಾಕ್ಷಿಯಾಗಿ ಸತ್ಯವೆಂದು ನಂಬಿ ಸತ್ಯವಲ್ಲದ್ದನ್ನು ನುಡಿಯುವುದು ಇವುಗಳ ನಡುವೆ ದೊಡ್ಡ ವ್ಯತ್ಯಾಸವಿದೆ. ಮೊದಲನೆಯದು, ಸ್ಪಷ್ಟವಾಗಿ, ಸತ್ಯದ ಮನೋಭಾವದ ವಿರುದ್ಧ ಹೋಗುವಂತಹದು, ಎರಡನೆಯದು ಸತ್ಯಕ್ಕೆ ಗೌರವಾರ್ಪಣೆ ಮಾಡುತ್ತದೆ. ಮೊದಲನೆಯದು ಉದ್ದೇಶಪೂರ್ವಕವಾದ ಮಿಥ್ಯೆ, ಎರಡನೆಯದು ಅತಿ ಹೆಚ್ಚು ಕೆಟ್ಟದ್ದೆಂದರೆ ಒಂದು ದೋಷ ಇಲ್ಲವೆ ಅಜ್ಞಾನ.

ಇದು ವ್ಯಾವಹಾರಿಕ ದೃಷ್ಟಿಕೋನದಿಂದ ಸತ್ಯ ನುಡಿಯುವುದಾಗಿದೆ. ಉಚ್ಚತರ ದೈವೀಸತ್ಯದ ದೃಷ್ಟಿಕೋನದಿಂದ ಪ್ರಜ್ಞೆಯ ಪ್ರತಿಯೊಂದು ಸ್ತರಕ್ಕೆ ಅದರದೇ ಮಾನದಂಡ ಇರುತ್ತದೆ ಎಂಬುದನ್ನು ಮರೆಯಬಾರದು – ಮನಸ್ಸಿಗೆ ಸತ್ಯವೆಂದು ತೋರಿಬಂದದ್ದು ಉಚ್ಚತರ ಪ್ರಜ್ಞೆಗೆ ಕೇವಲ ಭಾಗಶಃ ಸತ್ಯವಾಗಿರಬಹುದು, ಆದರೆ ಮನಸ್ಸು ಭಾಗಶಃ ಸತ್ಯದ ಮೂಲಕ ಆಚೆಗಿರುವ ಹೆಚ್ಚು ವಿಸ್ತಾರವಾದ ಹಾಗೂ ಹೆಚ್ಚು ಪರಿಪೂರ್ಣವಾದ ಸತ್ಯವನ್ನು ತಲುಪಬೇಕಾಗಿರುತ್ತದೆ. ಮನಸ್ಸಿಗೆ ಅವಶ್ಯವಾದದ್ದೆಂದರೆ ಅದು ತೆರೆದಿರಿಸಿಕೊಂಡಿರಬೇಕು, ಮತ್ತು ನಮ್ರವಾಗಿರಬೇಕು, ಉಚ್ಚತರವಾದದ್ದು ಬಂದಾಗ ಅದನ್ನು ಗುರುತಿಸಲು ತಯಾರಾಗಿರಬೇಕು, ನಿಮ್ನತರವಾದದ್ದು ತನ್ನದೇ ಎಂಬ ಭಾವನೆಯಿಂದ ಅದಕ್ಕೆ ಅಂಟಿಕೊಳ್ಳಬಾರದು. ಪ್ರಾಣಿಕದ ಆಸೆಗಳು ಹಾಗೂ ಭಾವೋದ್ರೇಕಗಳು ದೈವೀ ಪ್ರಕಾಶವನ್ನು ಕುರುಡಾಗಿಸುವುದಕ್ಕೆ, ಇಲ್ಲವೆ ವಸ್ತು–ವಿಷಯಗಳನ್ನು ತಿರುಚುವುದಕ್ಕೆ ಅನುವು

ಮಾಡಿಕೊಡಬಾರದು. ಒಮ್ಮೆ ಉಚ್ಚತರ ಪ್ರಜ್ಞೆ ಕಾರ್ಯಕೈಕೊಳ್ಳಲು ಪ್ರಾರಂಭಿಸಿದಾಗ ತೊಂದರೆ ಕುಗ್ಗುತ್ತದೆ ಮತ್ತು ಸತ್ಯದಿಂದ ಶ್ರೇಷ್ಠತರ ಸತ್ಯದತ್ತ ಸ್ಪಷ್ಟ ಪ್ರಗತಿಯಿರುತ್ತದೆ.

**(SABCL, 24/1560)** – **ಶ್ರೀ ಅರವಿಂದರು**

*

**ಸುಳ್ಳುಗಾರ ಸಂಗಾತಿಗಳ ಬಗ್ಗೆ ಎಚ್ಚರದಿಂದಿರಿ**

ಹಗಲು ಹೊತ್ತು ಪ್ರಾರಂಭವಾಗುತ್ತಿರುವ ಸಮಯದಲ್ಲಿ ಈ ಚಿಕ್ಕ ಪ್ರಯೋಗ ಮಾಡಲು ಪ್ರಯತ್ನಿಸಿರಿ: "ನಾನು ಹೇಳುತ್ತಿರುವುದನ್ನು ಕುರಿತು ಯೋಚಿಸದೆ ಮಾತನಾಡುವುದಿಲ್ಲ" ಎಂದು ನಿಮಗೆ ಹೇಳಿಕೊಳ್ಳಿರಿ. ನೀವು ಹೇಳುತ್ತಿರುವುದೆಲ್ಲವನ್ನು ಕುರಿತು ನೀವು ಯೋಚಿಸುತ್ತೀರಿ ಎಂದು ನೀವು ನಂಬುತ್ತೀರಿ ಅಲ್ಲವೆ? ಅದು ಎಳ್ಳಷ್ಟೂ ಸತ್ಯವಾಗಿರುವುದಿಲ್ಲ. ನೀವು ಹೇಳಲು ಬಯಸಿದ ಶಬ್ದ ಹೊರಬರಲು ತಯಾರಾಗಿರುವುದನ್ನು ಮತ್ತು ಅದು ಹೊರಬರದಂತೆ ತಡೆಹಿಡಿಯಲು ನೀವು ಪ್ರಜ್ಞಾಪೂರ್ವಕವಾದ ಪ್ರಯತ್ನ ಮಾಡಬೇಕಾದ ಒತ್ತಾಯಕ್ಕೊಳಗಾಗುತ್ತೀರಿ ಎಂಬುದನ್ನು ಎಷ್ಟೋ ಸಲ ನೋಡುವಿರಿ.

ಸುಳ್ಳು ಹೇಳುವುದಕ್ಕೆ ಎಳ್ಳಷ್ಟೂ ಆಸ್ಪದ ಕೊಡದಂತೆ ಜಾಗರೂಕರಾಗಿದ್ದ ಜನರ ಪರಿಚಯ ನನಗಿತ್ತು. ಆದರೆ ಅವರು ಗುಂಪಿನಲ್ಲಿದ್ದಾಗ, ಸತ್ಯ ಮಾತನಾಡುವುದರ ಬದಲಾಗಿ, ಒಮ್ಮಿಂದೊಮ್ಮೆಗೆ ಸ್ವಯಂಪ್ರೇರಿತರಾಗಿ, ಸುಳ್ಳು ಮಾತನ್ನು ಹೇಳುತ್ತಿದ್ದರು. ಅವರಿಗೆ ಅದನ್ನು ಹೇಳುವ ಉದ್ದೇಶವಿರುತ್ತಿರಲಿಲ್ಲ. ಅದನ್ನು ಕೈಕೊಳ್ಳುವ ಮೊದಲು ಒಂದು ನಿಮಿಷದಷ್ಟು ಕಾಲದಲ್ಲಿ ಕೂಡ ಅವರು ಯೋಚಿಸಿರಲಿಲ್ಲ, ಆದರೆ "ಅದು ಹಾಗೆ" ಬಂದುಬಿಟ್ಟಿತು – ಏಕೆಂದರೆ ಅವರು ಸುಳ್ಳುಗಾರ ಸಂಗಾತಿಗಳ ಗುಂಪಿನಲ್ಲಿದ್ದರು. ಅಲ್ಲಿ ಮಿಥ್ಯೆಯ ಒಂದು ವಾತಾವರಣವಿತ್ತು ಮತ್ತು ಆ ರೋಗ ಅವರನ್ನು ಸರಳವಾಗಿ ಹಿಡಿದುಕೊಂಡಿತು.

ಹೀಗೆ ಕ್ರಮೇಣ, ನಿಧಾನ ಗತಿಯಲ್ಲಿ, ಪಟ್ಟುಹಿಡಿಯುತ್ತ, ಮೊಟ್ಟಮೊದಲಿಗೆ ಬಹಳ ಕಾಳಜಿಯಿಂದ, ಹೆಚ್ಚು ಲಕ್ಷ್ಯಗೊಡುತ್ತ ಮನುಷ್ಯ ಪ್ರಜ್ಞಾವಂತನಾಗುತ್ತಾನೆ, ತನ್ನನ್ನೇ ಅರಿತುಕೊಳ್ಳುವುದನ್ನು ಮತ್ತು ನಂತರ ತನ್ನ ಪ್ರಭುವಾಗುವುದನ್ನು ಕಲಿತುಕೊಳ್ಳುತ್ತಾನೆ.

**(CWM, 4/36–37)**

*



**ಮಿಥ್ಯೆಯ ಮೇಲೆ ಜಯ**

ಸದ್ಯ ಬಡ ಮನುಕುಲದ ಮೇಲೆ ಮಿಥ್ಯೆಯ ಪ್ರಭುಗಳು, ಬಹುಮಟ್ಟಿಗೆ ಸಂಪೂರ್ಣ ಆಳಿಕೆ ನಡೆಸುತ್ತಿದ್ದಾರೆ. ಮನುಷ್ಯನ ನಿಮ್ನತರ ಜೀವ–ಚೈತನ್ಯ, ನಿಮ್ನತರ ಪ್ರಾಣಿಕ ಸತ್ತೆ ಇವುಗಳಷ್ಟೇ ಅಲ್ಲದೆ ಅವನ ಇಡೀ ಮನಸ್ಸು ಅವರ ಆಳಿಕೆಯನ್ನು ಸ್ವೀಕರಿಸುತ್ತದೆ. ಅವರು ಪೂಜೆಗೊಳ್ಳುವ ರೀತಿಗಳು ಅನೇಕವಾಗಿವೆ, ಏಕೆಂದರೆ ಅವರು ತಮ್ಮ ಕುಟಿಲತೆಯಲ್ಲಿ ಅತ್ಯಂತ ಸೂಕ್ಷ್ಮ ಮತಿಯುಳ್ಳವರಾಗಿರುತ್ತಾರೆ ಮತ್ತು ತಮ್ಮ ಗುರಿಗಳನ್ನು ಅನೇಕ ರೀತಿಯಲ್ಲಿ ಪ್ರಲೋಭನಕ್ಕೊಳಪಡಿಸುವ ಮುಖವಾಡಗಳ ಮೂಲಕ ಅರಸುತ್ತಾರೆ. ಪರಿಣಾಮವಾಗಿ ಜನರು ಅವರ ಮಿಥ್ಯೆ ಅದೊಂದು ಸಂಪತ್ತು ಎನ್ನುವ ರೀತಿಯಲ್ಲಿ, ಜೀವನದಲ್ಲಿ ಕಂಡುಬರುವ ಅತ್ಯಂತ ಸುಂದರವಾದವುಗಳಿಗೆ ಕೊಡುವುದಕ್ಕಿಂತಲೂ ಅದಕ್ಕೆ ಹೆಚ್ಚಿನ ಮಾನ್ಯತೆ ಕೊಟ್ಟು ಅಂಟಿಕೊಳ್ಳುತ್ತಾರೆ, ಅದರ ರಕ್ಷಣೆ ಕುರಿತು ಶಂಕೆಯುಳ್ಳವರಾಗಿ ಅದನ್ನು ತಮ್ಮ ಆಳಾತಿ ಆಳದಲ್ಲಿ ಹುಗಿದಿಡುವ ಕಾಳಜಿ ವಹಿಸುತ್ತಾರೆ; ಆದರೆ ಅದನ್ನು ಹೊರಗೆ ತೆಗೆದುಕೊಂಡು ಬಂದು ಭಗವಂತನಿಗೆ ಅರ್ಪಿಸದೆ ಹೋದರೆ ಅವರು ನಿಜವಾದ ಸಂತೋಷವನ್ನು ಎಂದಿಗೂ ಕಂಡುಕೊಳ್ಳಲಾರರು. ಅದನ್ನು ಹೊರಗೆ ತರುವ ಮತ್ತು ದೈವೀ ಪ್ರಕಾಶಕ್ಕೆ ತೆರೆದಿಡುವ ಕ್ರಿಯೆಯೇ ಮಹತ್ವಪೂರ್ಣ ಪರಿವರ್ತನೆಯದಾಗಿರುತ್ತದೆ ಮತ್ತು ಕೊನೆಯ ವಿಜಯಕ್ಕೆ ಮಾರ್ಗ ಮಾಡಿಕೊಡುತ್ತದೆ. ಏಕೆಂದರೆ ಪ್ರತಿಯೊಂದು ಮಿಥ್ಯೆಯನ್ನು ಬರಿದುಮಾಡಿ ಇರಿಸುವುದೇ ಸ್ವತಃ ಒಂದು ವಿಜಯವಾಗಿರುತ್ತದೆ – ದೋಷ ಕುರಿತು ಪ್ರತಿಯೊಂದು ಒಪ್ಪಿಗೆ ಅಂಧಕಾರದ ಪ್ರಭುಗಳಲ್ಲೊಬ್ಬನನ್ನು ನಿರ್ಮೂಲ ಮಾಡಿದ ಹಾಗೆ. ಅದು ತನ್ನಲ್ಲಿ ತನಗೆ ಮಾಡಿಕೊಂಡ ಒಪ್ಪಿಗೆಯಾಗಿರಬಹುದು, ಆದರೆ ಅದು ಪರಿಪೂರ್ಣವಾಗಿ ಪ್ರಾಮಾಣಿಕವಾಗಿರಬೇಕು, ಸೂಕ್ಷ್ಮ ರೀತಿಯಲ್ಲಿ ವಿಷಾದ ಪಟ್ಟುಕೊಂಡು ಮುಂದಿನ ಕ್ಷಣದಲ್ಲಿ ಮರೆತುಬಿಡುವಂತಹದು ಆಗಿರಬಾರದು, ಮತ್ತು ತಪ್ಪನ್ನು ಪುನರಾವರ್ತಿಸದಂತೆ ಅದನ್ನು ಮುರಿದುಹಾಕಿಬಿಡುವ ನಿರ್ಧಾರ ಕೈಕೊಳ್ಳುವುದಕ್ಕೆ ಬಲವಿಲ್ಲದಂತಹದು ಆಗಿರಬಾರದು. ಇಲ್ಲವೆ ಆ ತಪ್ಪೊಪ್ಪಿಗೆ ಭಗವಂತನನ್ನು ಮೈವೆತ್ತ ಗುರುವಿನ ಎದುರು ಮಾಡಿಕೊಂಡದ್ದಾಗಿರಬಹುದು. ಗುರುವಿಗೆ ನೇರವಾಗಿ ಮಾಡಿಕೊಂಡ ನೇರ ವೈಯಕ್ತಿಕ ತಪ್ಪೊಪ್ಪಿಗೆಯ ಪರಿಣಾಮವಾಗಿ ಆ ನಿರ್ಧಾರ ಇನ್ನು ಮುಂದೆ ನಿಮ್ಮದಾಗಿ ಉಳಿದುಕೊಳ್ಳುವುದಿಲ್ಲ, ಏಕೆಂದರೆ ನೀವು ನಿಷ್ಕಪಟರಾಗಿದ್ದರೆ, ಭಗವಂತನ ಮಂಜೂರು ನಿಮ್ಮ ಪರವಾಗಿರುತ್ತದೆ. ಇದರರ್ಥ ಏನು ಎಂಬುದರ ಬಗ್ಗೆ ಒಂದು ವಿಚಾರವನ್ನು

ನಿಮಗೆ ತಿಳಿಸಲು, ನಾನು ಶ್ರೀ ಅರವಿಂದರನ್ನು ಪಾಂಡಿಚೇರಿಯಲ್ಲಿ ಮೊದಲಿಗೆ ಭೇಟಿ ಮಾಡಿದಾಗ ಆದ ಒಂದು ಅನುಭವವನ್ನು ಹೇಳುತ್ತೇನೆ. ಅತಿಮಾನಸದಲ್ಲಿ ವಿಷಯಗಳನ್ನು ನೋಡುತ್ತ ನಾನು ಆಳವಾದ ಏಕಾಗ್ರತೆಯಲ್ಲಿದ್ದೆ, ಇಲ್ಲಿ ಅವುಗಳಿರ–ಬೇಕಾಗಿತ್ತು, ಆದರೆ ಅವು ಯಾವುದೋ ಕಾರಣದಿಂದ ಪ್ರಕಟಗೊಳ್ಳುತ್ತಿರಲಿಲ್ಲ. ನಾನು ನೋಡಿದ್ದನ್ನು ಶ್ರೀ ಅರವಿಂದರಿಗೆ ಹೇಳಿದೆ ಮತ್ತು ಅವು ಪ್ರಕಟವಾಗುವವೇ ಎಂದು ಅವರನ್ನು ಕೇಳಿದೆ. ಅವರು ಸರಳವಾಗಿ "ಹೌದು" ಎಂದು ಹೇಳಿದರು. ಮತ್ತು ಕೂಡಲೆ ಅತಿಮಾನಸ ಪೃಥ್ವಿಯನ್ನು ಸ್ಪರ್ಶಿಸಿದ್ದನ್ನು, ಮತ್ತು ಸಿದ್ಧಿಸಿ–ಕೊಳ್ಳುತ್ತಿರುವುದನ್ನು ನೋಡಿದೆ! ಸತ್ಯವಾದದ್ದನ್ನು ನೈಜವಾಗಿಸುವ ಸಾಮರ್ಥ್ಯವನ್ನು ಸಾಕ್ಷಿಯಾಗಿ ನಾನು ನೋಡಿದ್ದು ಇದು ಮೊದಲ ಸಲವಾಗಿತ್ತು: ಇದೇ ಸಾಮರ್ಥ್ಯ ಸತ್ಯದ ಸಿದ್ಧಿ ನಿಮ್ಮಲ್ಲಾಗುವಂತೆ ಮಾಡುತ್ತದೆ, ಅದಕ್ಕಾಗಿ ನೀವು "ನಾನು ಈ ಮಿಥ್ಯೆಯನ್ನು ತೊಡೆದು ಹಾಕಬೇಕಾಗಿದೆ" ಎಂದು ಎಲ್ಲ ನಿಷ್ಕಾಪಟ್ಯದಿಂದ ಹೇಳುತ್ತ ಬರಬೇಕು, ಅದಕ್ಕೆ ನೀವು ದೊರಕಿಸುವ ಉತ್ತರ "ಹೌದು" ಎಂದಿರುತ್ತದೆ.

**(CWM, 3/141–42)** **– ಶ್ರೀಮಾತೆ**

*

## ಪ್ರತಿದಿನದ ಜೀವನದಲ್ಲಿ ದೈವೀಸತ್ಯ

**ಮಾತು ಮತ್ತು ಕ್ರಿಯೆಗಳಲ್ಲಿ ನೇರವಾಗಿ ನುಡಿಯುವುದು**

ಯಾವುದೇ ತೊಂದರೆಯಿಲ್ಲದೆ ಸತ್ಯವನ್ನು ಹೇಳಲು ಶಕ್ತರಾಗಲು ನಾವು ಕೈಕೊಳ್ಳುತ್ತಿರುವ ಯಾವುದನ್ನೂ ಅಡಗಿಸಿಡುವ ಆವಶ್ಯಕತೆ ಇಲ್ಲದ ಹಾಗೆ ಕಾರ್ಯ ಕೈಕೊಳ್ಳುವುದು, ಯಾವಾಗಲೂ, ಅತ್ಯಂತ ಒಳ್ಳೆಯದಾಗಿರುತ್ತದೆ. ಮತ್ತು ಅದಕ್ಕಾಗಿ ಪ್ರತಿಯೊಂದು ಕ್ಷಣದ ನಮ್ಮ ಕ್ರಿಯೆಯಲ್ಲಿ ನಾವು ಭಗವಂತನ ಸಾನ್ನಿಧ್ಯದಲ್ಲಿ ಇದ್ದೇವೆ ಎಂಬುದನ್ನು ನೆನಪಿನಲ್ಲಿ ಇಟ್ಟುಕೊಳ್ಳಬೇಕು.

ಏಕೆಂದರೆ ಮಾತಿನಲ್ಲಿ ಪ್ರಾಮಾಣಿಕವಾಗಿರುವುದು ಕ್ರಿಯೆಯಲ್ಲಿಯೂ ಕೂಡ ಪ್ರಾಮಾಣಿಕವಾಗಿರುವುದನ್ನು ಒತ್ತಾಯದಿಂದ ಬೇಡುತ್ತದೆ, ತಾನು ಹೇಳುವುದರಲ್ಲಿ ಮಿಥ್ಯೆಯನ್ನು, ಕೈಕೊಳ್ಳುತ್ತಿರುವ ಕಾರ್ಯದಲ್ಲಿ ಕಪಟಾಚಾರವನ್ನು ದೂರವಿರಿಸು–ವವನು ನಿಷ್ಕಪಟ ಮನುಷ್ಯನಾಗಿರುತ್ತಾನೆ.

**(CWM, 2/218)** **– ಶ್ರೀಮಾತೆ**

*



**ಸಮತೆ ಮತ್ತು ದೈವೀಸತ್ಯ**

ಸಮತೆ ಇನ್ನೊಂದು ವಿಷಯ – ಮನುಷ್ಯರು, ಅವರ ಸ್ವಭಾವ ಮತ್ತು ಕ್ರಿಯೆ, ಅವರನ್ನು ಚಲಿಸುವಂತೆ ಮಾಡುವ ಶಕ್ತಿಗಳು ಇವೆಲ್ಲವುಗಳನ್ನು ಸಮತೆಯ ದೃಷ್ಟಿಕೋನದಿಂದ ನೋಡುವುದು, ನೋಡುವುದರಲ್ಲಿ ಹಾಗೂ ತೀರ್ಮಾನದಲ್ಲಿ ಎಲ್ಲ ವೈಯಕ್ತಿಕ ಭಾವನೆಗಳನ್ನು ಮತ್ತು ಮನಸ್ಸಿನ ಎಲ್ಲ ಪಕ್ಷಪಾತವನ್ನು ದೂರ ಸರಿಸಿ ಅವರ ಬಗೆಗಿರುವ ಸತ್ಯವನ್ನು ನೋಡುವುದಕ್ಕೆ ಅದು ಮನುಷ್ಯನಿಗೆ ಸಹಾಯಕವಾಗುತ್ತದೆ. ವೈಯಕ್ತಿಕ ಭಾವನೆ ಯಾವಾಗಲೂ ವಿರೂಪಗೊಳಿಸುತ್ತದೆ ಮತ್ತು ಮನುಷ್ಯ ಜನರ ಕ್ರಿಯೆಗಳನ್ನು, ಕೇವಲ ಕ್ರಿಯೆಗಳನ್ನಷ್ಟೇ ಅಲ್ಲ, ಆದರೆ ಅವುಗಳ ಹಿಂದಿರುವ ವಿಷಯಗಳನ್ನು ವಿರೂಪಗೊಂಡ ಭಾವನೆಯಿಂದ ನೋಡುವಂತೆ ಮಾಡುತ್ತದೆ, ಬಹಳಷ್ಟು ಸಲ ಕ್ರಿಯೆಗಳ ಹಿಂದೆ ಅಂತಹದೇನೂ ಇರುವುದಿಲ್ಲ. ತಪ್ಪಿಸಬಹುದಾಗಿದ್ದ ತಪ್ಪು ತಿಳಿವಳಿಕೆ ಮತ್ತು ತಪ್ಪು ತೀರ್ಮಾನ ಪರಿಣಾಮಗಳನ್ನುಂಟು ಮಾಡುತ್ತವೆ; ಕಡಿಮೆ ಪರಿಣಾಮ ಬೀರಬಹುದಾಗಿದ್ದ ವಿಷಯಗಳು ಪರಿಮಾಣದಲ್ಲಿ ಭವ್ಯವಾದವುಗಳಾಗುವಂತೆ ಮಾಡುತ್ತವೆ. ಜೀವನದಲ್ಲಿ ಈ ಬಗೆಯ ದುಷ್ಪರಿಣಾಮರೂಪದಲ್ಲಿ ಸಂಭವಿಸಿದವುಗಳಲ್ಲಿ ಅರ್ಧ ಈ ಕಾರಣದಿಂದ ಸಂಭವಿಸಿದ್ದವು ಎಂಬುದನ್ನು ನಾನು ನೋಡಿದ್ದೇನೆ. ಆದರೆ ಸಾಮಾನ್ಯ ಜೀವನದಲ್ಲಿ ವೈಯಕ್ತಿಕ ಭಾವನೆ ಮತ್ತು ಸೂಕ್ಷ್ಮ ಸಂವೇದನೆ ಮಾನವ ಸ್ವಭಾವದಲ್ಲಿ ಸತತ ಇರುವ ಭಾಗದಲ್ಲಿರುತ್ತವೆ, ಮತ್ತು ಅಲ್ಲಿ ಸ್ವ–ಸಂರಕ್ಷಣೆಗಾಗಿ ಅವಶ್ಯವಾಗಿರಬಹುದು, ಆದಾಗ್ಯೂ ಅಲ್ಲಿಯೂ ಕೂಡ ಮನುಷ್ಯರು ಹಾಗೂ ವಿಷಯಗಳು ಇವುಗಳತ್ತ ಸಮತೆಯ ಮನೋಭಾವ ಹೊಂದಿರುವುದು ರಕ್ಷಣೆಗಾಗಿ ಒಳ್ಳೆಯ ರೀತಿಯಾಗಿರುತ್ತದೆ ಎಂದು ನನಗನಿಸುತ್ತದೆ. ಆದರೆ ಸಾಧಕನಿಗೆ ಅವುಗಳ ಮೇಲೆ ಜಯ ಸಾಧಿಸುವುದು, ಅದಕ್ಕಿಂತಲೂ ಹೆಚ್ಚಾಗಿ ಆತ್ಮದ ಸ್ಥಿರ ಬಲದಲ್ಲಿ ಜೀವಿಸುವುದು ಅವನ ಪ್ರಗತಿಯ ಸಾರಭೂತ ಭಾಗ.

ಆಂತರಿಕ ಪ್ರಗತಿಗಾಗಿ ಮೊದಲ ನಿಬಂಧನೆ ಎಂದರೆ ಇದ್ದುದೆಲ್ಲವನ್ನೂ, ಸ್ವಭಾವದ ಯಾವುದೇ ಭಾಗದಲ್ಲಿ ಆಗಿದ್ದ ತಪ್ಪು ಚಲನೆಯನ್ನು – ತಪ್ಪು ವಿಚಾರ, ತಪ್ಪು ಭಾವನೆ, ತಪ್ಪು ಮಾತು, ತಪ್ಪು ಕ್ರಿಯೆ ಇಂತಹವುಗಳನ್ನು ಗುರುತಿಸುವುದಾಗಿದೆ – ಇಲ್ಲಿ ತಪ್ಪು ಎಂಬುದರ ಅರ್ಥ ಯಾವುದು ಸತ್ಯದಿಂದ, ಉಚ್ಚತರ ಪ್ರಜ್ಞೆಯಿಂದ, ಮತ್ತು ಉಚ್ಚ ಆತ್ಮದಿಂದ, ಭಗವಂತನ ಮಾರ್ಗದಿಂದ ಬೇರೆ ದಾರಿ ಹಿಡಿಯುವುದಾಗಿದೆ. ಒಮ್ಮೆ ಗುರುತಿಸಿದಾಗ ಒಪ್ಪಿಕೊಳ್ಳಲಾಗಿರುತ್ತದೆ, ತಪ್ಪರ್ಥ ಮಾಡಲಾಗಿರುವುದಿಲ್ಲ, ಇಲ್ಲವೆ ಸಮರ್ಥಿಸಿಕೊಳ್ಳಲಾಗಿರುವುದಿಲ್ಲ. – ದೈವೀ ಪ್ರಕಾಶ

ಮತ್ತು ದೈವೀ ಕೃಪೆ ಇಳಿದುಬರಲೆಂದು, ಅದರ ಸ್ಥಾನದಲ್ಲಿ ನಿಜವಾದ ಪ್ರಜ್ಞೆಯ ಸರಿಯಾದ ಚಲನೆ ಬರಲೆಂದು ಅದನ್ನು ಭಗವಂತನಿಗೆ ಅರ್ಪಿಸಲಾಗಿರುತ್ತದೆ.

**(SABCL, 23/662)** **– ಶ್ರೀ ಅರವಿಂದರು**

*

### ಭಗವಂತನ ಸಂಕಲ್ಪವನ್ನು ತಿಳಿದುಕೊಳ್ಳುವುದು

**ಪ್ರಶ್ನೆ :** *ಭಗವಂತನ ಸಂಕಲ್ಪ ಏನಿದೆ ಎಂಬುದನ್ನು ತಿಳಿದುಕೊಳ್ಳುವುದು ಹೇಗೆ?*

**ಶ್ರೀಮಾತೆ :** ಮನುಷ್ಯ ಅದನ್ನು ತಿಳಿದಿರುವುದಿಲ್ಲ, ಅದರ ಬಗ್ಗೆ ಭಾವನೆ ತಂದುಕೊಳ್ಳುತ್ತಾನೆ. ಮತ್ತು ಅದರ ಭಾವನೆ ತಂದುಕೊಳ್ಳುವುದಕ್ಕಾಗಿ ಮನುಷ್ಯ ಎಷ್ಟೊಂದು ಗಾಢವಾಗಿ, ಎಷ್ಟೊಂದು ನಿಷ್ಕಪಟನಾಗಿ ಸಂಕಲ್ಪ ಮಾಡಬೇಕೆಂದರೆ ಅದರಿಂದ ಪ್ರತಿಯೊಂದು ಅಡೆತಡೆ ಮಾಯವಾಗುವಂತಾಗಬೇಕು. ನಿಮ್ಮಲ್ಲಿ ಆದ್ಯತೆ ನೀಡುವಿಕೆ, ಆಸೆ, ಆಕರ್ಷಣೆ, ಇಷ್ಟವಾಗಿರುವ ವಿಷಯ ಇವೆಲ್ಲವುಗಳಿದ್ದಾಗ ಅವು ದೈವೀಸತ್ಯದ ಮೇಲೆ ಪರದೆಯನ್ನಿರಿಸುತ್ತವೆ. ಹಾಗಾಗಿ ಕೈಕೊಳ್ಳಬೇಕಾದ ಮೊದಲ ಕಾರ್ಯ ನಿಮ್ಮ ಪ್ರಜ್ಞೆಯ ಎಲ್ಲ ಚಲನೆಗಳ ಮೇಲೆ ಪ್ರಭುತ್ವ ಪಡೆಯಲು, ಆಳಿಕೆ ನಡೆಸಲು ಅವುಗಳನ್ನು ಸರಿಪಡಿಸಲು ಪ್ರಯತ್ನ ಮಾಡುವುದಾಗಿದೆ, ಮತ್ತು ಬದಲು ಮಾಡಲು ಶಕ್ಯವಾಗದ ಚಲನೆಗಳನ್ನು, ಎಲ್ಲವೂ ದೈವೀಸತ್ಯದ ಪರಿಪೂರ್ಣ ಹಾಗೂ ಶಾಶ್ವತ ಅಭಿವ್ಯಕ್ತಿಯಾಗುವವರೆಗೆ ನಿರ್ಮೂಲ ಮಾಡುವುದಾಗಿದೆ.

ಅವಶ್ಯವಾದದ್ದೆಂದರೆ, ಅಗ್ನಿಯಂತೆ ಸತ್ತೆಯಲ್ಲಿ ಸತತ ಪ್ರಜ್ವಲಿಸುವ ಅಭೀಪ್ಸೆ ಹೊಂದಿರುವುದಾಗಿದೆ ಮತ್ತು ನಿಮ್ಮಲ್ಲಿ ಆಸೆ, ಆದ್ಯತೆ ನೀಡುವಿಕೆ, ಆಕರ್ಷಣೆ ಕಾಣಿಸಿಕೊಂಡ ಪ್ರತಿಸಲ ಅವುಗಳನ್ನು ಈ ಅಗ್ನಿಯಲ್ಲಿ ಎಸೆದುಬಿಡುವುದಾಗಿದೆ. ನೀವು ಪಟ್ಟುಹಿಡಿದು ಇದನ್ನು ಕೈಕೊಂಡರೆ, ನಿಮ್ಮ ಸಾಧಾರಣ ಪ್ರಜ್ಞೆಯಲ್ಲಿ ನಿಜವಾದ ಪ್ರಜ್ಞೆಯ ಚಿಕ್ಕ ಇಣುಕು ನೋಟ ಉದಯಿಸಲು ಪ್ರಾರಂಭವಾಗುತ್ತಿರುವುದನ್ನು ನೋಡುವಿರಿ. ಮೊದಲು ಅದು ಬಹಳ ಕ್ಷೀಣವಾಗಿರುತ್ತದೆ, ಆಸೆಗಳು, ಆದ್ಯತೆ ನೀಡುವಿಕೆಗಳು, ಆಕರ್ಷಣೆಗಳು, ಇಷ್ಟಪಡುವಿಕೆಗಳು ಇವೆಲ್ಲವುಗಳ ಎಲ್ಲ ಗದ್ದಲದ ಹಿಂದೆ ಬಹಳ ದೂರದಲ್ಲಿರುತ್ತದೆ. ಆದರೆ ನೀವು ಇದೆಲ್ಲದರ ಹಿಂದೆ ಹೋಗಿ ನಿಜವಾದ ಪ್ರಜ್ಞೆಯನ್ನು ಕಂಡು ಹಿಡಿಯಬೇಕು, ಆ ಪ್ರಜ್ಞೆ ಎಲ್ಲ ರೀತಿಯಲ್ಲಿ ಸ್ಥಿರವಾದದ್ದು, ಪ್ರಶಾಂತವಾದದ್ದು. ಬಹುಮಟ್ಟಿಗೆ ನಿಶ್ಚಲ ನೀರವತೆಯಲ್ಲಿದ್ದದ್ದು ಆಗಿರುತ್ತದೆ.

**(CWM, 4/2)**

*



ಮನಸ್ಸು ನಿಶ್ಚಲ ನೀರವತೆಯಲ್ಲಿರುವಂತಾದಾಗ, ತೀರ್ಮಾನ ನೀಡುವುದನ್ನು ಹಾಗೂ ಜ್ಞಾನವೆಂದು ಕರೆಯಲಾದ ಏನೋ ಒಂದರಿಂದ ತನ್ನನ್ನು ಮುಂದೆ ದೂಡುವುದನ್ನು ನಿಲ್ಲಿಸಿದಾಗ ಮನುಷ್ಯ ಜೀವನದ ಸಮಸ್ಯೆಯನ್ನು ಪರಿಹರಿಸಲು ಪ್ರಾರಂಭಿಸುತ್ತಾನೆ. ಮನಸ್ಸು ಕೇವಲ ಕ್ರಿಯೆಯ ಉಪಕರಣವಾಗಿರುವುದರಿಂದ, ನಿಜವಾದ ಜ್ಞಾನದ ಉಪಕರಣ ಅದು ಆಗಿರದೇ ಇರುವುದರಿಂದ ಮನುಷ್ಯ ತೀರ್ಮಾನ ನೀಡುವುದನ್ನು ತಡೆಹಿಡಿಯಬೇಕು – ನಿಜವಾದ ಜ್ಞಾನ ಬೇರೆ ಯಾವುದೋ ಒಂದರಿಂದ ಬರುತ್ತದೆ.

ಮನುಷ್ಯ ತೀರ್ಮಾನ ನೀಡುವುದರಿಂದ ದೂರ ಉಳಿದುಕೊಂಡರೆ, ಅವನು ಇನ್ನೂ ಹೆಚ್ಚು ನಿಖರವಾದ ಜ್ಞಾನದತ್ತ ಬರುತ್ತಾನೆ ಮತ್ತು ಜಗತ್ತಿನ ದುಃಸ್ಥಿತಿಯ ಹತ್ತು ಭಾಗಗಳಲ್ಲಿಯ ಒಂಬತ್ತು ಭಾಗಗಳು ಮಾಯವಾಗುತ್ತವೆ.

**(CWM, 4/3)**

*

### ಸರಿಯಾದ ತೀರ್ಮಾನ ಮತ್ತು ದೈವೀಸತ್ಯವನ್ನು ತಪ್ಪೆಂದು ಸಾಧಿಸುವುದು

ಜ್ಞಾನೇಂದ್ರಿಯಗಳು ವ್ಯಕ್ತಿಯ ಮನೋವೈಜ್ಞಾನಿಕ ಸ್ಥಿತಿಯ ಪ್ರಭಾವದಡಿಯಲ್ಲಿರುತ್ತವೆ, ಏಕೆಂದರೆ ಕಣ್ಣಿನ ಗ್ರಹಿಕೆ ಮತ್ತು ಮಿದುಳಿನ ಸ್ವೀಕೃತಿ ಇವುಗಳ ಮಧ್ಯೆ ಏನೋ ಒಂದು ಬರುತ್ತದೆ. ಅದು ಬಹಳ ಸೂಕ್ಷ್ಮವಾದದ್ದು, ಮಿದುಳು ಕಣ್ಣಿನ ಗ್ರಹಿಕೆಗಳನ್ನು ನರಗಳ ಮೂಲಕ ಸ್ವೀಕರಿಸುತ್ತದೆ, ಅಲ್ಲಿ ತರ್ಕಬದ್ಧತೆ ಇರುವುದಿಲ್ಲ, ಅದನ್ನು ತತ್ಕ್ಷಣದ್ದೆಂದು ಹೇಳಬಹುದು, ಆದರೆ ಕಣ್ಣಿನ ಗ್ರಹಿಕೆ ಮತ್ತು ಮಿದುಳಿನಲ್ಲಿ ಅದಕ್ಕೆ ಮೌಲ್ಯ ನೀಡುವುದಕ್ಕೆ ಪ್ರತಿಸ್ಪಂದಿಸುವ ಜೀವಕೋಶ ಇವುಗಳ ನಡುವೆ ಸಾಗಿಹೋಗಬೇಕಾದ ದೂರವಿರುತ್ತದೆ. ಮಿದುಳು ನೀಡುವ ಮೌಲ್ಯ ಭಾವನೆಗಳ ಪ್ರಭಾವದಡಿಯಲ್ಲಿರುತ್ತದೆ. ಕಣ್ಣು ಏನನ್ನು ನೋಡುತ್ತದೆಯೋ ಮತ್ತು ಮಿದುಳು ಏನನ್ನು ನಿರ್ಣಯಿಸುತ್ತದೆಯೋ ಇವುಗಳ ನಡುವಿರುವ ಕಂಪನ ಬಹಳಷ್ಟು ಸಲ ಪ್ರತಿಸ್ಪಂದನವನ್ನು ಮಿಥ್ಯೆಯಾಗಿಸುತ್ತದೆ. ಅದು ನಿಷ್ಕಾಪಟ್ಯದ ವಿಷಯವಾಗಿರುವುದಿಲ್ಲ, ಏಕೆಂದರೆ ಅತ್ಯಂತ ನಿಷ್ಕಪಟ ವ್ಯಕ್ತಿಗಳೂ ಕೂಡ ಏನು ಸಂಭವಿಸುತ್ತಿದೆ ಎಂಬುದನ್ನು ತಿಳಿದಿರುವುದಿಲ್ಲ, ಬಹಳ ಸ್ಥಿರಚಿತ್ತರಾದವರೂ ಕೂಡ, ಯಾವ ಬಗೆಯ ಭೀಕರ ಭಾವನೆಯಿಲ್ಲದವರು, ಭಾವನೆಯನ್ನು ತಂದುಕೊಳ್ಳದವರು ಈ ರೀತಿ ಪ್ರಭಾವಕ್ಕೊಳಗಾಗುತ್ತಾರೆ, ಅವರಿಗೆ ಈ ಚಿಕ್ಕ ಮಿಥ್ಯೆಗೊಳಪಡಿಸುವ ಕಂಪನದ ಅರಿವಿರುವುದಿಲ್ಲ.

ಕೆಲವೊಮ್ಮೆ ನೈತಿಕ ಯೋಚನೆಗಳು ಮಿಶ್ರಣಗೊಳ್ಳುತ್ತವೆ ಮತ್ತು ತೀರ್ಮಾನವನ್ನು ಮಿಥ್ಯೆಯಾಗಿಸುತ್ತವೆ, ಆದರೆ ನಾವು ನೈತಿಕ ಯೋಚನೆಗಳನ್ನು ನಮ್ಮಿಂದ ಬಹಳ ದೂರ ಎಸೆದು ಬಿಡಬೇಕು; ಏಕೆಂದರೆ ನೈತಿಕತೆ ಮತ್ತು ದೈವೀಸತ್ಯ ಇವು ಒಂದರಿಂದ ಇನ್ನೊಂದು ಬಹಳ ದೂರದಲ್ಲಿವೆ (ನಾನು ಇದನ್ನು ಹೇಳಿ ಯಾರಿಗಾದರೂ ಆಘಾತವನ್ನುಂಟು ಮಾಡಿದರೆ ನನಗೆ ವಿಷಾದವಾಗುತ್ತದೆ, ಆದರೆ ಅದಿರುವುದು ಹಾಗೆ). ನೀವು ಎಲ್ಲ ಆಕರ್ಷಣೆ ಮತ್ತು ಜುಗುಪ್ಸೆ ಇವುಗಳ ಮೇಲೆ ಜಯ ಸಾಧಿಸಿದಾಗ ಮಾತ್ರ ಸರಿಯಾದ ತೀರ್ಮಾನ ತೆಗೆದುಕೊಳ್ಳಬಲ್ಲಿರಿ. ನಿಮ್ಮನ್ನು ಆಕರ್ಷಿಸುವ ಮತ್ತು ಜುಗುಪ್ಸೆ ತರಿಸುವ ವಿಷಯಗಳಿರುವವರೆಗೆ ಇಂದ್ರಿಯಗಳು ಸಂಪೂರ್ಣ ನಿಶ್ಚಿತತೆಯಿಂದ ಕಾರ್ಯಕೈಕೊಳ್ಳುವಂತೆ ಮಾಡುವುದು ನಿಮಗೆ ಸಾಧ್ಯವಾಗುವುದಿಲ್ಲ.

ವಸ್ತುನಿಷ್ಠವಾಗಿ ನೋಡಲು ಮನುಷ್ಯ ತನ್ನಿಂದ ಏನನ್ನೂ ಅಧಿಕವಾಗಿ ಜೋಡಿಸದೆ ನೋಡಬೇಕು ಮತ್ತು ತೀರ್ಮಾನಿಸಬೇಕು. ಮನುಷ್ಯ ಒಂದು ವಿಷಯವನ್ನು ಯಾವ ವ್ಯಕ್ತಿಗತ ಭಾವನೆಯನ್ನು ಮಿಶ್ರಣಗೊಳಿಸದೆ ನೋಡುವುದನ್ನು ಕಲಿತುಕೊಳ್ಳಬೇಕು.

ನಾನು ಇದಕ್ಕೆ ಅಧಿಕವಾಗಿ ಹೇಳುವುದೇನೆಂದರೆ ಈ "ಪರಿಪೂರ್ಣ ಯಂತ್ರ" ಜೀವಂತ ಪ್ರಜ್ಞೆಯ ಸ್ಪಷ್ಟತೆ ಇಲ್ಲದೆ ಏನನ್ನೂ ಕೈಕೊಳ್ಳಲಾರದು. ಪ್ರಜ್ಞೆ ಏಕೈಕವಾದಾಗ, ತಾದಾತ್ಮ್ಯದ ಮೂಲಕ ನೀವು ತಿಳಿದುಕೊಳ್ಳಬಲ್ಲಿರಿ; ಎಂದರೆ ನೀವು ನಿಷ್ಪಕ್ಷಪಾತ ತನದಿಂದ ನೀವು ತಿಳಿದುಕೊಳ್ಳಬೇಕಾದ ಮತ್ತು ತೀರ್ಮಾನಕ್ಕೆ ಬರಬೇಕಾದ ವಿಷಯ ಇಲ್ಲವೆ ವ್ಯಕ್ತಿ ಇವರೊಂದಿಗೆ ನಿಮ್ಮ ಪ್ರಜ್ಞೆಯನ್ನು ಏಕವಾಗಿಸಿದಾಗ, ಈ ವಿಷಯ ಅಥವಾ ವ್ಯಕ್ತಿ ಇವರೊಡನೆ ಆಂತರಿಕ ಸಂಪರ್ಕದಲ್ಲಿ ಬರುತ್ತೀರಿ, ಆಗ ಪರಿಪೂರ್ಣ ನಿಶ್ಚಿತತೆಯಿಂದ ಅರಿತುಕೊಳ್ಳಲು ಸಾಧ್ಯವಾಗುತ್ತದೆ.

ಪರಿಣಾಮಗಳಿಗಾಗಿ ಇರುವ ಆತಂಕ ವಿರೂಪಗೊಳಿಸುತ್ತದೆ ಮತ್ತು ಮಿಥ್ಯೆಯಾಗಿಸುತ್ತದೆ. ಪರಿಪೂರ್ಣ ಸತ್ಯವಾಗಿರುವ ತೀರ್ಮಾನಕ್ಕಾಗಿ, ಆಸೆಯಿಲ್ಲದೆ ಹೇಗೆ ನಿರ್ವಹಿಸಬೇಕು ಹಾಗೂ ಕಾರ್ಯ ಕೈಕೊಳ್ಳಬೇಕು ಎಂಬುದನ್ನು ನೀವು ತಿಳಿದುಕೊಂಡಿರಬೇಕು – ಸಾವಿರಾರು ಜನರಲ್ಲಿ ಒಬ್ಬ ಮಾತ್ರ ಹಾಗೆ ಅದನ್ನು ಕೈಕೊಳ್ಳಬಲ್ಲ. ಬಹುಮಟ್ಟಿಗೆ ಎಲ್ಲರೂ ಪರಿಣಾಮ ಕುರಿತಾಗಿ ಆತಂಕ ಹೊಂದಿರುತ್ತಾರೆ ಇಲ್ಲವೆ ಪರಿಣಾಮವೊಂದನ್ನು ದೊರಕಿಸಲು ಅವರಲ್ಲಿ



ಮಹತ್ವಾಕಾಂಕ್ಷೆ ಇರುತ್ತದೆ. ಪರಿಣಾಮಗಳನ್ನು ಕುರಿತು ನೀವು ಆತಂಕ ಪಟ್ಟುಕೊಳ್ಳಬಾರದು, ಕೈಕೊಳ್ಳಬೇಕಾದ ಕಾರ್ಯ ಅದೆಂದು ತಿಳಿದು ಅದನ್ನು ಸರಳ ರೀತಿಯಲ್ಲಿ ಪೂರೈಸಬೇಕು. "ನಾನಿದನ್ನು ಕೈಕೊಳ್ಳುತ್ತಿದ್ದೇನೆ, ಏಕೆಂದರೆ ಅದು ಕೈಕೊಳ್ಳಬೇಕಾದ ಕಾರ್ಯ ಮತ್ತು ನಂತರ ಏನೇ ಸಂಭವಿಸಲಿ ಅದು ನನಗೆ ಸಂಬಂಧಿಸಿದ್ದಾಗಿರುವುದಿಲ್ಲ" ಎಂದು ನಿಮಗೆ ನೀವೇ ಹೇಳಿಕೊಳ್ಳಿರಿ.

**(CWM, 4/11–12)**

*

**ಜನರೊಡನೆ ವ್ಯವಹರಿಸುವುದರಲ್ಲಿಯ ಸತ್ಯ ಪ್ರತಿಯೊಂದು ಸಂದರ್ಭದಲ್ಲಿ ಭಿನ್ನವಾಗಿರಬಹುದು**

ಎಲ್ಲರೊಡನೆ ಒಂದೇ ರೀತಿಯಲ್ಲಿ ನಡೆದುಕೊಳ್ಳುವುದನ್ನು ಕುರಿತು ಹೇಳುವುದಾದರೆ ಅದಿನ್ನೂ ಅತ್ಯಂತ ಕೆಟ್ಟ ಗೊಂದಲ ಉಂಟುಮಾಡುವ ವಿಷಯ! ಭಗವಂತ ಎಲ್ಲರನ್ನೂ ಒಂದೇ ರೀತಿಯಲ್ಲಿ ನೋಡಿಕೊಳ್ಳಲಿ ಎಂದು ಹೇಳುವಾಗ ಉಂಟಾಗುವ ಗೊಂದಲದ ರೀತಿಯಲ್ಲಿ ಅದು ಇರುತ್ತದೆ. ಹಾಗಾಗಿ ಜಗತ್ತಿನಲ್ಲಿ ವೈವಿಧ್ಯವನ್ನಿರಿಸುವ ತೊಂದರೆ ಯೋಗ್ಯವಾಗಿರುವುದಿಲ್ಲ, ಇಬ್ಬರು ವ್ಯಕ್ತಿಗಳು ಒಂದೇ ರೀತಿಯಲ್ಲಿ ಇರದೆ ಇರುವಂತೆ ಮಾಡಲು ತೆಗೆದುಕೊಳ್ಳುವ ತೊಂದರೆ ಯೋಗ್ಯವಾಗಿರುವುದಿಲ್ಲ; ಏಕೆಂದರೆ ಇದು ವಿವಿಧತೆಯ ತತ್ವಕ್ಕೆ ವಿರೋಧಿ–ಯಾಗಿರುತ್ತದೆ.

ವಿಶ್ವದಲ್ಲಿರುವ ಎಲ್ಲದರ ಬಗ್ಗೆ ಒಂದೇ ಬಗೆಯ ಆಳವಾದ ತಿಳಿವಳಿಕೆ ಇರುವ ಮನೋಭಾವ, ಏಕತೆ, ಪ್ರೇಮ, ಪರಿಪೂರ್ಣ ಕರುಣೆ ಹೊಂದುವುದರ ಬಗ್ಗೆ ಅಭೀಪ್ಸೆ ಹೊಂದಿರಬಹುದು, ಹೊಂದಿರುವುದು ಸಾಧ್ಯವಾಗದಿದ್ದರೆ ಅದನ್ನು ಹೊಂದಬೇಕು, ಆದರೆ ಈ ಮನೋಭಾವವನ್ನು ಪ್ರತಿಯೊಂದು ಸಂದರ್ಭಕ್ಕೆ, ಅದರ ಸತ್ಯ ಹಾಗೂ ಆವಶ್ಯಕತೆ ಇವುಗಳಿಗನುಗುಣವಾಗಿ ಭಿನ್ನ ರೀತಿಯಲ್ಲಿ ಅನ್ವಯಿಸಬೇಕು. ಉದ್ದೇಶ ಇಲ್ಲವೆ ಕ್ರಿಯೆಯ ಮೂಲ ಎಂದು ಕರೆಯಬಹು–ದಾದದ್ದು ಒಂದೇ ಆಗಿರುತ್ತದೆ, ಆದರೆ ಕ್ರಿಯೆ ಆ ಸಂದರ್ಭ ಹಾಗೂ ಅದರ ಆಳವಾದ ಸತ್ಯ ಇವುಗಳಿಗನುಗುಣವಾಗಿ ಆ ಕ್ರಿಯೆಯ ಉದ್ದೇಶಕ್ಕೆ ನೇರವಾಗಿ ಪೂರ್ತಿ ವಿರುದ್ಧ ದಿಶೆಯಲ್ಲಿರಬಹುದು. ಆದರೆ ಅದಕ್ಕಾಗಿ ಮನುಷ್ಯನಲ್ಲಿ, ನಿಖರವಾಗಿ, ಅತ್ಯಂತ ಉಚ್ಚಮಟ್ಟದ ಮನೋಭಾವವಿರಬೇಕು, ಅದು ಅತ್ಯಂತ

ಗಾಢವಾದದ್ದು, ಸಾರದಲ್ಲಿ ಅತ್ಯಂತ ಸತ್ಯವಾದದ್ದು, ಬಾಹ್ಯದಿಂದ ಒದಗಬಹುದಾದ ಎಲ್ಲ ಅನಿರೀಕ್ಷಿತ ಸಂಗತಿಗಳಿಂದ ಮುಕ್ತವಾದದ್ದು ಆಗಿರಬೇಕು. ಆಗ ಮನುಷ್ಯ, ಪ್ರತಿನಿಮಿಷ ಕೇವಲ ಸಾರಭೂತ ಸತ್ಯವನ್ನಷ್ಟೇ ಅಲ್ಲ, ಆದರೆ ಕ್ರಿಯೆಯ ಸತ್ಯವನ್ನೂ ನೋಡಬಲ್ಲ; ಮತ್ತು ಅದು ಪ್ರತಿಯೊಂದು ಸಂದರ್ಭದಲ್ಲಿ ಭಿನ್ನವಾಗಿರುತ್ತದೆ. ಮತ್ತು ನಾನು "ಭಾವನೆ" ಎಂದು ಕರೆಯಬಹುದಾದುದು – ಅದು ತೃಪ್ತಿಕರ ಶಬ್ದವಾಗಿರದೆ ಇದ್ದಾಗ್ಯೂ – ಇಲ್ಲವೆ ಮನುಷ್ಯ ಕಾರ್ಯ ಕೈಕೊಳ್ಳುತ್ತಿರುವಾಗಿನ ಪ್ರಜ್ಞೆ ಸಾರಭೂತವಾಗಿ ಒಂದೇ ಆಗಿರುತ್ತದೆ

**(CWM, 8/405–07)**

*

**ನಿಮ್ಮ ಸತ್ತೆಯ ಸತ್ಯಕ್ಕನುಗುಣವಾಗಿ ಜೀವಿಸಿರಿ**

ನೀವು ಪರಿಪೂರ್ಣವಾಗಿ ನಿಷ್ಕಪಟರಾಗಿದ್ದಾಗ, ನಿಮ್ಮ ಸತ್ತೆಯ ಅತ್ಯುಚ್ಚ ಆದರ್ಶದೊಂದಿಗೆ, ನಿಮ್ಮ ಸತ್ತೆಯ ಸತ್ಯದೊಂದಿಗೆ ಸಾಮರಸ್ಯದಲ್ಲಿ ಜೀವಿಸಲು ಸತತ ಪ್ರಯತ್ನ ಮಾಡುತ್ತೀರಿ. ಪ್ರತಿಕ್ಷಣ ಅತ್ಯುಚ್ಚ ಆದರ್ಶದೊಂದಿಗೆ, ಇಲ್ಲವೆ ನಿಮ್ಮ ಸತ್ತೆಯ ಸತ್ಯದ ಪ್ರಜ್ಞೆಯುಳ್ಳವರಾಗಿದ್ದರೆ ಅದರೊಂದಿಗೆ ನೀವು ಯೋಚಿಸುವು–ದೆಲ್ಲದರಲ್ಲಿ, ಭಾವನೆ ತಂದುಕೊಳ್ಳುವುದರಲ್ಲಿ ಹಾಗೂ ಕೈಕೊಳ್ಳುವುದೆಲ್ಲದರಲ್ಲಿ ನಿಮ್ಮನ್ನು ಸಾಮರಸ್ಯದಲ್ಲಿರಿಸಿದರೆ – ಆಗ ನೀವು ನಿಜವಾದ ನಿಷ್ಕಾಪಟ್ಯವನ್ನು ತಲುಪಿರುತ್ತೀರಿ. ನೀವು ಹಾಗಿದ್ದಿರಾದರೆ, ಅಹಂಮನ್ಯತೆಯ ಉದ್ದೇಶಗಳಿಂದ ಇಲ್ಲವೆ ವೈಯಕ್ತಿಕ ಕಾರಣಗಳಿಗಾಗಿ ಕಾರ್ಯ ಮಾಡದಿದ್ದರೆ, ನಿಮ್ಮ ಆಂತರಿಕ ಸತ್ಯದಿಂದ ಮಾರ್ಗದರ್ಶನ ಪಡೆದು ಕಾರ್ಯ ಕೈಕೊಳ್ಳುತ್ತಿದ್ದರೆ, ಎಂದರೆ ನೀವು ಸಂಪೂರ್ಣವಾಗಿ ನಿಷ್ಕಪಟರಾಗಿದ್ದರೆ, ಇಡೀ ಜಗತ್ತು ನಿಮ್ಮನ್ನು ಒಂದು ಬಗೆಯಲ್ಲಿ ಇಲ್ಲವೆ ಇನ್ನೊಂದು ಬಗೆಯಲ್ಲಿ ತೀರ್ಮಾನಕ್ಕೊಳಪಡಿಸುತ್ತಿದ್ದರೆ ನಿಮಗೆ ಅದು ಪರಿಪೂರ್ಣವಾಗಿ ಒಂದೇ ಬಗೆಯದಾಗಿರುತ್ತದೆ. ಈ ಬಗೆಯ ಪರಿಪೂರ್ಣ ನಿಷ್ಕಾಪಟ್ಯದ ಸ್ಥಿತಿಯಲ್ಲಿ ನೀವು ಒಳ್ಳೆಯವರೆಂದು ತೋರಿಸಿಕೊಡುವ ಇಲ್ಲವೆ ಇತರರಿಂದ ಮಾನ್ಯತೆ ಪಡೆಯುವ ಆವಶ್ಯಕತೆ ಇರುವುದಿಲ್ಲ, ಏಕೆಂದರೆ ನಿಮ್ಮ ನಿಜವಾದ ಪ್ರಜ್ಞೆಯೊಡನೆ ನೀವು ಸಾಮರಸ್ಯದಿಂದಿರುವಾಗ, ನಿಮ್ಮ ಅನುಭವಕ್ಕೆ ಬರುವ ಮೊದಲ ವಿಷಯವೆಂದರೆ ನೀವು ಹೇಗೆ ಕಾಣಿಸಿಕೊಳ್ಳುತ್ತೀರಿ ಎಂಬುದರ ಬಗ್ಗೆ ಚಿಂತೆ ಮಾಡದೆ ಇರುವುದಾಗಿದೆ. ನೀವು ಹೀಗೆ ಕಾಣಿಸಿಕೊಳ್ಳುತ್ತಿದ್ದೀರಿ ಇಲ್ಲವೆ ಹಾಗೆ ಕಾಣಿಸಿಕೊಳ್ಳುತ್ತಿದ್ದೀರಿ ಎಂಬುದಾಗಲಿ, ನೀವು ಉದಾಸೀನರಾಗಿರುವಂತೆ, ಭಾವಶೂನ್ಯರಾಗಿರುವಂತೆ, ಗರ್ವಿಷ್ಠರಾದವರಂತೆ ಎಂದು ತೋರಿಬರುತ್ತೀರಿ ಎಂಬುದಾಗಲಿ ಯಾವ ಮಹತ್ವವನ್ನೂ ಹೊಂದಿರುವುದಿಲ್ಲ, ಆದರೆ, ನಾನು ಪುನರಾವರ್ತಿಸಿ ಹೇಳುತ್ತಿದ್ದೇನೆ, ನೀವು ಪರಿಪೂರ್ಣವಾಗಿ ನಿಷ್ಕಪಟರಾಗಿರಬೇಕು, ಎಂದರೆ ನಿಮ್ಮ ಆಂತರಿಕ, ಕೇಂದ್ರ ಸತ್ಯವನ್ನು ಸಿದ್ಧಿಸಿಕೊಳ್ಳುವುದಕ್ಕಾಗಿ ನೀವು ಜೀವಿಸುತ್ತೀರಿ ಎಂಬುದನ್ನು ಎಂದಿಗೂ ಮರೆಯಕೂಡದು.



**(CWM, 4/13)** **– ಶ್ರೀಮಾತೆ**

*

ನಮ್ಮ ಬಾಯಿಂದ ಇಲ್ಲವೆ ಲೇಖನಿಯಿಂದ ಮಿಥ್ಯೆ, ಅದೆಷ್ಟೇ ಚಿಕ್ಕ ಪ್ರಮಾಣದಲ್ಲದರೂ, ಅಭಿವ್ಯಕ್ತಿಗೊಳ್ಳುವುದಕ್ಕೆ ಅನುವು ಮಾಡಿಕೊಟ್ಟರೆ, ನಾವು ದೈವೀಸತ್ಯದ ಸಂದೇಶವಾಹಕರಾಗಬಹುದೆಂಬ ಭರವಸೆಯನ್ನು ಹೇಗೆ ಹೊಂದ–ಲಾದೀತು? ದೈವೀಸತ್ಯದ ಪರಿಪೂರ್ಣ ಸೇವಕ ಅತಿ ಚಿಕ್ಕ ಪ್ರಮಾಣದಲ್ಲಿಯಾದರೂ ಕೂಡ ನಿಖರವಿಲ್ಲದಿರುವಿಕೆ, ಉತ್ಪ್ರೇಕ್ಷೆ ಇಲ್ಲವೆ ವಿರೂಪಗೊಳಿಸುವಿಕೆ ಇವುಗಳಿಂದ ದೂರವಿರಬೇಕು.

*

ಮಿಥ್ಯೆಯನ್ನು ತೊಡೆದುಹಾಕುವುದಕ್ಕೆ ಆತುರರಾದವರಿಗೆ ಮಾರ್ಗ ಇಲ್ಲಿದೆ:

ನಿಮ್ಮನ್ನೇ ನೀವು ಸಂತೋಷಪಡಿಸಿಕೊಳ್ಳುವುದಕ್ಕಾಗಲಿ, ಇತರರನ್ನು ಸಂತೋಷ–ಪಡಿಸುವುದಕ್ಕಾಗಿ ಪ್ರಯತ್ನಿಸುವುದು ಬೇಡ. ಭಗವಂತನನ್ನು ಸಂತೋಷಪಡಿಸಲು ಪ್ರಯತ್ನಿಸಿರಿ.

ಏಕೆಂದರೆ ಅವನು ಮಾತ್ರ ದೈವೀಸತ್ಯವಾಗಿದ್ದಾನೆ. ಭೌತಿಕ ದೇಹದಲ್ಲಿರುವ ಸತ್ತೆಗಳಾದ ನಮ್ಮಲ್ಲಿ ಪ್ರತಿಯೊಬ್ಬನೂ ಹಾಗೂ ಎಲ್ಲರೂ ಭಗವಂತನನ್ನು ಅಡಗಿಸಿಡುವ ಮಿಥ್ಯೆಯ ಮೇಲಂಗಿಗಳಂತಿದ್ದೇವೆ.

ಭಗವಂತ ಮಾತ್ರ ತನಗೆ ತಾನು ಸತ್ಯಸ್ವರೂಪನಾದುದರಿಂದ ಅವನ ಮೇಲೆ ನಾವು ಏಕಾಗ್ರತೆ ಇರಿಸಬೇಕು, ಮಿಥ್ಯೆಯ ಮೇಲಂಗಿಗಳ ಮೇಲಲ್ಲ.

**(CWM, 14/202, 15/80)** **– ಶ್ರೀಮಾತೆ**

*

# ದೈವೀಸತ್ಯದ ನಿಯಮ

## ಜಗತ್ತಿನಲ್ಲಿ ಭಗವಂತನ ಕ್ರಿಯೆ

ಜಗತ್ತಿನಲ್ಲಿ ಭಗವಂತನ ಕ್ರಿಯೆ, ಯಾವಾಗಲೂ, ವಿಪರೀತವಾಗಿ ದುಷ್ಟವಾದುದಕ್ಕೆ ಮಿತಿಯನ್ನಿರಿಸುವುದಕ್ಕಾಗಿ ಇರುತ್ತದೆ, ಮತ್ತು ಅದೇ ವೇಳೆಗೆ ಒಳ್ಳೆಯದಾದುದಕ್ಕೆ ಮಿತಿರಹಿತ ಸಾಮರ್ಥ್ಯವನ್ನು ನೀಡುತ್ತದೆ. ಈ ಮಿತಿರಹಿತ ಸಾಮರ್ಥ್ಯವೇ, ಬಾಹ್ಯ ಪ್ರಕಟಣೆಯಲ್ಲಿ ದುಷ್ಟವಾದದ್ದು ಹರಡುವುದಕ್ಕೆ ಮಿತಿಯನ್ನಿರಿಸಲು ಸೇವೆ ಸಲ್ಲಿಸುತ್ತದೆ.

ಸ್ವಾಭಾವಿಕವಾಗಿ, ಮಾನವ ಸತ್ತೆಗಳ ಬಹಳ ಸೀಮಿತ ದೃಷ್ಟಿಗೆ ದುಷ್ಟವಾದುದಕ್ಕೆ ಮಿತಿಗಳೇ ಇಲ್ಲವೇನೋ, ಅವು ತಮ್ಮ ತುತ್ತ ತುದಿಯನ್ನು ತಲುಪುವುವೇನೋ ಎನ್ನುವಂತೆ ತೋರಿಬರುತ್ತದೆ. ಆದರೆ ಈ ತುತ್ತ ತುದಿಗೇ ಒಂದು ಮಿತಿಯಿದೆ. ಅಲ್ಲಿ ಯಾವಾಗಲೂ ಒಂದು ನಿಲುಗಡೆ(halt) ಇರುತ್ತದೆ, ಏಕೆಂದರೆ ಒಂದು ಸಮಯವಿರುತ್ತದೆ, ಆಗ ಭಗವಂತ ಮೇಲೆದ್ದು ಬಂದು "ಇದಕ್ಕೂ ಹೆಚ್ಚು ಮುಂದೆ ನೀನು ಹೋಗುವ ಹಾಗಿಲ್ಲ" ಎಂದು ಹೇಳುತ್ತಾನೆ. ಅದು ಪ್ರಕೃತಿಯನ್ನು ದೊಡ್ಡ ಪ್ರಮಾಣದಲ್ಲಿ ಹಾಳುಮಾಡುವುದಾಗಿರಲಿ ಇಲ್ಲವೆ ಜನರ ಅತಿಘೋರತೆಯಾಗಿರಲಿ, ಅಲ್ಲಿ ಯಾವಾಗಲೂ ಒಂದು ಸಮಯವಿರುತ್ತದೆ, ಆಗ ಭಗವಂತ ಮಧ್ಯೆ ಪ್ರವೇಶಿಸುತ್ತಾನೆ, ವಿಷಯಗಳು ಹಾಗೆಯೇ ಮುಂದುವರಿದುಕೊಂಡು ಹೋಗುವುದನ್ನು ತಡೆಯುತ್ತಾನೆ.

**(CWM, 7/419–20)**

*

## ಜಗತ್ತಿನ ಮೇಲೆ ಅತಿಮಾನಸ ದೈವೀಸತ್ಯದ ಕ್ರಿಯೆಗಳು

ಅದು ಅತಿಮಾನಸದ ಅವರೋಹಣದಿಂದ ಜಗತ್ತಿನಲ್ಲಾದ ಬದಲಾವಣೆಗಳ ವಿಚಾರ ಕುರಿತು ಹೇಳುವಂತಿದೆ. ಸ್ಥಗಿತಗೊಂಡ ವಿಷಯಗಳು, ನಿಜವಾಗಿ, ಪರಿಪೂರ್ಣವಾಗುವವು. ಒಂದು ಚಿಕ್ಕ ದೋಷ ಅದರ ಪರಿಣಾಮಗಳಲ್ಲಿ ಮುಚ್ಚುಮರೆ ಇಲ್ಲದಂತಾಗುವುದು, ಮತ್ತು ಅಲ್ಪ ಪ್ರಮಾಣದ ನಿಷ್ಕಾಪಟ್ಯ ಹಾಗೂ ಅಭೀಪ್ಸೆ ಇವು ಅವುಗಳ ಪರಿಣಾಮಗಳಲ್ಲಿ ಪವಾಡ ಸದೃಶವಾಗುವವು. ಜನರಲ್ಲಿ ಮೌಲ್ಯಗಳು ಗಾಢತೆ ಪಡೆದಿವೆ. ಪ್ರಾಪಂಚಿಕ ದೃಷ್ಟಿಯಿಂದಲೂ ಕೂಡ, ಅತ್ಯಂತ ಚಿಕ್ಕ ದೋಷ, ಅದು ಅತಿ ಚಿಕ್ಕದಾಗಿದ್ದಾಗಲೂ, ಅದಕ್ಕೆ ದೊಡ್ಡ ಪರಿಣಾಮಗಳಿರುತ್ತವೆ,



ಮತ್ತು ಅಭೀಪ್ಸೆಯಲ್ಲಿ ಕನಿಷ್ಠ ಮಟ್ಟದ ನಿಷ್ಕಾಪಟ್ಯಕ್ಕೆ ಅದ್ಭುತ ಪರಿಣಾಮಗಳಿವೆ. ಮೌಲ್ಯಗಳು ಗಾಢತೆ ಪಡೆದಿವೆ, ನಿಖರವಾಗಿವೆ ...

ಜಗತ್ತಿನ ಪ್ರಜ್ಞಾಪೂರ್ಣ ಆರೋಹಣದ ದೃಷ್ಟಿಕೋನದಿಂದ ಪ್ರತಿಯೊಂದನ್ನು ಸಂಕಲ್ಪಿಸಲಾಗಿದೆ ಎಂದು ಇಡಿಯಾದುದರ ಗ್ರಹಿಕೆ ಇದೆ. ಪ್ರಜ್ಞೆ ದೈವಿಕವಾಗಲು ತಯಾರಿ ಮಾಡಿಕೊಳ್ಳುತ್ತಿದೆ. ಅದು ಪರಿಪೂರ್ಣವಾಗಿ ನಿಜವಾಗಿದೆ: ದೋಷಗಳೆಂದು ನಾವು ಪರಿಗಣಿಸುವುದು ಒಟ್ಟಿನಲ್ಲಿ ಮಾನವ ಕಲ್ಪನೆಯ ಭಾಗವಾಗಿರುತ್ತದೆ. ...

ಇಡೀ ಸೃಷ್ಟಿ ಭಗವಂತನನ್ನಲ್ಲದೆ, ಅವನನ್ನು ಪ್ರಕಟಿಸುವುದನ್ನಲ್ಲದೆ ಬೇರೇನನ್ನೂ ಬಯಸಬಾರದು. ಸೃಷ್ಟಿ ಕೈಕೊಳ್ಳುವುದೆಲ್ಲ, ದೋಷಗಳೆಂದು ಕರೆಯಲಾದವುಗಳೂ ಕೂಡ, ಭಗವಂತನನ್ನು ಪ್ರಕಟಿಸುವುದನ್ನು ಅನಿವಾರ್ಯ–ವಾಗುವಂತೆ ಮಾಡುವುದಕ್ಕೆ ಸಾಧನ ಸ್ವರೂಪದವಾಗಿರುತ್ತವೆ. "ಇದು, ಆದರೆ ಅದಲ್ಲ" ಎಂಬ ಬಗೆಯ ನಿರ್ಬಂಧಗಳನ್ನಿರಿಸುತ್ತ ಮನುಷ್ಯ ಕಲ್ಪಿಸಿಕೊಂಡ ಭಗವಂತನನ್ನಲ್ಲ: ಪ್ರಬಲ ಸಾಮರ್ಥ್ಯ ಹಾಗೂ ಪ್ರಕಾಶಗಳನ್ನೊಳಗೊಂಡ ಎಲ್ಲವೂ ಇರುವಿಕೆಯಾಗಿರುವ ಭಗವಂತ ಅವನಾಗಿರುತ್ತಾನೆ. ಅದು (ಅತಿಮಾನಸ) ಜಗತ್ತಿನಲ್ಲಿ ನಿಜವಾಗಿ ದೈವೀ ಸಾಮರ್ಥ್ಯವಾಗಿದೆ, ಅದು ಜಗತ್ತಿನಲ್ಲಿ ಬಂದ ಒಂದು ಹೊಸ, ಪ್ರಬಲ ದೈವೀ ಸಾಮರ್ಥ್ಯವಾಗಿದೆ, ಅದು ತನ್ನನ್ನು ಪ್ರಕಟಿಸಬೇಕು ಮತ್ತು ಈ ದೈವೀ ಸರ್ವ ಸಾಮರ್ಥ್ಯ "ಪ್ರಕಟವಾಗಬಲ್ಲದಾಗುವಂತೆ" (ಹಾಗೆ ನಾವು ಹೇಳಬಹುದಾದರೆ) ಅದು ಮಾಡಬೇಕು. ...

ಆದರೆ ಅವಶ್ಯವಾದ ಒಂದು ನಿಬಂಧನೆ ಇದೆ: ಅಹಂಕಾರದ ಆಡಳಿತ ಕೊನೆಗೊಳ್ಳಬೇಕು. ಸದ್ಯ ಅಹಂಕಾರ ಅಡೆತಡೆ ಒಡ್ಡುತ್ತದೆ. ಅಹಂಕಾರದ ಸ್ಥಾನದಲ್ಲಿ ದೈವೀ ಪ್ರಜ್ಞೆ ಬರಬೇಕು.

**(CWM, 11/314–16)**

*

## ಹಳೆಯ ಮತ್ತು ಹೊಸ ನಿಯಮಗಳ ನಡುವಿನ ಹೋರಾಟ

ಜಗತ್ತು ತನ್ನ ದೈವೀ ಮೂಲವನ್ನು ಮರೆತುಬಿಟ್ಟಿದೆ ಮತ್ತು ಅಹಂಕಾರದ ಚೈತನ್ಯಗಳಿಗೆ ಒಂದು ಅಖಾಡ(arena)ವಾಗಿದೆ; ಆದರೆ ದೈವೀಸತ್ಯಕ್ಕೆ ತೆರೆದುಕೊಳ್ಳುವ, ಅಭೀಪ್ಸೆಯ ಮೂಲಕ ಆ ಸತ್ಯಕ್ಕೆ ಕರೆ ಕೊಡುವ, ಆಕಸ್ಮಿಕದ ಸುಳಿಯಲ್ಲಿ

ಬದಲಾವಣೆ ಆಗುವಂತೆ ಮಾಡುವ ಸಾಧ್ಯತೆ ಇನ್ನೂ ಅದಕ್ಕಿದೆ. ತಮ್ಮ ಮಾನಸಿಕ ಸಂಬಂಧಗಳು, ಅನುಭವಗಳು ಸಾರ್ವತ್ರೀಕರಣಗೊಳಿಸುವಿಕೆಗಳು ಇವುಗಳ ಮೂಲಕ ಘಟನೆಗಳ ಯಾಂತ್ರಿಕ ಸರಣಿ ಎಂದು ಜನರು ಪರಿಗಣಿಸುವುದು, ನಿಜವಾಗಿ, ಸೂಕ್ಷ್ಮ ನಿಯೋಗಿ(agency)ಗಳು ತಮ್ಮದೇ ಸಂಕಲ್ಪವನ್ನು ಕುಶಲತೆಯಿಂದ ಈಡೇರಿಸಿಕೊಳ್ಳುವುದರಿಂದಾಗಿರುತ್ತದೆ.

ಈ ಅದೈವಿಕವಾದ ನಿಯೋಗಿಗಳಿಗೆ ಜಗತ್ತು ಎಷ್ಟೊಂದು ಅಧೀನವಾಗಿದೆ–ಯೆಂದರೆ ದೈವೀಸತ್ಯ, ತನ್ನ ಜಯಕ್ಕಾಗಿ ಹೋರಾಡಬೇಕಾಗುವುದು. ಆ ಜಯಕ್ಕಾಗಿ ಅದಕ್ಕೆ ಹಕ್ಕಿಲ್ಲ: ಅದು ಮಿಥ್ಯೆ ಮತ್ತು ವಿಕೃತಿಗಳನ್ನು ದೂರವಿರಿಸುವುದರ ಮೂಲಕ ಜಯಗಳಿಸಬೇಕಾಗುತ್ತದೆ. ಮಿಥ್ಯೆ ಮತ್ತು ವಿಕೃತಿ ಇವುಗಳ ಮಹತ್ವದ ಭಾಗವೆಂದರೆ ಎಲ್ಲ ವಿಷಯಗಳು ತಮ್ಮ ಕೊನೆಯ ಮೂಲವನ್ನು ಭಗವಂತನಲ್ಲಿ ಕಂಡುಕೊಳ್ಳುತ್ತವೆ, ಕೂಡಲೆ ತೊಡಗಿಕೊಳ್ಳುವ ಆ ಎಲ್ಲ ವಿಷಯಗಳ ಚಟುವಟಿಕೆಗಳು ಕೂಡ ಭಗವಂತನಿಂದಲೇ ನೇರವಾಗಿ ಮುಂದುವರಿಯುತ್ತವೆ ಎಂಬುದು ಸುಲಭ ಸಾಧ್ಯವಾದ ಯೋಚನೆಯಾಗಿದೆ. ಇಲ್ಲಿರುವ ನಿಮ್ನತರ ಪ್ರಕೃತಿಯಲ್ಲಿ ಭಗವಂತ ವಿಶ್ವವ್ಯಾಪಿ ಅವಿದ್ಯೆಯ ಮುಸುಕಿನಲ್ಲಿರುತ್ತಾನೆ ಮತ್ತು ಸಂಭವಿಸುವುದೆಲ್ಲ ನೇರವಾಗಿ ದೈವೀ ಜ್ಞಾನದಿಂದ ಮುಂದುವರಿದುಕೊಂಡು ಹೋಗುವುದಿಲ್ಲ ಎಂಬುದು ವಾಸ್ತವ ಸಂಗತಿ. ಪ್ರತಿಯೊಂದು ಭಗವಂತನ ಸಂಕಲ್ಪದಂತಾಗುತ್ತದೆ ಎಂದು ಹೇಳುವುದು ವಿರೋಧೀ ಪ್ರಭಾವಗಳ ಅನುಕೂಲಕರ ಸೂಚನೆಯಾಗಿರುತ್ತದೆ. ಅಸ್ತವ್ಯಸ್ತತೆ ಹಾಗೂ ಕುರೂಪಗಳಿರುವ ಸ್ಥಿತಿಗೆ ಕುಗ್ಗಿಸಲಾದ ಸೃಷ್ಟಿ ಅದಿರುವುದಕ್ಕೆ ಗಟ್ಟಿಯಾಗಿ ಅಂಟಿಕೊಳ್ಳಲಿ ಎಂಬುದು ವಿರೋಧೀ ಶಕ್ತಿಗಳಿಗೆ ಬೇಕಾಗಿರುತ್ತದೆ. ಹಾಗಾಗಿ ಏನು ಮಾಡಬೇಕು? ಎಂದು ನೀವು ಕೇಳುತ್ತೀರಿ. ಸರಿ, ದೈವೀ ಪ್ರಕಾಶಕ್ಕೆ ಕರೆ ಕೊಡಿರಿ, ದೈವೀ ಪರಿವರ್ತನೆಯ ಸಾಮರ್ಥ್ಯಕ್ಕೆ ನಿಮ್ಮನ್ನು ತೆರೆದಿರಿಸಿಕೊಳ್ಳಿರಿ. ಅಸಂಖ್ಯಾತ ಸಲ ನಿಮಗೆ ದೈವೀ ಶಾಂತಿಯನ್ನು ಕೊಡಲಾಗಿದೆ, ಅಷ್ಟೇ ಸಲ ನೀವದನ್ನು ಕಳೆದುಕೊಂಡಿದ್ದೀರಿ – ಏಕೆಂದರೆ ನಿಮ್ಮೊಳಗಿರುವ ಏನೋ ಒಂದು ಅದರ ಕ್ಷುದ್ರ ಅಹಂಮನ್ಯತೆಯ ದಿನಚರಿಯನ್ನು ಬಿಟ್ಟುಕೊಡಲು ತಿರಸ್ಕರಿಸುತ್ತದೆ. ನೀವು ಯಾವಾಗಲೂ ಜಾಗರೂಕರಾಗಿರದಿದ್ದರೆ, ನಿಮ್ಮ ಸ್ವಭಾವವು, ಅದನ್ನು ಅವರೋಹಣ ಮಾಡುತ್ತಿರುವ ದೈವೀಸತ್ಯದಿಂದ ತುಂಬಿದಾಗಲೂ ಕೂಡ, ಅದರ ಹಳೆಯ ಪಶ್ಚಾತ್ತಾಪವಿಲ್ಲದ ರೂಢಿಗಳತ್ತ ಮರಳಿ ಹೋಗುತ್ತದೆ. ಹಳೆಯದು ಮತ್ತು ಹೊಸತಾದದ್ದು ಇವುಗಳ ನಡುವಿರುವ ಘರ್ಷಣೆ ಯೋಗದ ಮುಖ್ಯ



ಭಾಗ(crux)ವನ್ನಾಗಿ ಮಾಡುತ್ತದೆ. ಆದರೆ ನಿಮಗೆ ತೆರೆದು ತೋರಿಸಲಾದ ಪರಮೋಚ್ಚ ದೈವೀ ನಿಯಮ ಮತ್ತು ದೈವೀ ಕ್ರಮಬದ್ಧತೆ ಇವುಗಳಿಗೆ ನಿಷ್ಠಾವಂತರಾಗಲು ಒಲವು ಹೊಂದಿದ್ದರೆ, ಆಕಸ್ಮಿಕದ ಪ್ರಾಂತಕ್ಕೆ ಸೇರಿದ ನಿಮ್ಮ ಸತ್ತೆಯ ಭಾಗಗಳು, ಅದೆಷ್ಟೇ ನಿಧಾನಗತಿಯಲ್ಲಾಗಲಿ, ಪರಿವರ್ತನೆಗೆ ಒಳಗಾಗುವವು ಮತ್ತು ದೈವೀಕರಣಗೊಳ್ಳುವವು.

**(CWM, 3/163–64)**

*

ದೈವೀ ಸಂಕಲ್ಪ ಜಗತ್ತಿನಲ್ಲಿ, ಯಾವಾಗಲೂ, ಬಹಿರಂಗವಾಗಿ ಕಾರ್ಯ ಕೈಕೊಳ್ಳುತ್ತದೆಂದು ಭಾವಿಸುವುದು ಭವ್ಯ ದೋಷ. ಸಂಭವಿಸುವುದೆಲ್ಲ, ವಾಸ್ತವದಲ್ಲಿ, ದೈವಿಕವಾಗಿರುವುದಿಲ್ಲ. ಪ್ರಕಟಣೆಯಲ್ಲಿ ಪರಮೋಚ್ಚ ಸಂಕಲ್ಪ ವಿರೂಪಗೊಳ್ಳುತ್ತದೆ, ಅದಕ್ಕೆ ಕಾರಣ ಆ ಸಂಕಲ್ಪದೊಂದಿಗೆ ಅದನ್ನು ಅರ್ಥೈಸುವ ನಿಮ್ನತರ ಶಕ್ತಿಗಳ ಸಂಯೋಜನವಿರುತ್ತದೆ. ಸಂಕಲ್ಪದ ಆ ಚಾಲಕ ಶಕ್ತಿಯನ್ನು ತಪ್ಪಾಗುವಂತೆ ಮಾಡುವ ನಿಮ್ನತರ ಶಕ್ತಿಗಳು ಒಂದು ಮಾಧ್ಯಮದ ರೂಪದಲ್ಲಿರುತ್ತವೆ ಮತ್ತು ಆ ಸಂಕಲ್ಪಕ್ಕೆ ಅದೈವಿಕ ಪರಿಣಾಮವನ್ನು ಕೊಡುತ್ತವೆ. ಸಂಭವಿಸಿದ್ದೆಲ್ಲ, ನಿಜವಾಗಿ, ದೋಷರಹಿತ ಅರ್ಥೈಸುವುದಾಗಿದ್ದರೆ ಜಗತ್ತಿನ ವಿರೂಪಗಳಿಗೆ ಕಾರಣವನ್ನು ನೀವು ಹೇಗೆ ಒದಗಿಸುವಿರಿ? ದೈವೀ ಸಂಕಲ್ಪ ವಿಶ್ವವ್ಯಾಪಿ ಅವಿದ್ಯೆಗೆ ಕಾರಣವಾಗಿರುವುದಿಲ್ಲ ಎಂದಲ್ಲ. ಅದು ಸರ್ವ ಸಾಮರ್ಥ್ಯವುಳ್ಳದ್ದು ಮತ್ತು ಎಲ್ಲ ಸಾಧ್ಯತೆಗಳು ಅದರಲ್ಲಿ ಅಂತರ್ನಿಹಿತವಾಗಿರುತ್ತವೆ. ಅದರ ಮೂಲ ದರ್ಶನದಲ್ಲಿ ಯಾವುದೊಂದರ ರಹಸ್ಯದ ಆವಶ್ಯಕತೆ ಇದೆ ಎಂದು ಕಂಡುಕೊಂಡದ್ದನ್ನು ಅದು ಕಾರ್ಯಗತ–ಗೊಳಿಸಬಲ್ಲದು. ಸಹಜವಾಗಿ ಜಗತ್ತಿನ ಮೊದಲ ಕಾರಣ ಭಗವಂತ, ಆದಾಗ್ಯೂ ಈ ವಾಸ್ತವತೆಯನ್ನು ಕುರಿತು ಮಾನಸಿಕವಾಗಿ ನಮ್ಮ ಕ್ಷುದ್ರ ನೈತಿಕ ಮೌಲ್ಯಗಳಿಗನುಗುಣವಾಗಿ ನ್ಯಾಯತಃ ತೀರ್ಮಾನಿಸದಂತೆ ಕಾಳಜಿ ವಹಿಸಬೇಕು. ಆದರೆ ಒಮ್ಮೆ ಬ್ರಹ್ಮಾಂಡದ ನಿಯಮಗಳನ್ನು ರೂಪಿಸಿದಾಗ ಮತ್ತು ಭಗವಂತನಿಗೆ ಅತ್ಯಂತ ವಿರುದ್ಧವಾದದ್ದೆಂದು ಎನಿಸುವ ಅಚೇತನದಲ್ಲಿ ಅವನು ತೊಡಗಿ–ಕೊಳ್ಳುವುದನ್ನು ಪ್ರಗತಿಪರ ಪ್ರಕಟಣೆಯ ಆಧಾರವೆಂದು ಒಪ್ಪಿಕೊಂಡಾಗ ಉಚ್ಚತರ ಹಾಗೂ ನಿಮ್ನತರವಾದವುಗಳಲ್ಲಿ ವಿಭಜನೆ ಉಂಟಾಯಿತು. ಜಗತ್ತಿನ ಇತಿಹಾಸ ದೈವೀಸತ್ಯ ಹಾಗೂ ಮಿಥ್ಯೆ ಇವುಗಳ ನಡುವಿರುವ ಸಮರದ್ದಾಯಿತು. ಆ ಸಮರದಲ್ಲಿಯ ವಿವರಗಳೆಲ್ಲವೂ ಭಗವಂತನ ಪ್ರಗತಿಪರ ಕ್ರಿಯೆಯ ಪ್ರತಿನಿಧಿ

ಸ್ವರೂಪದವಲ್ಲ, ಆದರೆ ಅದಕ್ಕೂ ಹೆಚ್ಚಾಗಿ ಕೆಳಮಟ್ಟದ ಪ್ರಕೃತಿ ಒಡ್ಡಿದ ಪ್ರತಿರೋಧದ ಮೊತ್ತದಿಂದಾದ ವಿರೂಪಗಳನ್ನು ಕುರಿತಾಗಿವೆ. ಇಂತಹ ಪ್ರತಿರೋಧ ಇಲ್ಲದೇ ಹೋಗಿದ್ದರೆ ಜಗತ್ತಿನಲ್ಲಿ ಜಯಿಸಬೇಕಾದದ್ದು ಏನೂ ಇರುತ್ತಿರಲಿಲ್ಲ, ಏಕೆಂದರೆ ಜಗತ್ತು ಸಾಮರಸ್ಯದಿಂದ ಇರುತ್ತಿತ್ತು, ಒಂದು ಪರಿಪೂರ್ಣತೆಯಿಂದ ಇನ್ನೊಂದು ಪರಿಪೂರ್ಣತೆಯತ್ತ ಸಾಗಿ ಹೋಗುತ್ತಿತ್ತು, ಅದರ ಸ್ಥಾನದಲ್ಲಿ ಸಂಘರ್ಷವಿದೆ, ಅಪಾಯ(hazard)ಗಳ ಲೀಲೆಯಿದೆ ಮತ್ತು ಅನೇಕ ಸಾಧ್ಯತೆಗಳಿವೆ, ಅವುಗಳಲ್ಲಿ ಭಗವಂತ ನಿಜವಾದ ತೊಂದರೆಯನ್ನು, ವಿರೋಧವನ್ನು ಮತ್ತು ಕೊನೆಯ ವಿಜಯಕ್ಕಾಗಿ, ಬಹಳಷ್ಟು ಸಲ, ಮಾರ್ಗದಲ್ಲಿ ತಾತ್ಕಾಲಿಕ ಸೋಲನ್ನು ಎದುರಿಸುತ್ತಾನೆ. ಕೇವಲ ಇಡೀ ಲೀಲೆಯ ಈ ನೈಜತೆಯೇ ಅದನ್ನು ತಮಾಷೆಯ ವಿಷಯವನ್ನಾಗಿ ಮಾಡುವುದಿಲ್ಲ. ದೈವೀ ಸಂಕಲ್ಪ, ವಾಸ್ತವದಲ್ಲಿ, ಅವಿದ್ಯೆಯಲ್ಲಿರುವ ವಿರೋಧೀ ಶಕ್ತಿಗಳ ಸ್ಪರ್ಶಕ್ಕೊಳಗಾಗಿ ವಿರೂಪಕ್ಕೊಳಗಾಗುವ ವೇದನೆಗೆ ಒಳಗಾಗುತ್ತದೆ. ಹಾಗಾಗಿ ಜಗತ್ತನ್ನು ಬದಲು ಮಾಡುವ ಮತ್ತು ಬೇರೆ ಕ್ರಮಬದ್ಧತೆಯನ್ನು ತರುವ ನಮ್ಮ ಪ್ರಯತ್ನಗಳನ್ನು ನಿಧಾನಗೊಳಿಸಬಾರದು. ಭಗವಂತನೊಂದಿಗೆ ಸಹಕಾರ ನೀಡಲು ನಾವು ಜಾಗರೂಕರಾಗಿರಬೇಕು ಮತ್ತು ಸಂಭವಿಸುವುದೆಲ್ಲ ಯಾವಾಗಲೂ ಒಳ್ಳೆಯದಕ್ಕಾಗಿಯೇ ಆಗುತ್ತದೆ ಎಂದು ಸೌಮ್ಯವಾಗಿ ಯೋಚಿಸಬಾರದು. ಎಲ್ಲವೂ ವೈಯಕ್ತಿಕ ಮನೋಭಾವದ ಮೇಲೆ ಅವಲಂಬಿಸಿರುತ್ತದೆ. ಸಂಭವಿಸಲಿರುವ ಪರಿಸ್ಥಿತಿಗಳ ಸಮ್ಮುಖದಲ್ಲಿ ನೀವು ಸಾಧ್ಯವಿದ್ದಷ್ಟು ಉಚ್ಚಮಟ್ಟದ ಮನೋಭಾವವನ್ನು ಹೊಂದಿರಬೇಕು, – ಎಂದರೆ ನಿಮ್ಮ ಅಳವಿನಲ್ಲಿರುವ ಅತ್ಯುಚ್ಚ ಮಟ್ಟದ ಪ್ರಜ್ಞೆಯೊಂದಿಗೆ ಸಂಪರ್ಕದಲ್ಲಿದ್ದರೆ – ಅಂತಹ ಸಂದರ್ಭದಲ್ಲಿ ಸಂಭವಿಸುವುದೆಲ್ಲ, ಅತ್ಯಂತ ಒಳ್ಳೆಯದಾಗಿರುತ್ತದೆ ಎಂಬುದರ ಬಗ್ಗೆ ನೀವು ನಿಶ್ಚಿತತೆ ಹೊಂದಬಹುದು. ಆದರೆ ಈ ಪ್ರಜ್ಞೆಯಿಂದ ಕೆಳ ಮಟ್ಟದ ಸ್ಥಿತಿಯಲ್ಲಿ ಪತನಗೊಂಡ ಕೂಡಲೆ, ಆಗ ಸಂಭವಿಸುವುದೆಲ್ಲ ಅತ್ಯಂತ ಒಳ್ಳೆಯದಾಗಿರುವುದಿಲ್ಲ, ಏಕೆಂದರೆ ನೀವು ನಿಮ್ಮ ಅತ್ಯಂತ ಒಳ್ಳೆಯ ಪ್ರಜ್ಞೆಯಲ್ಲಿರುವುದಿಲ್ಲ. ಶ್ರೀ ಅರವಿಂದರು ಒಮ್ಮೆ ಹೇಳಿದ್ದು ಹೀಗಿದೆ: "ಸಂಭವಿಸಿದ್ದು ಸಂಭವಿಸಲೇಬೇಕಾಗಿತ್ತು, ಆದರೆ ಅದು ಇನ್ನೂ ಹೆಚ್ಚು ಒಳ್ಳೆಯ ರೀತಿಯಲ್ಲಿ ಆಗಬಹುದಾಗಿತ್ತು." ಏಕೆಂದರೆ ಯಾವ ವ್ಯಕ್ತಿಗೆ ಅದು ಸಂಭವಿಸಿತ್ತೋ ಅವನು ತನ್ನ ಅತ್ಯುಚ್ಚ ಪ್ರಜ್ಞೆಯಲ್ಲಿರಲಿಲ್ಲ, ಹಾಗಾಗಿ ಬೇರೆ ಪರಿಣಾಮ ಸಾಧ್ಯವಾಗಲಿಲ್ಲ, ಆದರೆ ಅವನು ಭಗವಂತನ ಅವರೋಹಣವಾಗುವಂತೆ ಮಾಡಿದ್ದರೆ, ಆಗ ಸರ್ವ ಸಾಧಾರಣವಾಗಿ ಆ ಪರಿಸ್ಥಿತಿ ಅನಿವಾರ್ಯವಾಗಿದ್ದರೂ ಕೂಡ, ಅದು ಭಿನ್ನ



ರೀತಿಯ ತಿರುವು ಪಡೆಯಬಹುದಾಗಿತ್ತು. ಎಲ್ಲ ವ್ಯತ್ಯಾಸ ದೈವೀ ಸಂಕಲ್ಪದ ಪ್ರಚೋದನೆಯನ್ನು ನೀವು ಯಾವ ರೀತಿಯಲ್ಲಿ ಸ್ವೀಕರಿಸುತ್ತೀರಿ ಎಂಬುದರ ಮೇಲೆ ಅವಲಂಬಿಸಿರುತ್ತದೆ.

**(CWM, 3/169–70)**

*

**ಕೊನೆಯ ಶಬ್ದವನ್ನು ದೈವೀಸತ್ಯ ಹೊಂದಿರುತ್ತದೆ**

**ಪ್ರಶ್ನೆ :** *ಮಧುರ ಮಾತೆಯವರೆ, ಒಳ್ಳೆಯದು ಮತ್ತು ಸತ್ಯವಾದದ್ದು ಜಯ ದೊರಕಿಸುತ್ತದೆ ಎಂದು ಹೇಳಲಾಗಿದೆ, ಆದರೆ ನಾವು ಜೀವನದಲ್ಲಿ ನೋಡುತ್ತಿರುವುದು ಬೇರೆಯ ರೀತಿಯದಾಗಿದೆ. ದುಷ್ಟ ಜನರು ಜಯ ಗಳಿಸುತ್ತಾರೆ. ಹೇಗೋ ಅವರನ್ನು ವೇದನೆಯಿಂದ ರಕ್ಷಿಸಲಾಗುತ್ತದೆ ಎಂಬಂತೆ ತೋರಿಬರುತ್ತದೆ.*

**ಶ್ರೀಮಾತೆ :** ಎರಡು ವಿಚಾರಗಳನ್ನು ಕುರಿತು ಜನರಲ್ಲಿ ಗೊಂದಲವಿದೆ. ಅದು ವಿಶ್ವಂಭರ ಮತ್ತು ಆಧ್ಯಾತ್ಮಿಕ ದೃಷ್ಟಿಕೋನದಿಂದ, ಸಕಾರಾತ್ಮಕವಾಗಿ ಜನರು ಅರ್ಥ ಮಾಡಿಕೊಳ್ಳುವ ರೀತಿಯಲ್ಲಲ್ಲ, ಆದರೆ ನಿಜವಾದ ದೈವೀಸತ್ಯ ಕೊನೆಯ ಶಬ್ದವನ್ನು ಹೊಂದಿರುತ್ತದೆ ಎಂದರೆ ಕೊನೆಗೆ ಭಗವಂತ ಜಯಶಾಲಿಯಾಗುತ್ತಾನೆ. ಹೇಳಲಾಗಿದ್ದುದು ಅದು, ಆಧ್ಯಾತ್ಮಿಕ ಜೀವನವನ್ನು ನಡೆಸಿದವರೆಲ್ಲ ಅದನ್ನೇ ಹೇಳಿದ್ದಾರೆ – ಅದು ಪರಿಪೂರ್ಣ ವಾಸ್ತವ ಸಂಗತಿ. ಅದನ್ನು ಅರ್ಥೈಸುತ್ತ ಜನರು ಹೇಳುತ್ತಾರೆ: "ನಾನು ಒಳ್ಳೆಯ ಹುಡುಗ, ನಾನು ಸತ್ಯವೆಂದು ಯೋಚಿಸುವ ರೀತಿಯಲ್ಲಿ ಜೀವಿಸುತ್ತೇನೆ, ಆದ್ದರಿಂದ, ಎಲ್ಲ ಅಸ್ತಿತ್ವ ನನಗೆ ಒಳ್ಳೆಯದಾಗಿರಬೇಕು." (ಶ್ರೀಮಾತೆಯವರು ನಗುತ್ತಾರೆ). ಮೊಟ್ಟಮೊದಲಿಗೆ ಹೇಳುವುದಾದರೆ ಮನುಷ್ಯ ತನ್ನ ಬಗೆಗೆ ಹೊಂದಿರುವ ಮೆಚ್ಚಿಕೆ ಯಾವಾಗಲೂ ಸಂಶಯಾಸ್ಪದವಾದದ್ದು, ಮತ್ತು ನಂತರ, ಜಗತ್ತು ಸದ್ಯ ಅದಿರುವ ಹಾಗೆ ಅದರಲ್ಲಿ ಎಲ್ಲವೂ ಮಿಶ್ರಣಕ್ಕೊಳಗಾಗಿದೆ, ಅರ್ಧ ಅಂಧವಾದ ಮಾನವ ಪ್ರಜ್ಞೆಗೆ ದೈವೀಸತ್ಯದ ನಿಯಮ, ಬಹಿರಂಗವಾಗಿ ತನ್ನನ್ನು ತೋರಿಸಿಕೊಡುವುದಿಲ್ಲ. ಆ ಮಾನವ ಪ್ರಜ್ಞೆ ಅದನ್ನು ಅರ್ಥ ಮಾಡಿಕೊಳ್ಳಲಾರದು. ಹೆಚ್ಚು ನಿಖರವಾಗಿ ಹೇಳುವುದಾದರೆ ಸತತ ತನ್ನನ್ನು ಸಿದ್ಧಿಸಿಕೊಳ್ಳುತ್ತಿರುವುದು ಪರಮೋಚ್ಚ ದರ್ಶನ, ಆದರೆ ಮಿಶ್ರಣಕ್ಕೊಳಗಾದ ಭೌತಿಕ ಜಗತ್ತಿನಲ್ಲಿ ಅದರ ಸಿದ್ಧಿ, ಅಜ್ಞಾನಿ ಮಾನವ ದೃಷ್ಟಿಗೆ, ಜನರು ಒಳ್ಳೆಯದು ಹಾಗೂ ನಿಜವಾದದ್ದು ಎಂದು ಕರೆಯುವಂತಹದಾದ ಅದಕ್ಕೆ ಒಳ್ಳೆಯದರ ವಿಜಯ ಎಂದು

ಕಂಡುಬರುವುದಿಲ್ಲ. ಆದರೆ ತಮಾಷೆ ಮಾಡುವ ರೀತಿಯಲ್ಲಿ ಹೇಳುವುದಾದರೆ, ಅದು ದೈವೀ ಪ್ರಭುವಿನ ದೋಷವಲ್ಲ. ಆ ದೋಷ ಜನರದಾಗಿರುತ್ತದೆ! ಎಂದರೆ ದೈವೀ ಪ್ರಭು, ತಾನೇನು ಮಾಡುತ್ತಿದ್ದೇನೆ ಎಂಬುದನ್ನು ತಿಳಿದಿರುತ್ತಾನೆ ಮತ್ತು ಮನುಷ್ಯನು ಅದನ್ನು ಅರ್ಥ ಮಾಡಿಕೊಳ್ಳುವುದಿಲ್ಲ.

**ಪ್ರಶ್ನೆ :** *ಸತ್ಯವಾದ ಜಗತ್ತಿನಲ್ಲಿ, ಬಹುಶಃ ಎಲ್ಲವೂ ಸದ್ಯ ಇದ್ದ ಹಾಗೇ ಇರುವುದು, ಆದರೆ ಅದನ್ನು ಭಿನ್ನವಾಗಿ ನೋಡಲಾಗುವುದು.*

**ಶ್ರೀಮಾತೆ :** ಎರಡೂ ಬಗೆಯದಿರುತ್ತದೆ. ಅಲ್ಲಿ ಭಿನ್ನತೆ ಇರುವುದು. ಅದು ಜಗತ್ತಿನಲ್ಲಿರುವ ಸದ್ಯದ ಅಜ್ಞಾನ ಹಾಗೂ ಮಬ್ಬುತನ ಇವು ದೈವೀ ಕ್ರಿಯೆಗೆ ವಿರೂಪಗೊಳಿಸುವ ತೋರಿಕೆಯನ್ನು ಕೊಡುತ್ತಿವೆ, ಅದು ಸ್ವಾಭಾವಿಕವಾಗಿ ಮಾಯವಾಗುವ ಪ್ರವೃತ್ತಿಯನ್ನು ಹೊಂದಬೇಕು, ಆದರೆ ಹಾಗೆಯೇ ಸತ್ಯವಾದ ವಿಷಯವೆಂದರೆ ವಸ್ತು–ವಿಷಯಗಳನ್ನು ನೋಡುವ ರೀತಿಯಿದೆ, ಅವುಗಳ ತೋರಿಕೆಗೆ ಮತ್ತೊಂದು ಅರ್ಥ ಕೊಡುತ್ತದೆ ... ಅವೆರಡೂ ಅಲ್ಲಿವೆ, ಈ ರೀತಿಯಲ್ಲಿ (ಶ್ರೀಮಾತೆಯವರು ಒಂದರೊಳಗೊಂದು ಸೇರಿಕೊಂಡಿರುವುದರ ಸಂಜ್ಞೆ ಮಾಡುತ್ತಾರೆ.)

ಮನುಷ್ಯನ ತೀರ್ಮಾನ ತಪ್ಪಾಗಿರುತ್ತದೆ ಎಂಬ ಅದೇ ವಿಷಯಕ್ಕೆ ಮರಳಿ ಬರುತ್ತೀರಿ. ಏಕೆಂದರೆ ವಸ್ತು–ವಿಷಯಗಳ ದರ್ಶನ ತಪ್ಪಾಗಿರುತ್ತದೆ ಮತ್ತು ಅಪೂರ್ಣವಾಗಿರುತ್ತದೆ – ಮತ್ತು ಈ ತೀರ್ಮಾನ ಅವಶ್ಯವಾಗಿ ತಪ್ಪಾದ ಪರಿಣಾಮಗಳನ್ನು ಹೊಂದಿರಲೇಬೇಕು.

ಜಗತ್ತು ನಿರಂತರವಾಗಿ ಬದಲಾಗುತ್ತಿರುತ್ತದೆ, ನಿರಂತರವಾಗಿ; ಒಂದು ಕ್ಷಣಕಾಲ ಕೂಡ ಅದರ ಹಾಗೆ ಅದಿರುವುದಿಲ್ಲ ಮತ್ತು ಸರ್ವಸಾಮಾನ್ಯ ಸಾಮರಸ್ಯದಲ್ಲಿ ತನ್ನನ್ನು ಹೆಚ್ಚು ಹೆಚ್ಚಾಗಿ ಅಭಿವ್ಯಕ್ತಿಗೊಳಿಸುತ್ತಿರುತ್ತದೆ, ಹಾಗಾಗಿ ತದ್ವಿರುದ್ಧವಾದ ತೋರಿಕೆಗಳು ಇದ್ದಾಗಲೂ ಯಾವುದೂ ಅದಿದ್ದ ಹಾಗೆ ಉಳಿದುಕೊಳ್ಳಲಾರದು, ಇಡಿಯಾದದ್ದು ಯಾವಾಗಲೂ ಪ್ರಗತಿ ಪಥದಲ್ಲಿರುತ್ತದೆ; ಸಾಮರಸ್ಯ ಹೆಚ್ಚು ಹೆಚ್ಚಾಗಿ ಸಾಮರಸ್ಯವುಳ್ಳದ್ದಾಗುತ್ತದೆ, ದೈವೀ ಪ್ರಕಟಣೆಯಲ್ಲಿ ಸತ್ಯ ಇನ್ನೂ ಹೆಚ್ಚಿನ ಸತ್ಯವಾಗುತ್ತದೆ. ಆದರೆ ಅದನ್ನು ಕಾಣಲು ಮನುಷ್ಯ ಇಡಿಯಾದುದನ್ನು ನೋಡಬೇಕು, ಮತ್ತು ಮನುಷ್ಯ, ಮಾನವ ಪ್ರಾಂತವನ್ನೂ ಕೂಡ ನೋಡುವುದಿಲ್ಲ, ಆದರೆ ಕೇವಲ ತನ್ನ ವೈಯಕ್ತಿಕ ಪ್ರಾಂತವನ್ನಷ್ಟೇ



ನೋಡುತ್ತಾನೆ, ಅದು ಅತ್ಯಂತ ಚಿಕ್ಕದಾದದ್ದು, ಸೂಕ್ಷ್ಮದರ್ಶಕ(microscope)ದಲ್ಲಿ ಕಂಡುಬರುವಂತಹದು – ಅವನು ಅರ್ಥ ಮಾಡಿಕೊಳ್ಳಲಾರ.

ಅದು ತನ್ನನ್ನೇ ಸಂಪೂರ್ಣವಾಗಿಸುತ್ತ ಹೋಗುತ್ತಿರುವ ದ್ವಿವಿಧ ವಿಷಯ (ಒಂದರೊಳಗೊಂದು ಸೇರಿಕೊಂಡಿರುವ ಅದೇ ಸಂಜ್ಞೆ) ಮತ್ತು ಅದು ಪರಸ್ಪರ ಕ್ರಿಯೆಯೊಂದಿಗಿರುತ್ತದೆ: ದೈವೀ ಪ್ರಕಟಣೆ ತನ್ನ ಬಗ್ಗೆ ಹೆಚ್ಚು ಪ್ರಜ್ಞಾಪೂರ್ಣವಾದ ಹಾಗೆ ಅದರ ಅಭಿವ್ಯಕ್ತಿ ತನ್ನನ್ನು ಪರಿಪೂರ್ಣಗೊಳಿಸುತ್ತದೆ, ಹೆಚ್ಚು ಸತ್ಯವಾದದ್ದಾಗುತ್ತದೆ. ಆ ಎರಡೂ ಚಲನೆಗಳು ಒಟ್ಟಿಗೆ ಸಾಗುತ್ತವೆ...

(ಮೌನ)

ಸಂದರ್ಭ ಯಾವುದೇ ಇರಲಿ, ಆ ಪ್ರಶ್ನೆಯನ್ನು ಲೌಕಿಕ ಮಟ್ಟಕ್ಕೆ ತಂದು ಹೇಳುವುದಾದರೆ, ಯಾವ ಕಾಲದಲ್ಲೂ, ಯಾವ ಋಷಿಯೂ: "ಒಳ್ಳೆಯವರಾಗಿರಿ ಮತ್ತು ಬಾಹ್ಯದಲ್ಲಿ ಎಲ್ಲವೂ ಸರಿಯಾಗುವುದು" ಎಂದು ಎಂದಿಗೂ ಹೇಳಿಲ್ಲ, ಎಂದು ನನಗನಿಸುತ್ತದೆ. ಏಕೆಂದರೆ ಅದೊಂದು ಹೆಡ್ಡತನ. ಅವ್ಯವಸ್ಥೆ ಇರುವ ಜಗತ್ತಿನಲ್ಲಿ ಅದರ ಬಗ್ಗೆ ಭರವಸೆ ಹೊಂದಿರುವುದು ತರ್ಕಬದ್ಧವಾಗಿರುವುದಿಲ್ಲ. ಆದರೆ ನೀವು ಸಾಕಷ್ಟು ನಿಷ್ಕಪಟರಾಗಿದ್ದರೆ, ನೀವಿರುವ ರೀತಿಯಲ್ಲಿ ಇಡಿಯಾದವರು ಆಗಿದ್ದರೆ, ಪರಿಸ್ಥಿತಿಗಳು ಎಂತಹವೇ ಆಗಿರಲಿ, ಆಂತರಿಕ ಸಂತೋಷವನ್ನು, ಪೂರ್ತಿ ತೃಪ್ತಿಯನ್ನು ಹೊಂದಬಲ್ಲಿರಿ, ಮತ್ತು ಅದನ್ನು ಯಾರೂ, ಯಾವುದೂ ಸ್ಪರ್ಶಿಸುವ ಸಾಮರ್ಥ್ಯ ಹೊಂದಿರುವುದಿಲ್ಲ.

**(CWM, 11/75–77)**

*

### ದೈವೀ ನ್ಯಾಯ

ನೀವು ಹೊರಹಾಕುವ ಕಂಪನಗಳು ನಿಮ್ಮನ್ನು ಅವುಗಳಿಗೆ ಅನುಗುಣವಾದ ಕಂಪನಗಳ ಸಂಪರ್ಕದಲ್ಲಿ ತರುತ್ತವೆ. ನೀವು ಹಾನಿಕಾರಕ, ವಿನಾಶಕಾರಿ ಕಂಪನಗಳನ್ನು ಹೊರಹಾಕಿದರೆ, ಬಹಳ ಸ್ವಾಭಾವಿಕವಾಗಿ, ಅವುಗಳಿಗೆ ಅನುಗುಣವಾದ ಕಂಪನಗಳನ್ನು ನಿಮ್ಮೆಡೆಗೆ ಎಳೆದುಕೊಳ್ಳುತ್ತೀರಿ, ಮತ್ತು ನಿಜವಾದ ಶಿಕ್ಷೆ (ನೀವು ಈ ಶಬ್ದವನ್ನು ಉಪಯೋಗಿಸಲು ಬಯಸಿದರೆ)ಯಾಗಿರುತ್ತದೆ, ಆದರೆ ಅದು ಜಗತ್ತನ್ನು ಕುರಿತು ಇರುವ ದೈವೀ ಸಂಘಟನೆಗೆ ಎಳ್ಳಷ್ಟೂ ಅನುಗುಣ–ವಾಗಿರುವುದಿಲ್ಲ.

ಪ್ರತಿಯೊಂದು ಕ್ರಿಯೆಗೆ ಅದರ ಪರಿಣಾಮಗಳಿರುತ್ತವೆ, ಆ ಕ್ರಿಯೆ ಒಳ್ಳೆಯದೇ ಆಗಿರಲಿ ಇಲ್ಲವೆ ಕೆಟ್ಟದ್ದಾಗಿರಲಿ, ಆದರೆ ಬಹುಮಾನ ಇಲ್ಲವೆ ಶಿಕ್ಷೆ ಇವುಗಳ ವಿಚಾರ ಕೇವಲ ಮಾನವ ವಿಚಾರವಾಗಿರುತ್ತದೆ ಮತ್ತು ಸತ್ಯಪ್ರಜ್ಞೆ (ಋತಚಿತ್) ಕಾರ್ಯ–ಕೈಕೊಳ್ಳುವ ರೀತಿಗೆ ಎಳ್ಳಷ್ಟೂ ಅನುಗುಣವಾಗಿರುವುದಿಲ್ಲ.

ಜಗತ್ತನ್ನಾಳುವ ದೈವೀ ಪ್ರಜ್ಞೆ, ಶಿಕ್ಷೆ ಮತ್ತು ಬಹುಮಾನ ಇವುಗಳ ತತ್ವಗಳ ಪ್ರಕಾರ ಕ್ರಿಯೆ ಕೈಕೊಂಡಿದ್ದರೆ, ಪೃಥ್ವಿಯ ಮೇಲೆ ಯಾವ ಮನುಷ್ಯರೂ ದೀರ್ಘಕಾಲ ಉಳಿದುಕೊಳ್ಳುತ್ತಿರಲಿಲ್ಲ. ಮನುಷ್ಯರು ದೈವೀಕಂಪನಗಳನ್ನು ವಿರೂಪಗೊಳಿಸದೆ ಕಳಿಸಿಕೊಡಲು ಸಾಕಷ್ಟು ಪರಿಶುದ್ಧರಾದಾಗ ಜಗತ್ತಿನಿಂದ ವೇದನೆಯನ್ನು ತೆಗೆದು ಹಾಕಲಾಗುವುದು. ಇರುವ ಮಾರ್ಗ ಕೇವಲ ಅದೊಂದೇ.

**(CWM, 12/379)**

*

ಇಲ್ಲಿ ಕಾರ್ಯನಿರತವಾಗಿರುವ ದೈವೀ ಪ್ರಜ್ಞೆ ಇದೆ. ದೈವೀ ಪ್ರಜ್ಞೆಯ ವಿರುದ್ಧ ಹೋಗುವ ಪ್ರತಿಯೊಬ್ಬ ಅದನ್ನು ಕೈಕೊಂಡ ಪ್ರತಿಸಲ ತನ್ನ ಪ್ರಜ್ಞೆಯಲ್ಲಿ ಒಂದಿಷ್ಟನ್ನು ಕಳೆದುಕೊಳ್ಳುತ್ತಾನೆ. ದೈವೀ ಪ್ರಜ್ಞೆಯ ವಿರುದ್ಧ ಏನೋ ಒಂದನ್ನು ಮಾಡಿದಾಗ, ಅವನು ಕೆಳಸ್ತರಕ್ಕೆ ಇಳಿದು ಹೋಗುತ್ತಾನೆ. ದೈವೀ ಪ್ರಜ್ಞೆಗೆ ಅನುಗುಣವಾಗಿ ಕಾರ್ಯಕೈಕೊಂಡ ಪ್ರತಿಯೊಬ್ಬ ಪ್ರತಿಸಲ, ತನ್ನ ಪ್ರಜ್ಞೆಯಲ್ಲಿ ಲಾಭ ಗಳಿಸುತ್ತಾನೆ.

**(CWM, 13/51)**

*

### ದೈವೀ ತೀರ್ಮಾನ

ಭಗವಂತ ಚಿಕ್ಕ ಮಾನವನ ರೀತಿಯ ತೀರ್ಮಾನ ನೀಡುತ್ತಾನೆ ಎಂದು ನೀವು ಯೋಚಿಸುವಿರಿ. ಭಗವಂತನ ಮೇಲೆ ಮಾನವ ವಿಚಾರಗಳನ್ನು ಪ್ರಕ್ಷೇಪಿಸಬಾರದು. ನೀವು ನಿಷ್ಕಪಟರಾಗಿರದೆ ಇದ್ದಾಗ ಸಂಭವಿಸುವುದೇನೆಂದರೆ ನಿಮ್ಮದೇ ಪ್ರಜ್ಞೆಯ ಮೇಲೆ ಮುಸುಕು ಹಾಕಲಾಗುತ್ತದೆ. ಸುಳ್ಳು ಮಾತನಾಡುವ ಮನುಷ್ಯನ ಉದಾಹರಣೆಯನ್ನು ತೆಗೆದುಕೊಳ್ಳೋಣ. ಅವನ ಪ್ರಜ್ಞೆ ಮುಸುಕಿನೊಳಗೆ ಸೇರಿಕೊಳ್ಳುತ್ತದೆ, ಸ್ವಲ್ಪ ಕಾಲದ ನಂತರ ಅವನಿಗೆ ಸತ್ಯ ಮತ್ತು ಮಿಥ್ಯೆ ಇವುಗಳ ನಡುವಿರುವ ಭಿನ್ನತೆಯನ್ನು ಗುರುತಿಸಲು ಸಾಧ್ಯವಾಗುವುದಿಲ್ಲ. ಅವನು ಪ್ರತೀಕಗಳನ್ನು ನೋಡುತ್ತಾನೆ ಮತ್ತು ಅವುಗಳು ಸತ್ಯವಾದವುಗಳು ಎಂದು



ಕರೆಯುತ್ತಾನೆ. ದುಷ್ಟನಾದವನು, ತನ್ನ ಅಭೀಪ್ಸೆಯನ್ನು, ಸಿದ್ಧಿಸಿಕೊಳ್ಳುವ ಕ್ಷಮತೆಯನ್ನು, ಅರ್ಥಮಾಡಿಕೊಳ್ಳುವ, ಭಾವನೆಗೆ ತಂದುಕೊಳ್ಳುವ ಮತ್ತು ಸಿದ್ಧಿಸಿಕೊಳ್ಳುವ ಎಲ್ಲ ಸಾಧ್ಯತೆಯನ್ನು ಕಳೆದುಕೊಳ್ಳುತ್ತಾನೆ. ಅದೇ ಶಿಕ್ಷೆ.

ತನ್ನ ಹಾಗೂ ಭಗವಂತನ ನಡುವೆ ಮನುಷ್ಯ ಪರದೆಯನ್ನಿರಿಸುತ್ತಾನೆ, ಅಡೆತಡೆಗಳನ್ನೊಡ್ಡುತ್ತಾನೆ. ಆ ರೀತಿಯಲ್ಲಿ ಅವನು ತನ್ನನ್ನು ತಾನೇ ಶಿಕ್ಷೆಗೊಳ–ಪಡಿಸುತ್ತಾನೆ. ಭಗವಂತ ಹಿಂದೆ ಸರಿದು ಹೋಗುವುದಿಲ್ಲ, ಮನುಷ್ಯನೇ ಸ್ವತಃ ಅವನನ್ನು ಸ್ವೀಕರಿಸಲು ಅಸಮರ್ಥನನ್ನಾಗಿ ಮಾಡಿಕೊಳ್ಳುತ್ತಾನೆ. ಈ ರೀತಿಯಲ್ಲಿ ಭಗವಂತ ಬಹುಮಾನಗಳನ್ನು, ಶಿಕ್ಷೆಯನ್ನು ಹಂಚುವುದಿಲ್ಲ, ಅದು ಆ ರೀತಿಯದಾಗಿರುವುದಿಲ್ಲ.

ಮನುಷ್ಯ ನಿಷ್ಕಪಟನಾಗಿರದೇ ಇದ್ದಾಗ, ಅವನಲ್ಲಿ ದುಷ್ಟ ಸಂಕಲ್ಪವಿದ್ದಾಗ, ಅವನು ದ್ರೋಹಿಯಾಗಿದ್ದಾಗ ತನ್ನನ್ನು ತಾನು ತತ್ಕ್ಷಣ ಶಿಕ್ಷೆಗೆ ಒಳಪಡಿಸಿ–ಕೊಳ್ಳುತ್ತಾನೆ. ಕುಟಿಲ ಜನರು, ತಾವು ದುಷ್ಟರಾಗಿದ್ದೇವೆ ಎಂಬುದನ್ನು ತಿಳಿಸಿಕೊಡಬಹುದಾದ ಚಿಕ್ಕ ಪ್ರಜ್ಞೆಯನ್ನೂ ಕೂಡ ಕಳೆದುಕೊಳ್ಳುತ್ತಾರೆ, ಪ್ರಜ್ಞಾರಹಿತ ಸ್ಥಿತಿಯಲ್ಲಿ ಇದ್ದವರಾಗುತ್ತಾರೆ.

ಅವರು ಇನ್ನು ಮುಂದೆ ಏನನ್ನೂ ಅರ್ಥಮಾಡಿಕೊಳ್ಳದೆ ಇರುವ ಸ್ಥಿತಿಯಲ್ಲಿ ಕೊನೆ ಕಂಡುಕೊಳ್ಳುತ್ತಾರೆ.

**(CWM, 4/21)**

*

### ಭಗವಂತ ಮಾನವ ಎಣಿಕೆಗಳಿಗೆ ಅನುಗುಣವಾಗಿ ಕಾರ್ಯ ಕೈಕೊಳ್ಳುವುದಿಲ್ಲ

ನನ್ನ ಮಗು, ಕೇಳು, ಭಗವಂತ ತನ್ನ ಕಾರ್ಯ ಕೈಕೊಳ್ಳುವ ರೀತಿಯಲ್ಲಿ ಎಂದಿಗೂ ಮಾನವನ ಎಣಿಕೆಗಳ ಮೂಲಕ ಸಾಗಿ ಹೋಗುವುದಿಲ್ಲ. ಅದನ್ನು ಒಮ್ಮೆಗೆ ಮತ್ತು ಎಲ್ಲ ಕಾಲಕ್ಕೆ ಸರಿಯಾಗಿ ನೆನಪಿನಲ್ಲಿಟ್ಟುಕೊಳ್ಳಬೇಕು. ಬಹುಶಃ ಅವನು, ತರ್ಕಗಳೆಂದು ನಾವು ಕರೆಯುವವುಗಳಿಲ್ಲದೆ, ಕಾರ್ಯ ಕೈಕೊಳ್ಳುತ್ತಾನೆ.

ಆದರೆ ಅದು ಏನೇ ಇರಲಿ, ಭಗವಂತನಿಗೆ ಕಾರಣಗಳಿದ್ದರೆ ಅವು ಮಾನವ ಕಾರಣಗಳ ಹಾಗಿರುವುದಿಲ್ಲ, ಮತ್ತು ನಿಶ್ಚಿತವಾಗಿ, ನ್ಯಾಯದ ಭಾವನೆ ಕುರಿತು ಜನರು ಅರ್ಥಮಾಡಿಕೊಂಡಿರುವ ರೀತಿಯಲ್ಲಿ ಅವನ ಭಾವನೆ ಇರುವುದಿಲ್ಲ.

ಉದಾಹರಣೆಗೆ ಸಂಪತ್ತಿಗಾಗಿ ಹಾತೊರೆಯುತ್ತಿರುವ ಮನುಷ್ಯನನ್ನು ನೀವು ಕಲ್ಪನೆಗೆ ತಂದುಕೊಳ್ಳಬಹುದು. ಹಣ ಗಳಿಸುವುದಕ್ಕಾಗಿ ಅವನು ಜನರಿಗೆ ಮೋಸ ಮಾಡಲು ಪ್ರಯತ್ನಿಸುತ್ತಾನೆ. ನ್ಯಾಯ ಕುರಿತು ನಿಮ್ಮ ವಿಚಾರದ ಪ್ರಕಾರ ಆ ಮನುಷ್ಯನಿಂದ ಎಲ್ಲ ಸಂಪತ್ತು ಹೊರಟು ಹೋಗಬೇಕು, ಅವನು ಬಡತನದಲ್ಲಿ ಜೀವಿಸಬೇಕು. ಆದರೆ ಸಾಮಾನ್ಯವಾಗಿ ಅದಕ್ಕೆ ವಿರುದ್ಧವಾದದ್ದನ್ನು ನಾವು ನೋಡುತ್ತೇವೆ. ಆದರೆ ಅದು ಕೇವಲ ತೋರಿಕೆಯಲ್ಲಿ ಕಂಡುಬರುವ ವಿಷಯ. ತೋರಿಕೆಗಳ ಹಿಂದೆ ಬೇರೆ ಇನ್ನೇನೋ ಇರುತ್ತದೆ ... ಅವನು ಇದನ್ನು ಬೇರೆ ಸಾಧ್ಯತೆಗಳಿಗಾಗಿ ವಿನಿಮಯ ಮಾಡಿಕೊಳ್ಳುತ್ತಾನೆ. ಅವನಲ್ಲಿ ಹಣವಿರಬಹುದು, ಆದರೆ ಪ್ರಜ್ಞೆ ಇನ್ನು ಮುಂದೆ ಉಳಿದುಕೊಂಡಿರುವುದಿಲ್ಲ. ಮತ್ತು ವಾಸ್ತವದಲ್ಲಿ, ಬಹುಮಟ್ಟಿಗೆ ಯಾವಾಗಲೂ ಸಂಭವಿಸುವುದೇನೆಂದರೆ, ಅವನು ಬಯಸಿದ ಹಣ ಅವನಲ್ಲಿದ್ದಾಗ ಸಂತುಷ್ಟನಾಗಿರುವುದಿಲ್ಲ. ಅವನಲ್ಲಿ ಹೆಚ್ಚಿನ ಪ್ರಮಾಣದಲ್ಲಿ ಹಣವಿದ್ದಾಗ ಸಾಮಾನ್ಯವಾಗಿ ಅವನ ಸಂತೋಷ ಕಡಿಮೆಯಾಗುತ್ತದೆ. ಅವನು ಗಳಿಸಿದ ಹಣದಿಂದ ಪೀಡಿತನಾಗಿರುತ್ತಾನೆ.

ವಿಷಯಗಳನ್ನು ನೀವು ಬಾಹ್ಯ ಯಶಸ್ಸಿನಿಂದ ಇಲ್ಲವೆ ಸೋಲಿನ ಹೊರ ನೋಟದಿಂದ ತೀರ್ಮಾನಕ್ಕೊಳಪಡಿಸಬಾರದು. ನಾವು ಹೇಳಬಹುದಾದುದೆಂದರೆ – ಸರ್ವಸಾಧಾರಣವಾಗಿ, ಬಹುಮಟ್ಟಿಗೆ ಸಂಭವಿಸುವುದು ಇದೇ ಆಗಿರುತ್ತದೆ – ಭಗವಂತ ಬೇಡಿದುದನ್ನು ಕೊಡುತ್ತಾನೆ, ಮತ್ತು ಕಲಿಯಬೇಕಾದ ಎಲ್ಲ ಪಾಠಗಳಲ್ಲಿ ಅದು ಅತ್ಯಂತ ಒಳ್ಳೆಯದಾದದ್ದು! ಏಕೆಂದರೆ ನಿಮ್ಮ ಆಸೆ ಅಚೇತನದ್ದು, ಮಬ್ಬಾದದ್ದು, ಅಹಂಕಾರದಿಂದ ಕೂಡಿದ್ದು ಆಗಿದ್ದರೆ ಪ್ರಜ್ಞಾರಹಿತತೆಯನ್ನು, ಅಂಧಕಾರವನ್ನು ಮತ್ತು ಅಹಂಮನ್ಯತೆಯನ್ನು ನಿಮ್ಮಲ್ಲಿಯೇ ನೀವು ಹೆಚ್ಚಾಗುವಂತೆ ಮಾಡುತ್ತೀರಿ, ಎಂದರೆ ಇದು ನಿಮ್ಮನ್ನು ಸತ್ಯದಿಂದ ಪ್ರಜ್ಞೆಯಿಂದ ಹಾಗೂ ಸಂತೋಷದಿಂದ ಬಹಳ ದೂರ ಕರೆದೊಯ್ಯುತ್ತದೆ. ಅದು ನಿಮ್ಮನ್ನು ಭಗವಂತನಿಂದ ಅತಿ ದೂರ ಕರೆದೊಯ್ಯುತ್ತದೆ ಮತ್ತು ಭಗವಂತನಿಗೆ ಸ್ವಾಭಾವಿಕವಾಗಿ, ಒಂದೇ ಒಂದು ವಿಷಯ ಸತ್ಯವಾಗಿರುತ್ತದೆ – ಅದು ದೈವೀ ಪ್ರಜ್ಞೆ ಮತ್ತು ದೈವೀ ಏಕತೆ. ಮತ್ತು ನೀವು ಭೌತಿಕ ವಸ್ತು–ವಿಷಯಗಳನ್ನು ಮುಂದಿರಿಸಿದ ಪ್ರತಿ ಸಲ, ಹೆಚ್ಚು ಹೆಚ್ಚಾಗಿ ಪ್ರಾಪಂಚಿಕರಾಗತೊಡಗುತ್ತೀರಿ ಮತ್ತು ಯಶಸ್ಸಿನಿಂದ ಬಹಳ ದೂರ ಸಾಗಿ ಹೋಗುತ್ತೀರಿ.

ಆದರೆ ದೈವೀಸತ್ಯಕ್ಕೆ ಆ ಇನ್ನೊಂದು ಯಶಸ್ಸು ಭಯಾನಕ ಸೋಲಾಗಿರುತ್ತದೆ. ನೀವು ಸತ್ಯವನ್ನು ಮಿಥ್ಯೆಗಾಗಿ ವಿನಿಮಯ ಮಾಡಿಕೊಂಡಿರುತ್ತೀರಿ!



ತೋರಿಕೆಗಳ ಆಧಾರದಿಂದ ಮತ್ತು ತೋರಿಕೆಯ ಯಶಸ್ಸಿನಿಂದ ತೀರ್ಮಾನಕ್ಕೆ ಬರುವುದು, ನಿಖರವಾಗಿ, ಸಂಪೂರ್ಣ ಅಜ್ಞಾನದಲ್ಲಿ ಕೈಕೊಂಡ ಕಾರ್ಯ–ವಾಗಿರುತ್ತದೆ. ಅತ್ಯಂತ ಕಠಿಣ ಹೃದಯದ ಮನುಷ್ಯನಿಗೂ ಕೂಡ, ತೋರಿಕೆಯಲ್ಲಿ, ಪ್ರತಿಯೊಂದು ಯಶಸ್ಸಿನ ರೂಪದಲ್ಲಿದ್ದವನಿಗೂ ಕೂಡ ಯಾವಾಗಲೂ ಪ್ರತಿರೂಪದ್ದಾದದ್ದು ಇರುತ್ತದೆ. ಮತ್ತು ಸತ್ತೆಯ ಈ ಬಗೆಯ ಕಠಿಣ ಹೃದಯವಿರುವಿಕೆ ಉತ್ಪನ್ನವಾದಾಗ ರೂಪುಗೊಂಡ ಈ ಮುಸುಕು ಬಾಹ್ಯ ಪ್ರಜ್ಞೆ ಹಾಗೂ ಆಂತರಿಕ ಸತ್ಯ ಇವುಗಳ ನಡುವೆ ದಟ್ಟವಾಗುತ್ತ ಹೋಗುತ್ತದೆ, ಒಂದಿಲ್ಲೊಂದು ದಿನ, ಒಟ್ಟಿನಲ್ಲಿ ಅಸಹನೀಯವಾಗುತ್ತದೆ. ಅದನ್ನು ಸಾಮಾನ್ಯವಾಗಿ ಬಾಹ್ಯ ಯಶಸ್ಸೆಂಬ ಬಹಳ ದುಬಾರಿ ವಿಷಯವನ್ನು ಅದಕ್ಕಾಗಿ ವಿನಿಯೋಗಿಸ–ಬೇಕಾಗಿರುತ್ತದೆ.

**(CWM, 6/238–39)** **– ಶ್ರೀಮಾತೆ**

*

**ದೈವೀಸತ್ಯ ಹಾಗೂ ಕರ್ಮದ ಸಂಕೀರ್ಣ ಜಾಲ**

ಕರ್ಮದ ನಿಯಮವು ವ್ಯಾವಹಾರಿಕ ನ್ಯಾಯ ಕುರಿತು ಕೇವಲ ಮಾನವ ವಿಚಾರದ ವಿಸ್ತರಣೆ ಮತ್ತು ಮುಂದೆ ಸಂಭವಿಸಲಿರುವ ಜನ್ಮಗಳಲ್ಲಿ ಈ ಜನ್ಮದಲ್ಲಾದ ತೋರಿಕೆಯ ಅನ್ಯಾಯವನ್ನು ಸರಿಪಡಿಸಿಕೊಳ್ಳುವುದಷ್ಟೇ ಆಗಿರುವುದಿಲ್ಲ! ಜಗತ್ತಿನ ಚೈತನ್ಯದ ಕಾರ್ಯಗತಿಗಳಲ್ಲಿ ಒಂದು ನ್ಯಾಯ ಇಲ್ಲವೆ ಅದಕ್ಕೂ ಹೆಚ್ಚಾಗಿ ನ್ಯಾಯಪರತೆ ಇರಲೇಬೇಕು. ಪ್ರಕೃತಿ, ನಿಶ್ಚಿತವಾಗಿ, ತನ್ನ ಮಾನದಂಡಗಳಲ್ಲಿ ಜಾಗರೂಕವಾಗಿರುತ್ತದೆ. ಆದರೆ ಮನುಷ್ಯನ ಜೀವನದಲ್ಲಿ ಎಣಿಕೆಗೆ ತೆಗೆದುಕೊಳ್ಳಬೇಕಾದ ಅನೇಕ ವಾಸ್ತವಾಂಶಗಳಿರುತ್ತವೆ, ಹಾಗೆಯೇ ಅಲ್ಲಿ ಹಂತಗಳು, ಮಜಲುಗಳು ಹಾಗೂ ದರ್ಜೆಗಳಿವೆ. ನಮ್ಮ ಸತ್ತೆಯ ಉಚ್ಚತರ ಸ್ತರದಲ್ಲಿ ವಿಷಯಗಳು ಒಂದೇ ರೀತಿಯವಾಗಿ ಕಾಣಿಸಿಕೊಳ್ಳುವುದಿಲ್ಲ, ಇಲ್ಲವೆ ಕೆಳ ಸ್ತರದಲ್ಲಿದ್ದಂತೆಯೂ ಕಂಡುಬರುವುದಿಲ್ಲ. ಮೊದಲ ಸಾಮಾನ್ಯ ಹಂತದಲ್ಲಿಯೂ ಕೂಡ ಹಲವಾರು ವಾಸ್ತವಾಂಶಗಳಿರುತ್ತವೆ. ಕೇವಲ ನೈತಿಕ–ಭೋಗೈಕ್ಯ ದೃಷ್ಟಿಯ ಮಾನದಂಡದವಷ್ಟೇ ಅಲ್ಲ. ಸದ್ಗುಣಿಯಾದ ಮನುಷ್ಯನಿಗೆ ಯಶಸ್ಸು ಹಾಗೂ ಸಂತೋಷಗಳ ರೂಪದಲ್ಲಿ ಪ್ರತಿಫಲ ದೊರಕಬೇಕು ಮತ್ತು ದುಷ್ಟ ಮನುಷ್ಯ ಎಂದಾದರೊಮ್ಮೆ ಅವನತಿ ಮತ್ತು ನೋವುಗಳ ರೂಪದಲ್ಲಿ ಶಿಕ್ಷೆಯಾಗಬೇಕು, – ಅದು ಪೃಥ್ವಿಯ ಮೇಲೆ ಇದೇ ಜೀವನದಲ್ಲಾಗಲಿ ಇಲ್ಲವೆ ಸ್ವರ್ಗ ಅಥವಾ

ನರಕದಲ್ಲಾಗಲಿ ಆಗಬಹುದು, – ಎಂದಿಷ್ಟೇ ಇದ್ದರೆ ಹಾಗೆಯೇ ಬಲಿಷ್ಠನಾದ ಮನುಷ್ಯ ಬೆಳೆಸಿಕೊಂಡು ಬಂದ ಬಲಕ್ಕೆ ಪ್ರತಿಫಲ, ಬೌದ್ಧಿಕ ಮನುಷ್ಯನಿಗೆ ಅವನು ಅಭಿವೃದ್ಧಿಪಡಿಸಿಕೊಂಡ ಕೌಶಲಕ್ಕೆ ಪ್ರತಿಫಲ, ಯಾವುದೇ ಕ್ಷೇತ್ರದಲ್ಲಿ ಸಂಕಲ್ಪ ಶ್ರಮ ವಹಿಸಿದಾಗ ಅದರ ಪ್ರಯತ್ನ ಹಾಗೂ ಕಾರ್ಯಗಳಿಗೆ ಪ್ರತಿಫಲ ಇರಬೇಕು. ಆದರೆ ನೀನು ಹೇಳುತ್ತಿರುವುದು ಅದು ನೈತಿಕವಾಗಿ, ಸಾರ್ವಜನಿಕರ ಅನುಮತಿಯ ಮೂಲಕ ಕಾರ್ಯ ಮಾಡುತ್ತಿಲ್ಲ ಎಂದು ನೀನು ಹೇಳುತ್ತಿರುವೆಯಾ?

ಸಂಕಲ್ಪ, ಕ್ರಿಯೆ ಹಾಗೂ ಪರಿಣಾಮ ಇವುಗಳ ಈ ಸಂಬಂಧದಲ್ಲಿ ಸರಿಯಾದ ಕಾರ್ಯಗತಿ ಎಂದರೇನು? ನಾನು ಧಾರ್ಮಿಕನಾಗಿರಬಹುದು, ಪ್ರಾಮಾಣಿಕ–ನಾಗಿರಬಹುದು, ಆದರೆ ನಾನು ದಡ್ಡ, ದುರ್ಬಲ ಹಾಗೂ ಅಸಮರ್ಥನಾಗಿದ್ದರೆ? ಮತ್ತು ನಾನು ಸ್ವಾರ್ಥಿ ಹಾಗೂ ಧಾರ್ಮಿಕ ಶ್ರದ್ಧೆ ಇಲ್ಲದವನು ಆಗಿರಬಹುದು, ಆದರೆ ನನ್ನಲ್ಲಿ ತೀವ್ರಗತಿಯ ಬೌದ್ಧಿಕ ಪ್ರಜ್ವಲತೆ, ಅರ್ಥಮಾಡಿಕೊಳ್ಳುವ ಮಿದುಳು, ಕೊನೆಗೆ ಕಂಡುಕೊಳ್ಳಬೇಕಾದುದಕ್ಕೆ ಸಾಧನವನ್ನು ಹೊಂದಿಸುವ ಕೌಶಲ, ತನ್ನ ಗುರಿಯನ್ನು ಸಾಧಿಸಲು ದೃಢವಾಗಿರುವ ಹಾಗೂ ಧೈರ್ಯಶಾಲಿ ಸಂಕಲ್ಪ ಇವೆಲ್ಲ ನನ್ನಲ್ಲಿದ್ದರೆ? ಆಗ ನನ್ನ ಮೇಲೆ ತನ್ನ ಪರಿಣಾಮಗಳನ್ನು ಹೇರುವ ಅಪರಿಪೂರ್ಣತೆ ನಮ್ಮಲ್ಲಿರುತ್ತದೆ, ಆದರೆ ಹಾಗೆಯೇ ತಮ್ಮ ಮಾರ್ಗವನ್ನು ಕಲ್ಪಿಸಿಕೊಂಡು ಸಾಗಿ ಹೋಗಲೇಬೇಕಾಗುವಂತೆ ಮಾಡಬಲ್ಲ ಸಾಮರ್ಥ್ಯಗಳಿರುತ್ತವೆ. ಇರುವ ಸತ್ಯವೆಂದರೆ ಚೈತನ್ಯದ ಹಲವಾರು ಕ್ರಮಗಳಿವೆ, ಪ್ರಕೃತಿಯ ಸಾಮರಸ್ಯಗಳಲ್ಲಿ ಅವುಗಳ ಸಂಬಂಧವನ್ನು ಸರಿಯಾಗಿ ಶೋಧಿಸುವುದಕ್ಕಿಂತ ಮೊದಲು ಆ ಚೈತನ್ಯಗಳ ಕಾರ್ಯಗತಿಯ ಪ್ರತ್ಯೇಕ ಗುಣ ಲಕ್ಷಣಗಳನ್ನು ಕಂಡುಕೊಳ್ಳಬೇಕಾಗಿರುತ್ತದೆ. ನಾವು ರಹಸ್ಯ ಶೋಧಿಸಿ ನೋಡಬೇಕಾದ ಸಂಕೀರ್ಣ ಜಾಲವಿದೆ. ಇಡಿಯಾದುದರಲ್ಲಿ ಭಾಗಗಳನ್ನು, ಮೊತ್ತದಲ್ಲಿರುವ ಅಂಶಗಳು ಹಾಗೂ ಅವುಗಳಲ್ಲಿರುವ ಪರಸ್ಪರ ಒಲವು ಇವುಗಳನ್ನು ಗಮನಿಸಿದಾಗ ಮಾತ್ರ ನಾವು ಕರ್ಮದ ರೀತಿಗಳನ್ನು ಅರಿತುಕೊಳ್ಳಬಲ್ಲೆವು.

**(CWM, 13/374–75)**

*

ಜಗತ್ತಿನಲ್ಲಿ ಹಾಗೂ ಮನುಷ್ಯನಲ್ಲಿ ಏನೋ ಒಂದು ಒಳ್ಳೆಯದಕ್ಕೆ ಒಳ್ಳೆಯದನ್ನು, ದುಷ್ಟವಾದುದಕ್ಕೆ ದುಷ್ಟವಾದುದನ್ನು ಮರಳಿಕೊಡುತ್ತಿದ್ದರೆ, ಹಾಗೆಯೇ ಬಹಳಷ್ಟು ಸಲ ಒಳ್ಳೆಯದಕ್ಕೆ ದುಷ್ಟವಾದದ್ದನ್ನು ಮತ್ತು ಪ್ರಜ್ಞಾಪೂರ್ಣ ನೈತಿಕ ಉದ್ದೇಶದೊಂದಿಗೆ ಇಲ್ಲವೆ ಅದಿಲ್ಲದೆ ದುಷ್ಟವಾದುದಕ್ಕೆ ಒಳ್ಳೆಯದನ್ನು



ಮರಳಿಕೊಡುತ್ತದೆ. ಅಹಂಕಾರವಿಲ್ಲದ ಸದ್ಗುಣ ಇಲ್ಲವೆ ದೈವಿಕವಾದ ಒಳ್ಳೆಯತನ ಹಾಗೂ ಪ್ರೇಮ ಜಗತ್ತಿನಲ್ಲಿ ಪ್ರವೇಶಿಸುತ್ತ ವಿರೋಧೀ ಪ್ರತಿಕ್ರಿಯೆಗಳನ್ನು ಎಚ್ಚರಿಸುತ್ತವೆ. ಕೊನೆಯವರೆಗೆ ಸಿಂಹಾಸನದ ಮೇಲೆ ಉಳಿದುಕೊಂಡ ಅತ್ತಿಲಾ (Attila) ಮತ್ತು ಜೆಂಗಿಝ (Jenghiz), ಶಿಲುಬೆಯ ಮೇಲೆ ಕ್ರಿಸ್ತ, ತನ್ನ ಪಾಲಿನ ಹೆಮ್‌ಲಾಕ್ (hemlock) ವಿಷಪ್ರಾಶನ ಮಾಡಿದ ಸಾಕ್ರೇಟಿಸ್ ಇವರೆಲ್ಲರು ಮಾನವ ಸ್ವಭಾವದ ಜಗತ್ತಿನಲ್ಲಿ, ನೈತಿಕವಾಗಿ ಮರಳಿ ಬರಬಹುದಾದಕ್ಕೆ ಯಾವುದೇ ಬಗೆಯ ಆಶಾವಾದಿ ಭಾವನೆ ತಂದುಕೊಳ್ಳುವುದಕ್ಕೆ ಸಾಕ್ಷ್ಯಾಧಾರ ಒದಗಿಸುವುದಿಲ್ಲ.

ಪರಿಮಾಣ(measure)ಗಳಿರುವ ಜಗತ್ತಿನಲ್ಲಿ, ಅದರ ನಿಶ್ಚಿತ ಅಸ್ತಿತ್ವದ ಸ್ವಲ್ಪ ಹೆಚ್ಚಿನ ಕುರುಹು ಇದೆ. ವಿಶ್ವವ್ಯಾಪಿ ವಿನಿಯೋಗದಲ್ಲಿ, ವಾಸ್ತವವಾಗಿ, ದುಷ್ಟವಾದದ್ದು ಒಳ್ಳೆಯದರಿಂದ, ಒಳ್ಳೆಯದು ದುಷ್ಟವಾದದ್ದರಿಂದ ಬರುತ್ತದೆ ಮತ್ತು ಅಲ್ಲಿ ಯಾವ ನಿಖರವಾದ ಅನುಗುಣವಾಗಿರುವಿಕೆ ನೈತಿಕ ಮತ್ತು ಪ್ರಾಣಿಕವಾದವುಗಳ ನಡುವೆ ಇರುವಂತೆ ತೋರಿಬರುವುದಿಲ್ಲ. ನಾವು ಹೇಳಬಹುದಾದುದೆಲ್ಲವೂ ಏನೆಂದರೆ ಕೈಕೊಂಡ ಒಳ್ಳೆಯದು ಜಗತ್ತಿನಲ್ಲಿ ಒಟ್ಟು ಒಳ್ಳೆಯದಾದುದರ ಇಡೀ ಮೊತ್ತವನ್ನು ಹೆಚ್ಚಿಸುವ ಪ್ರವೃತ್ತಿ ಹೊಂದಿರುತ್ತದೆ, ಇದು ಹೆಚ್ಚು ಹೆಚ್ಚಾಗಿ ಅಭಿವೃದ್ಧಿ ಹೊಂದುತ್ತ ಹೋದ ಹಾಗೆ ಮಾನವ ಸಂತೋಷದ ಮೊತ್ತ ಹೆಚ್ಚಾಗುತ್ತ ಹೋಗುವ ಸಂಭವವಿರುತ್ತದೆ ಮತ್ತು ಕೈಕೊಂಡ ದುಷ್ಟವಾದುದುದಕ್ಕೆ ಅದು ಮನುಷ್ಯನಿಂದಾಗಿರಲಿ ಇಲ್ಲವೆ ದೇಶವೊಂದರಿಂದ ಆಗಿರಲಿ ಕೊನೆಯಲ್ಲಿ ದಂಡ ತೆರಬೇಕಾಗುತ್ತದೆ, ಆದರೆ ಬಹಳಷ್ಟು ಸಲ, ಯಾವುದೇ ರೀತಿಯಲ್ಲಿ ವರ್ಗೀಕರಣ ಮಾಡಿದ ಇಲ್ಲವೆ ಪಾಲು ಮಾಡಿದ ಪರಿಮಾಣದಲ್ಲಿರುವುದಿಲ್ಲ ಮತ್ತು ಯಾವಾಗಲೂ ಪ್ರಾಣಿಕ ಒಳ್ಳೆಯ ದೆಶೆ ಮತ್ತು ಕೆಟ್ಟ ದೆಶೆ ಇರುವುದನ್ನು ಸ್ಪಷ್ಟವಾಗಿ ಅರ್ಥೈಸುವ ಪದಗಳಲ್ಲಿರುವುದಿಲ್ಲ.

**(CWM, 13/411–12)**

*

## ಸದ್ಗುಣಕ್ಕೆ ಪ್ರತಿಯಾಗಿ ನಿಜವಾಗಿ ಮರಳಿ ದೊರಕುವುದು ಆತ್ಮದ ಬೆಳವಣಿಗೆ

ಮನುಷ್ಯನ ಸದ್ಗುಣಕ್ಕೆ, ಅವನ ಚೈತನ್ಯ ನೈತಿಕವಾಗಿ ಸರಿಯಾದ ರೀತಿಯಲ್ಲಿ ಉತ್ಪಾದಿಸಿದುದಕ್ಕೆ ನಿಜವಾಗಿ ಮರಳಿ ಬರುವುದು – ಅವನಿಗೆ ದೊರಕುವ ಪ್ರತಿಫಲ ಎಂದು ನೀವು ಕರೆಯಬಹುದು ಮತ್ತು ಅವನು ಒತ್ತಾಯಪೂರ್ವಕವಾಗಿ ತನ್ನ ಹಕ್ಕಿನಿಂದ ದೊರಕಿಸುವ ಪುರಸ್ಕಾರ ಅದಾಗಿರಬಹುದು – ಅವನೊಳಗಿರುವ ನೈತಿಕ ಬಲದ ಅಭಿವೃದ್ಧಿ, ಅವನ ನೈತಿಕ ಸತ್ತೆಯ ಉನ್ನತೀಕರಣ, ನ್ಯಾಯ ಪ್ರೇಮ

ಕರುಣೆ ಪರಿಶುದ್ಧತೆ ಸತ್ಯ ಬಲ ಧೈರ್ಯ, ಅವನಾಗಲು ಬಯಸುತ್ತಿರುವುದಕ್ಕೆ ಸ್ವ–ಅರ್ಪಣ ಇವೆಲ್ಲವುಗಳ ಆತ್ಮ ಅರಳಿಕೊಳ್ಳುವುದಾಗಿದೆ. ಮನುಷ್ಯನ ದುಷ್ಟವಾದ ಕಾರ್ಯಕ್ಕೆ, ನೈತಿಕವಾಗಿ ತಪ್ಪಾದ ರೀತಿಯಲ್ಲಿ ಅವನ ಚೈತನ್ಯ ಉತ್ಪಾದಿಸಿದುದಕ್ಕೆ – ಅವನಿಗಾಗುವ ಶಿಕ್ಷೆ ಎಂದು ನೀವು ಕರೆಯಬಹುದು ಮತ್ತು ಭಯಪಡಬೇಕಾದ ಆವಶ್ಯಕತೆ ಇಲ್ಲವೆ ಹಕ್ಕು ಅವನಿಗಿರಬಹುದು, – ನಿಜವಾದ ಪ್ರತಿಫಲ ರೂಪದಲ್ಲಿ ಬರುವುದು ಬೆಳವಣಿಗೆಯ ಹಿಮ್ಮೆಟ್ಟುವಿಕೆ, ಉನ್ನತೀಕರಣದ ನಿರ್ಮೂಲನ, ಮಬ್ಬಾಗಿಸುವಿಕೆ, ಅವನಾಗಲು ಹೆಣಗುತ್ತಿರುವ ಪರಿಶುದ್ಧ, ಬಲವತ್ತರವಾದ ಮತ್ತು ಪ್ರಕಾಶಮಯ ಸತ್ತೆಯ ಆತ್ಮದ ಕಳೆಗುಂದಿಸುವಿಕೆ ಮತ್ತು ಬಡವಾಗಿರಿಸುವಿಕೆ ಇದೆಲ್ಲ ಆಗಿರುತ್ತದೆ. ಮುನುಷ್ಯ ತನ್ನ ಕಾರ್ಯದಿಂದ ಆಂತರಿಕ ಸಂತೋಷ, ಸ್ಥಿರತೆ, ಶಾಂತಿ, ಸರಿಯಾದುದರಲ್ಲಿ ನೆರವೇರಿಕೆ ಕಂಡುಕೊಂಡ ತೃಪ್ತಿ ಇವುಗಳನ್ನು ಗಳಿಸಬಹುದು. ಇಲ್ಲವೆ ತನ್ನ ಕಾರ್ಯದಿಂದ ಆಂತರಿಕ ಘೋರ ವಿಪತ್ತು, ವೇದನೆ, ಕ್ಷೋಭೆ, ಅಶಾಂತಿ ಮತ್ತು ಅದರಿಂದ ಇಳಿದು ಬರುವ ಕಾಯಿಲೆ ಇಲ್ಲವೆ ವಿಫಲತೆ ಇವುಗಳನ್ನು ಅವನು ಗಳಿಸಬಹುದು, ಆದರೆ ಅವನು ದೇವನಿಂದ ಇಲ್ಲವೆ ದೈವೀ ನೈತಿಕ ನಿಯಮದಿಂದ ಬೇರೆ ಏನನ್ನೂ ಒತ್ತಾಯದಿಂದ ಬೇಡಲಾರ. ನೈತಿಕ ಆತ್ಮ – ಸಾಚಾ ಅಲ್ಲದ ಆತ್ಮವಲ್ಲ, ಆದರೆ ನಿಜವಾದದ್ದು – ನೋವುಗಳನ್ನು, ವೇದನೆಗಳನ್ನು, ತೊಂದರೆಗಳನ್ನು ಮತ್ತು ಜೀವನದ ಭೀಕರ ಬೆದರಿಕೆ(intimidation)ಗಳನ್ನು ಅದರ ಪಾಪಗಳಿಗೆ ಶಿಕ್ಷೆಯೆಂದಲ್ಲ, ಆದರೆ ಅವಕಾಶ ಹಾಗೂ ಪರೀಕ್ಷೆಗಳೆಂದು, ಅದರ ಅಭಿವೃದ್ಧಿಗೆ ಒಂದು ಅವಕಾಶವೆಂದು, ಅದರ ಸ್ವಾಭಾವಿಕ ಇಲ್ಲವೆ ಗಳಿಸಿದ ಬಲದ ಪರೀಕ್ಷೆಯೆಂದು ಒಪ್ಪಿಕೊಳ್ಳುತ್ತದೆ ಮತ್ತು ಒಳ್ಳೆಯ ದೆಸೆ ಹಾಗೂ ಎಲ್ಲ ಬಾಹ್ಯ ಯಶಸ್ಸು ಇವುಗಳನ್ನು ಅದರ ಸದ್ಗುಣಕ್ಕೆ ಆಸೆಪಟ್ಟ ಪ್ರತಿಫಲದ ರೂಪದಲ್ಲಿ ಒಪ್ಪಿಕೊಳ್ಳುವುದಿಲ್ಲ, ಆದರೆ ಅದೂ ಒಂದು ಅವಕಾಶವೆಂದು ಮತ್ತು ಇನ್ನೂ ಹೆಚ್ಚು ಕಠಿಣ ಭವ್ಯ ಪರೀಕ್ಷೆಗಾಗಿ ಇದೆಯೆಂದು ಒಪ್ಪಿಕೊಳ್ಳುತ್ತದೆ.

**(CWM, 13/418–19)**

*

ಪ್ರಕೃತಿಯ ಉದ್ದೇಶ, ಅದರ ರೀತಿಗಳಿಗೆ ಆಧ್ಯಾತ್ಮಿಕ ಸಮರ್ಥನೆ ಇವು ಅದರ ಚೈತನ್ಯಗಳನ್ನು, ಪ್ರಜ್ಞಾಪೂರ್ಣ ಆತ್ಮವನ್ನು ಸತ್ಯ ಹಾಗೂ ಜ್ಞಾನಗಳ ಮಾರ್ಗದಲ್ಲಿ ಕರೆದೊಯ್ಯಲು ಈ ಹೊರಳುವಿಕೆಯಲ್ಲಿ ಇರುವುದು ಕೊನೆಗೆ ತೋರಿಬರುತ್ತದೆ ... ಪ್ರತಿಯೊಂದು ಹಂತದಲ್ಲಿ ಅದು ಗುರಿಯನ್ನು ಮತ್ತು ಸತ್ತೆಯ ಪ್ರಜ್ಞೆಯನ್ನು



ಅಭಿವೃದ್ಧಿಪಡಿಸಿಕೊಂಡ ಪ್ರಮಾಣದಲ್ಲಿ ಪ್ರತಿಫಲಗಳನ್ನು ಕೊಡುವುದು. ಮೊಟ್ಟಮೊದಲು ಕೌಶಲ ಹಾಗೂ ಪರಿಣಾಮಕಾರಿ ಬುದ್ಧಿಮತ್ತೆ ಇವುಗಳ ರೂಪದಲ್ಲಿ ಪ್ರತಿಫಲವಿರುತ್ತದೆ – ಅದು ಪ್ರತಿಫಲವನ್ನು, ನಮ್ಮ ನೈತಿಕ ಮನಸ್ಸು ಯೋಚಿಸುವಂತೆ ನ್ಯಾಯಯುತರಾದವರಿಗೆ, ನೈತಿಕವಾಗಿ ಒಳ್ಳೆಯವರಾಗಿರುವ–ವರಿಗೆ ಮುಖ್ಯವಾಗಿ ಕೊಡುವುದಿಲ್ಲ, ಆದರೆ ಕೌಶಲವುಳ್ಳವರಿಗೆ ಹಾಗೂ ಶಕ್ತಿಯುತರಾದವರಿಗೆ, ಸಂಕಲ್ಪಕ್ಕೆ, ಶಕ್ತಿಗೆ ಮತ್ತು ಬುದ್ಧಿಮತ್ತೆಗೆ ಎಂಬ ಅದರದೇ ಆವಶ್ಯಕತೆ ಸಾಕಷ್ಟು ವಿವರಣೆ ನೀಡುತ್ತದೆ. ನಂತರ ಹೆಚ್ಚು ಹೆಚ್ಚಾಗಿ ಸ್ಪಷ್ಟವಾಗಿರುವ ಅವಕಾಶ ಕಲ್ಪಿಸಿಕೊಂಡು ಅದರಲ್ಲಿ ಮನಸ್ಸಿನ ಹಾಗೂ ಆತ್ಮದ ಜ್ಞಾನೋದಯ ಹಾಗೂ ತೃಪ್ತಿ ಪಡೆಯುವುದರಲ್ಲಿ, ತನ್ನ ಸಾಮರ್ಥ್ಯಗಳನ್ನು ಹಾಗೂ ಕ್ಷಮತೆಗಳನ್ನು ಪ್ರಜ್ಞಾಪೂರ್ಣವಾಗಿ ಉಪಯೋಗಿಸುವುದರಲ್ಲಿ, ಹಾಗೂ ಅವುಗಳಿಗೆ ಜಾಣ ನಿರ್ದೇಶನ ನೀಡುವುದರಲ್ಲಿ, ಪ್ರಕೃತಿಯು ಪ್ರತಿಫಲ ನೀಡುತ್ತದೆ, ಮತ್ತು ಕೊನೆಯದಾಗಿ ಒಂದು ಪರಮೋಚ್ಚ ಪ್ರತಿಫಲವೆಂದರೆ ಪ್ರಕಾಶದಲ್ಲಿ ಆತ್ಮದ ಹೆಚ್ಚಿಕೊಳ್ಳುವಿಕೆ, ಜ್ಞಾನದಲ್ಲಿಯ ಪರಿಪೂರ್ಣತೆಯಿಂದ ಸಂತೃಪ್ತಿ, ಅತ್ಯುಚ್ಚ ಪ್ರಜ್ಞೆಯಲ್ಲಿ ಜನ್ಮ ತಾಳುವುದು, ತನ್ನದೇ ಆಂತರಿಕ ಅತ್ಯಗತ್ಯವಾದುದರ ಪರಿಶುದ್ಧ ನೆರವೇರಿಕೆ ಕಂಡುಕೊಳ್ಳುವುದು ಇದೆಲ್ಲ ಆಗಿರುತ್ತದೆ – ಮಾನವನ ಅಜ್ಞಾನದಿಂದ ಹೊರಬಂದು ದೈವೀ ಸ್ವ–ಜ್ಞಾನದಲ್ಲಿ ಅಭಿವೃದ್ಧಿ ಪಡೆಯುವುದು ಪೌರ್ವಾತ್ಯ ಮನಸ್ಸಿಗೆ, ಯಾವಾಗಲೂ, ಅತ್ಯುಚ್ಚ ಲಾಭವಾಗಿತ್ತು.

**(CWSA, 13/426)** **– ಶ್ರೀ ಅರವಿಂದರು**

*

ಮಿಥ್ಯೆಗಿಂತ ಸತ್ಯ ಬಲವತ್ತರವಾಗಿರುತ್ತದೆ. ಜಗತ್ತನ್ನು ಆಳುವ ಅಮರ ದೈವೀ ಸಾಮರ್ಥ್ಯವಿದೆ. ಅದರ ನಿರ್ಧಾರ ಯಾವಾಗಲೂ ಪ್ರಬಲವಾಗಿರುತ್ತದೆ. ಅದರೊಂದಿಗೆ ಕೂಡಿಕೊಳ್ಳಿರಿ ಮತ್ತು ನಿಮಗೆ ಕೊನೆಯ ವಿಜಯ ನಿಶ್ಚಿತವಾಗುತ್ತದೆ.

*

ತಾವು ಜೀವಿಸುತ್ತಿರುವ ಮಿಥ್ಯೆಯ ಬಗ್ಗೆ ಜನರು ಜುಗುಪ್ಸೆಗೊಳಗಾದಾಗ ಜಗತ್ತು ಸತ್ಯದ ಆಳಿಕೆಗೆ ತಯಾರಾಗಿರುತ್ತದೆ.

**(CWM, 14/195)** **– ಶ್ರೀಮಾತೆ**

*



ಎಲ್ಲೆಡೆಯಲ್ಲಿ ಭಗವಂತನನ್ನು ನೋಡಿರಿ, ಮುಖವಾಡಗಳಿಂದ ಭಯಪಡ–ಬೇಡಿರಿ. ಎಲ್ಲ ಮಿಥ್ಯೆ ನಿರ್ಮಾಣಗೊಳ್ಳುತ್ತಿರುವ ಇಲ್ಲವೆ ಒಡೆದು ಹೊರಬರುತ್ತಿರುವ ಸತ್ಯ ಎಂದು ನಂಬಿರಿ. ಎಲ್ಲ ವಿಫಲತೆ ಮರೆಯಲ್ಲಿರಿಸಿದ ಪರಿಣಾಮಕಾರಿತ್ವ, ಎಲ್ಲ ದೌರ್ಬಲ್ಯ ತನ್ನದೇ ದೃಷ್ಟಿಯಲ್ಲಿ ತನ್ನನ್ನು ಅಡಗಿಸಿಟ್ಟ ಬಲ, ಎಲ್ಲ ನೋವು ರಹಸ್ಯ ಮತ್ತು ಹಿಂಸಾತ್ಮಕ ದಿವ್ಯಾನಂದ. ನೀವಿದನ್ನು ದೃಢವಾಗಿ ಮತ್ತು ದಣಿದುಕೊಳ್ಳದೆ ನಂಬಿದರೆ ಕೊನೆಯಲ್ಲಿ ನೀವು ಎಲ್ಲ ದೈವೀ ಸತ್ಯವನ್ನು, ಸರ್ವಶಕ್ತನನ್ನು ಮತ್ತು ಸರ್ವ ದಿವ್ಯಾನಂದವಾದವನನ್ನು ನೋಡುವಿರಿ ಹಾಗೂ ಅನುಭವಕ್ಕೆ ತಂದು–ಕೊಳ್ಳುವಿರಿ.

**(CWSA, 12/497)** – ಶ್ರೀ ಅರವಿಂದರು

*

## ದೈವೀಸತ್ಯದ ಸೇವೆ

**ನೆಗೆತ ಮಾಡಿ ಉಚ್ಚತರ ಸಾಮರಸ್ಯವನ್ನು ಸೃಷ್ಟಿಸಿರಿ**

ಇಂದು ಬೆಳಗಿನ ಕಾಲದಿಂದ ಅದು ಆ ರೀತಿಯದಾಗಿದೆ – ಹರತಾಳಗಳು, ಜಗಳಗಳು, ಅವ್ಯವಸ್ಥೆ ಇತ್ಯಾದಿ ಮತ್ತು ನಂತರ ಕ್ರಮಬದ್ಧತೆಯನ್ನು ಪುನಃ ಸ್ಥಾಪಿಸಬೇಕು, ಅದಕ್ಕಾಗಿ ಅವ್ಯವಸ್ಥೆ ಸೃಷ್ಟಿಸಿದವರ ಸಹಾಯ ಪಡೆಯಬೇಕು ಎಂಬ ಭಾವನೆ ಬಂದಿತು. ಕೈಕೊಳ್ಳಬೇಕಾದ ಕಾರ್ಯ ಅದೇ ಆಗಿದೆ. ಸಾಮಾನ್ಯ ಮಟ್ಟದ ಸದಿಚ್ಛೆ ಮತ್ತು ಎಲ್ಲ ನೈತಿಕ, ಸಾಮಾಜಿಕ ನಿಯಮಗಳು ಇವುಗಳ ಆಧಾರದ ಬದಲಾಗಿ – ಅದೆಲ್ಲವನ್ನೂ ನೆಲಕ್ಕೆಸೆದು ಬಿಡಬೇಕು – ಮನುಷ್ಯ ಮೇಲೆದ್ದು ಬರಬೇಕು, ದೈವೀ ಸಂಕಲ್ಪ ಮತ್ತು ದೈವೀ ಸಾಮರಸ್ಯ ಅಲ್ಲಿರಬೇಕು, ಅದನ್ನೇ ನಾವು ಬಯಸುತ್ತೇವೆ. ಮತ್ತು ನಂತರ ವಿಷಯಗಳ ಸಾಮಾನ್ಯ ನಿಯಮ ಮತ್ತು ಸಾಮಾನ್ಯ ಸಾಮಾಜಿಕ ಸಂಪ್ರದಾಯಗಳು ಇವುಗಳ ವಿರುದ್ಧ ಬಂಡಾಯವೆದ್ದವರು, ನೀವು ಉಚ್ಚತರ ಪ್ರಜ್ಞೆ ಮತ್ತು ಹೆಚ್ಚು ನಿಜವಾದ ಸತ್ಯ ಇವುಗಳ ಸಂಬಂಧ ಹೊಂದಿದ್ದೀರಿ, ಎಂಬುದನ್ನು ಪ್ರಮಾಣೀಕರಿಸುತ್ತಾರೆ. ...



ಮನುಷ್ಯ ಮೇಲ್ಗಡೆ ನೆಗೆತ ಮಾಡಬೇಕು.

ಕ್ರಮಬದ್ಧತೆಯನ್ನು ಪುನಃ ಸ್ಥಾಪಿಸಬೇಕೆಂದು ಬಯಸುವವರು ಎಲ್ಲ ಹಳೆಯ ಕಾಲದ ವಿಚಾರಗಳಲ್ಲಿ ಹಿಂದೆಳೆದುಕೊಂಡು ಹೋಗುತ್ತಾರೆ – ಆ ಕಾರಣದಿಂದಾಗಿ ಅವರು ಎಂದಿಗೂ ಯಶಸ್ವಿಯಾಗುವುದಿಲ್ಲ. ಆದು ಮುಗಿದು ಹೋಗಿದೆ, ಅಂತಿಮವಾಗಿ ಮುಗಿದು ಹೋಗಿದೆ. ನಾವು ಮೇಲ್ಗಡೆ ಸಾಗುತ್ತೇವೆ. ಮೇಲ್ಗಡೆ ಹೋಗುವವರು ಮಾತ್ರ ಕ್ರಿಯೆ ಕೈಕೊಳ್ಳಬಲ್ಲರು.

**(CWM, 11/253–54)**

*

ಯಾವುದೇ ದಿಶೆಯಲ್ಲಿ ವಿಪರೀತವಾದದ್ದು ಹಿಂಸಾತ್ಮಕವಾಗಿರುತ್ತದೆ, ಮತ್ತು ಕೇವಲ ಶಾಂತಿ, ಸಾಮರಸ್ಯಗಳಿರುವಲ್ಲಿ, ಸಮಸ್ಥಾಯಿತ್ವ ಇರುವಲ್ಲಿ ಸತ್ಯವನ್ನು ಶೋಧಿಸಬಹುದು ಮತ್ತು ಜೀವಿಸಬಹುದು.

**(CWM, 10/320)**

*

ಮನುಷ್ಯ ಸತ್ಯದಲ್ಲಿ ಜೀವಿಸಿದಾಗ ಅವನು ಎಲ್ಲ ವೈರುಧ್ಯಗಳ ಮೇಲ್ಗಡೆ ಇರುತ್ತಾನೆ.

**(CWM, 12/114)**

*

**ದೈವೀ ಸತ್ಯದ ಸೇವೆಗೆ ಸಾಮರಸ್ಯ ಆಧಾರ ಒದಗಿಸುತ್ತದೆ**

ಆಧ್ಯಾತ್ಮಿಕ ಪ್ರಗತಿ ಮತ್ತು ದೈವೀ ಸತ್ಯದ ಸೇವೆ ಇವುಗಳಿಗೆ ಸಾಮರಸ್ಯ ಆಧಾರ ಒದಗಿಸುತ್ತದೆ. ವಿಭಜನೆ ಮತ್ತು ಟೀಕೆ ಇವುಗಳ ಮೇಲಲ್ಲ ಎಂಬುದನ್ನು ದೃಢೀಕರಿಸಲು ನಾನು ಈ ಅವಕಾಶವನ್ನು ಉಪಯೋಗಿಸುತ್ತೇನೆ.

*

ವಿಸ್ತರಿಸಿಕೊಳ್ಳುವುದರಲ್ಲಿ ಪ್ರಗತಿಯಿರುತ್ತದೆ, ಕಟ್ಟುನಿಟ್ಟಿನಲ್ಲಿ ಇರಿಸಿಕೊಳ್ಳುವು–ದರಲ್ಲಲ್ಲ.

ಎಲ್ಲ ದೃಷ್ಟಿಕೋನಗಳನ್ನು, ಅವುಗಳಲ್ಲಿ ಪ್ರತಿಯೊಂದನ್ನು ಅದರ ನಿಜವಾದ ಸ್ಥಾನದಲ್ಲಿರಿಸಿ, ಒಟ್ಟಿಗೆ ತರುವುದಿರಬೇಕು, ಕೆಲವೊಂದರ ಮೇಲೆ ಒತ್ತುಕೊಟ್ಟು ಉಳಿದವುಗಳನ್ನು ಹೊರಗಿರಿಸಬಾರದು.

ಆತ್ಮದ ವಿಸ್ತರಿಸಿಕೊಳ್ಳುವಿಕೆಯಲ್ಲಿ ಮತ್ತು ಎಲ್ಲ ಮಿತಿಗಳನ್ನು ನಿರ್ಮೂಲನ ಮಾಡುವುದರಲ್ಲಿ ನಿಜವಾದ ಪ್ರಗತಿ ಇರುತ್ತದೆ.

**(CWM, 12/184)**

*

**ಸಂಘರ್ಷ ಹಾಗೂ ಪ್ರತಿರೋಧಗಳ ಮೇಲೆ ದೈವೀಸತ್ಯವಿದೆ**

ದೈವೀ ಸತ್ಯಕ್ಕೆ ಸೇವೆ ಸಲ್ಲಿಸುವವರು ಪಕ್ಷಪಾತ ಮಾಡಲಾರರು.
ಸಂಘರ್ಷ ಹಾಗೂ ಪ್ರತಿರೋಧಗಳ ಮೇಲೆ ದೈವೀ ಸತ್ಯವಿದೆ.
ದೈವೀ ಸತ್ಯದಲ್ಲಿ ಎಲ್ಲ ದೇಶಗಳು ಪ್ರಗತಿ ಹಾಗೂ ಸಿದ್ಧಿಗಳಿಗಾಗಿ
ಸರ್ವಸಮಾನ ಪ್ರಯತ್ನದಲ್ಲಿ ಒಂದುಗೂಡುವರು.

**(CWM, 12/381)**

*

ಕೆಲವರ ಪರವಾಗಿ, ಇನ್ನು ಕೆಲವರ ವಿರುದ್ಧವಾಗಿ ಇರುವವರೆಗೆ ನೀವು ದೈವೀಸತ್ಯದ ಹೊರಗಿರುತ್ತೀರಿ.

ನಿಮ್ಮ ಹೃದಯದಲ್ಲಿ ಸದ್ಭಾವನೆ ಹಾಗೂ ಪ್ರೇಮ ಇವುಗಳನ್ನು ಸತತ ಇಟ್ಟುಕೊಂಡಿರಬೇಕು ಮತ್ತು ಪ್ರಶಾಂತತೆ ಹಾಗೂ ಸಮತೆ ಇವುಗಳೊಂದಿಗೆ ಅವು ಎಲ್ಲರ ಮೇಲೆ ಹರಿದು ಹೋಗಲು ಅನುವು ಮಾಡಿಕೊಡಬೇಕು.

**(CWM, 13/191)**

*



ದೈವೀಕೃಪೆ ಒಂದು ದೇಶದ ಪರವಾಗಿ ಇಲ್ಲವೆ ಇನ್ನೊಂದು ದೇಶದ ವಿರುದ್ಧ ಕಾರ್ಯ ಮಾಡುತ್ತದೆಂಬುದನ್ನು ಹೇಗೆ ನಂಬಬಲ್ಲಿರಿ? ಜಗತ್ತಿನ ಸದ್ಯದ ಪರಿಸ್ಥಿತಿಗಳಲ್ಲಿ ದೈವೀ ಕೃಪೆ ದೈವೀಸತ್ಯಕ್ಕಾಗಿ ಕಾರ್ಯ ಮಾಡುತ್ತದೆ, ದೈವೀಸತ್ಯ ಹಾಗೂ ಮಿಥ್ಯೆ ಎಲ್ಲೆಡೆಯಲ್ಲೂ ಇವೆ, ಎಲ್ಲ ದೇಶಗಳಲ್ಲೂ ಇವೆ. ಇದೊಂದು ಸರಿಯಾಗಿದೆ, ಇನ್ನೊಂದು ತಪ್ಪಾಗಿದೆ ಎಂದು ಮಾನವ ಮನಸ್ಸು ಯೋಚಿಸುತ್ತದೆ – ಸರಿಯಾದದ್ದು ಮತ್ತು ತಪ್ಪಾದದ್ದು ಎಲ್ಲೆಡೆಯಲ್ಲಿ ಉಪಸ್ಥಿತವಿರುತ್ತವೆ.

ದೈವೀಸತ್ಯ ಎಲ್ಲ ಸಂಘರ್ಷಗಳು ಹಾಗೂ ಪ್ರತಿರೋಧಗಳು ಇವುಗಳ ಮೇಲಿದೆ.

**(CWM, 13/381)**

*

**ಮಾನವ ಜೀವನದಲ್ಲಿ ಪ್ರತಿಯೊಂದು ಮಿಶ್ರಣಕ್ಕೊಳಗಾಗಿದೆ**

ನನ್ನ ಮಟ್ಟಿಗೆ ಹೇಳುವುದಾದರೆ ಮಾನವ ಜೀವನ ಮಿಶ್ರಣಕ್ಕೊಳಗಾಗಿದೆ, ಯಾವುದೂ ಸಂಪೂರ್ಣವಾಗಿ ಸರಿಯಾಗಿಲ್ಲ, ಯಾವುದೂ ಸಂಪೂರ್ಣವಾಗಿ ಕೆಟ್ಟದಾಗಿಲ್ಲ. ಈ ವಿಚಾರಕ್ಕೆ ಇಲ್ಲವೆ ಆ ವಿಚಾರಕ್ಕೆ, ಒಂದು ಕಾರಣಕ್ಕೆ ಇಲ್ಲವೆ ಇನ್ನೊಂದು ಕಾರಣಕ್ಕೆ ನನ್ನ ಇಡಿಯಾದ ಮತ್ತು ಪ್ರತ್ಯೇಕ ಸಮರ್ಥನೆಯನ್ನು ಕೊಡಲಾಗುವುದಿಲ್ಲ. ಕ್ರಿಯೆಯಲ್ಲಿ ನನಗೆ ಅತ್ಯಂತ ಮಹತ್ವದ್ದಾದ ವಿಷಯವೆಂದರೆ ಶ್ರೀ ಅರವಿಂದರ ಕಾರ್ಯವಾಗಿದೆ, ಆ ಕಾರ್ಯಕ್ಕೆ ಸಹಾಯ ನೀಡುವುದೆಲ್ಲದಕ್ಕೆ ಮತ್ತು ಆ ಸಹಾಯದ ಪರಿಮಾಣಕ್ಕನುಸಾರವಾಗಿ ನನ್ನ ಪ್ರಜ್ಞಾಪೂರ್ಣ ಸಮರ್ಥನೆ, ಸ್ವಯಂಚಾಲಿತವಾಗಿ ಇರುತ್ತದೆ. ಅದಾಗಬೇಕಾದ ರೀತಿಯಲ್ಲಿ ಕೈಕೊಳ್ಳಬೇಕಾದ ಕಾರ್ಯಕ್ಕೆ ನನಗೆ ಎಲ್ಲ ಸಹಕಾರದ ಹಾಗೂ ಸಹಾಯದ ಆವಶ್ಯಕತೆ ಇದೆ. ಕೇವಲ ಇದನ್ನೋ, ಅದನ್ನೋ ಸ್ವೀಕರಿಸಿ ಉಳಿದದ್ದನ್ನೆಲ್ಲ ತಿರಸ್ಕರಿಸಲಾರೆ. ನಾನು ಈ ಪಕ್ಷಕ್ಕೆ ಇಲ್ಲವೆ ಆ ಪಕ್ಷಕ್ಕೆ ಸೇರಿದವಳಾಗಲಾರೆ. ನಾನು ಕೇವಲ ಭಗವಂತನಿಗೆ ಸೇರಿದವಳಾಗಿದ್ದೇನೆ ಮತ್ತು ಪೃಥ್ವಿಯ ಮೇಲಿನ ನನ್ನ ಕಾರ್ಯ, ಯಾವಾಗಲೂ, ಭಗವಂತನ ವಿಜಯಕ್ಕಾಗಿ ಇದೆ, ಅಲ್ಲಿ ಯಾವ ಪಕ್ಷಗಳಿವೆ ಇಲ್ಲವೆ ಪಂಥಗಳಿವೆ ಎಂಬುದು ನನಗೆ ನಗಣ್ಯವಾಗಿರುತ್ತದೆ.

**(CWM, 13/51)**

*

## ದೈವೀಸತ್ಯ ಯಾವ ಪಕ್ಷವನ್ನೂ ವಹಿಸುವುದಿಲ್ಲ

ನಾನು ಯಾರಲ್ಲಿಯೂ ದೋಷವನ್ನು ಕಂಡುಕೊಳ್ಳುವುದಿಲ್ಲ, ಎಂದಿಗೂ ಯಾವ ಪಕ್ಷವನ್ನೂ ವಹಿಸುವುದಿಲ್ಲ. ಆದರೆ, ನಾನು ನೋಡುವ ರೀತಿ ಸ್ವಲ್ಪ ಭಿನ್ನವಾಗಿರುತ್ತದೆ. ಏಕೆಂದರೆ ಮಾನವ ಜೀವನ, ಅದರ ಮನಸ್ಸಿನ ಸ್ವರೂಪ ಇವುಗಳನ್ನೊಳಗೊಂಡ ಪೃಥ್ವಿಯ ಮೇಲಿನ ಜೀವನ ನನ್ನ ಪ್ರಜ್ಞೆಗೆ ಕಂಪನಗಳಿರುವ ಒಂದು ಮೊತ್ತವಾಗಿದೆ, ಆ ಕಂಪನಗಳು ಹೆಚ್ಚಾಗಿ ಮಿಥ್ಯೆ, ಅಜ್ಞಾನ ಮತ್ತು ಅವ್ಯವಸ್ಥೆ ಇವುಗಳ ಕಂಪನಗಳಾಗಿರುತ್ತವೆ. ಅವುಗಳಲ್ಲಿ ಉಚ್ಚತರ ಪ್ರಾಂತಗಳಿಂದ ಬರುವ ದೈವೀಸತ್ಯ ಹಾಗೂ ಸಾಮರಸ್ಯಗಳ ಕಂಪನಗಳು ಕಾರ್ಯನಿರತವಾಗಿವೆ, ಪ್ರತಿರೋಧವನ್ನು ದೂರವಿರಿಸುತ್ತ ತಮ್ಮ ಮಾರ್ಗವನ್ನು ಮಾಡಿಕೊಳ್ಳುತ್ತವೆ.

ಈ ದರ್ಶನದಲ್ಲಿ, ಅಹಂಮನ್ಯತೆಯ ಭಾವನೆ, ವ್ಯಕ್ತಿಗತ ದೃಢೀಕರಣ ಮತ್ತು ಪ್ರತ್ಯೇಕತೆ ಇವು ಬಹಳ ಅವಾಸ್ತವಿಕ ಹಾಗೂ ಭ್ರಮಾತ್ಮಕವಾಗಿರುವಂತೆ ತೋರಿ–ಬರುತ್ತವೆ.

ಅದಾಗಲೇ ಅಸ್ತಿತ್ವದಲ್ಲಿರುವ ಗೊಂದಲದಲ್ಲಿ ಕೆಲಮಟ್ಟಿಗಿನ ಅಧಿಕ ಗೊಂದಲ ಸೃಷ್ಟಿಯಾದಾಗ, ಅದರ ಮೇಲೆ ನಾನು ವಿಶಿಷ್ಟ ಕಂಪನಗಳು ಸಾಗಿ ಹೋಗುವಂತೆ ನಿರ್ದೇಶಿಸುತ್ತೇನೆ, ಅದರಿಂದಾಗಿ ಸಾಧ್ಯವಿದ್ದಷ್ಟು ಹೆಚ್ಚು ಒಳ್ಳೆಯ ಸಾಮರಸ್ಯ ಪುನಃ ಸ್ಥಾಪಿತಗೊಳ್ಳುವಂತಾಗುತ್ತದೆ. ವ್ಯಕ್ತಿಗಳು ಭಾವನೆಗೆ ತಂದುಕೊಳ್ಳುವುದಕ್ಕಾಗಿ ಆ 'ಹೊಡೆತ'ವಿರುವುದಿಲ್ಲ, ಆದರೆ ಅಸಾಮರಸ್ಯಕ್ಕೆ ಅವರ ಅಂಟಿಕೊಳ್ಳುವಿಕೆಗೆ, ಪಕ್ಷಪಾತ ವಹಿಸುವಿಕೆಗೆ ಆ ಹೊಡೆತವಿರುತ್ತದೆ.

ಸತ್ಯ ಹೇಳುವುದಾದರೆ ನೀನು ಸಹಜ ಒಲವಿನಿಂದ ದೈವೀಸತ್ಯದ ಪಕ್ಷ ವಹಿಸುವಿ ಎಂದು ನಾನು ದೃಢ ನಂಬಿಕೆಯನ್ನು ಹೊಂದಿದ್ದೆ ಮತ್ತು ಇಂತಹ ಸಂದರ್ಭಗಳಲ್ಲಿ, ಎಂದಿಗೂ ಒಂದು ಪಕ್ಷ ಸರಿಯಾಗಿದೆ ಮತ್ತು ಇನ್ನೊಂದು ತಪ್ಪಾಗಿದೆ ಎಂದಿರುವುದಿಲ್ಲ, ಆದರೆ ಜನರು ಮಿಥ್ಯೆಗೆ ಮತ್ತು ಗೊಂದಲಕ್ಕೆ ಅಂಟಿಕೊಳ್ಳುವ ಪ್ರಮಾಣದಲ್ಲಿ ಅವರೆಲ್ಲರನ್ನು ದೂಷಿಸಬೇಕಾಗುತ್ತದೆ ಎಂಬುದನ್ನು ನೀನು ತಿಳಿದುಕೊಳ್ಳಬೇಕು.

**(CWM, 17/238)**

*





ಜ್ಞಾನದ ಯಾವುದೇ ವಿಷಯದ ಬಗ್ಗೆ ಇರುವ ಇಡೀ ಸತ್ಯ, ದುಂಡಗಾಗಿರುವಂತೆ ಮಾಡಿದ, ಎಲ್ಲವನ್ನೂ ಅಪ್ಪಿಕೊಳ್ಳುವ ಗೋಲದ ಹಾಗಿರುತ್ತದೆ, ಅದು ಎಲ್ಲ ಕಾಲಕ್ಕೂ ಸುತ್ತುತ್ತಿರುತ್ತದೆ, ಆದರೆ ಜ್ಞಾನದ ಏಕೈಕ ವಿಷಯ ಮತ್ತು ಉದ್ದೇಶವಾದ ದೇವನನ್ನು ಎಂದಿಗೂ ಸ್ಪರ್ಶಿಸುವುದಿಲ್ಲ.

**(CWSA, 12/498)** **– ಶ್ರೀ ಅರವಿಂದರು**

*

## ಎರಡು ವಿಷಯಗಳನ್ನು ಕುರಿತು ಸ್ಪಷ್ಟೀಕರಣ

**ಪ್ರಶ್ನೆ :** *ಸಂಘರ್ಷವೊಂದಕ್ಕೆ ಎರಡೂ ಬದಿಗಳಲ್ಲಿ ಇರಬಹುದಾದ ಯಾವುದೇ ಬಗೆಯ ದೈವೀಸತ್ಯಕ್ಕಾಗಿ ದೈವೀ ಕೃಪೆ ಕಾರ್ಯ ಮಾಡುವುದೇ?*

**ಶ್ರೀಮಾತೆ :** ಹೌದು.

**ಪ್ರಶ್ನೆ :** *ಆ ಸಂಘರ್ಷದ ಎರಡೂ ಬದಿಯಲ್ಲಿ ಮಿಥ್ಯೆ ಕೂಡ ಇರುವುದೆಂಬ ಕಾರಣಕ್ಕಾಗಿ ಅದು ಒಟ್ಟಿನಲ್ಲಿ ದೂರ ಉಳಿದುಕೊಳ್ಳುವುದೇ?*

**ಶ್ರೀಮಾತೆ :** ಇಲ್ಲ, ನಾನು ಕಾರ್ಯ ಕುರಿತು ಹೇಳಿದೆ – ಅದು ಸತತ ಇರುವ ಕಾರ್ಯಗತಿ.

**ಪ್ರಶ್ನೆ :** *ಸದ್ಯದ ಸಂಘರ್ಷಗಳು ಎರಡನೆಯ ಜಾಗತಿಕ ಮಹಾಯುದ್ಧ(world war II)ದಂತಹ ಸಂಘರ್ಷಕ್ಕಿಂತ ಮೂಲಭೂತವಾಗಿ ಭಿನ್ನವಾಗಿರುತ್ತವೆಯೆ? ಆ*

*ಯುದ್ಧದಲ್ಲಿ ದೈವೀ ಕೃಪೆ ನಿಶ್ಚಿತವಾಗಿ ಹಾಗೂ ನಿರ್ಧಾರಕವಾಗಿ ಒಂದು ಪಕ್ಷದ ಪರವಾಗಿ ಕಾರ್ಯ ಕೈಕೊಂಡಿತು – ಕನಿಷ್ಠ ಪಕ್ಷ ಇಡಿಯಾದುದನ್ನು ನೋಡಿದಾಗ ಹಾಗೆನಿಸುವುದಿಲ್ಲವೆ?*

**ಶ್ರೀಮಾತೆ :** ನೀನು ಎರಡು ವಿಷಯಗಳನ್ನು ಮಿಶ್ರಣಕ್ಕೊಳಪಡಿಸುತ್ತಿರುವಿ. ದೈವೀ ಕೃಪೆಯ ಕಾರ್ಯಗತಿ ಒಂದು ವಿಷಯ, ಇನ್ನೊಂದು ದೈವೀಸತ್ಯದ ವಿಜಯದಿಂದಾಗುವ ಅನಿವಾರ್ಯ ಪರಿಣಾಮ. ಅವು ಭಿನ್ನ ಸ್ತರದಲ್ಲಿರುವ ಎರಡು ಭಿನ್ನ ವಿಷಯಗಳು.

ದೈವೀಸತ್ಯದ ಪ್ರಗತಿಪರ ವಿಜಯ, ಸ್ವಯಂಚಾಲಿತವಾಗಿ, ಕೆಲವೊಂದು ಪರಿಣಾಮಗಳನ್ನು ತರುತ್ತದೆ, ಆ ಪರಿಣಾಮಗಳು ಮಾನವ ಮನಸ್ಸಿಗೆ ಸಂಕೀರ್ಣವಾದವುಗಳು ಹಾಗೂ ಅನಿರೀಕ್ಷಿತವಾದವುಗಳು ಆಗಿರುತ್ತವೆ, ಮಾನವ ಮನಸ್ಸು, ಯಾವಾಗಲೂ, ಕೊರೆದು ತೆಗೆದ ಸ್ಪಷ್ಟ ವಿಷಯಗಳನ್ನು ಬಯಸುತ್ತದೆ. ಕಾಲ ಹಾಗೂ ಸ್ಥಳಾವಕಾಶ ಇವುಗಳಲ್ಲಿ ದೊರಕಿಸಬಹುದಾದ ಇಡಿಯಾದ ದರ್ಶನದಿಂದ ಮಾತ್ರ ಅದನ್ನು ತಿಳಿದುಕೊಳ್ಳಬಹುದು.

**(CWM, 13/381)**

*

"ಮಿಥ್ಯೆಗೆ ಕೇವಲ ಒಂದು ಪರಿಹಾರವಿದೆ."

"ನಮ್ಮಲ್ಲಿ ಭಗವಂತನ ದೈವೀ ಸಾನ್ನಿಧ್ಯವನ್ನು ವಿರೋಧಿಸುವ ಎಲ್ಲದಕ್ಕೂ ಚಿಕಿತ್ಸೆ ನೀಡಿ ಅದರಿಂದ ಪಾರಾಗುವುದಾಗಿದೆ."

**(ಶ್ರೀಮಾತೆಯವರ ಸಂದೇಶ: ಡಿಸೆಂಬರ 31, 1972)**

*

ಹೌದು, ನಾನು ಅದರ ಮೇಲೆ ಒತ್ತುಕೊಟ್ಟು ಹೇಳುತ್ತೇನೆ, ಅದು ಬಹಳ ಸತ್ಯವಾದದ್ದು. ಅರ್ಥಮಾಡಿಕೊಳ್ಳುವುದಕ್ಕೆ ಅದು ಸುಲಭವಾಗಿಲ್ಲ, ಆದರೆ ಅತ್ಯಂತ ಗಹನವಾದ ಸತ್ಯ.

ನಮ್ಮಲ್ಲಿ ಭಗವಂತನ ಪ್ರಕಟಣೆಯಾಗುವುದರ ಮೇಲೆ ಮುಸುಕನ್ನಿರಿಸುವ, ಅದನ್ನು ವಿರೂಪಗೊಳಿಸುವ ಮತ್ತು ತಡೆಹಿಡಿಯುವ ಎಲ್ಲವೂ ಮಿಥ್ಯೆ, ಅದೇ ಅದು.

**(Feb.7, 1973) (CWM, 11/381)** **– ಶ್ರೀಮಾತೆ**

*



**ಗೊಡ್ಡು ಹರಟೆಯ ಬಗ್ಗೆ ಎಚ್ಚರದಿಂದಿರಿ**

ಯಾರೋ ಒಬ್ಬರು ಏನು ಮಾಡುತ್ತಿದ್ದಾರೆ ಇಲ್ಲವೆ ಏನು ಮಾಡುತ್ತಿಲ್ಲ ಎಂಬುದನ್ನು ಕುರಿತು ಗೊಡ್ಡು ಹರಟೆ ತಪ್ಪು.

ಇಂತಹ ಗೊಡ್ಡು ಹರಟೆಗೆ ಕಿವಿಗೊಡುವುದು ತಪ್ಪು.

ಇಂತಹ ಗೊಡ್ಡು ಹರಟೆಯ ವಿಷಯ ನಿಜವಾದದ್ದೋ ಎಂದು ಪರೀಕ್ಷಿಸಿ ನೋಡುವುದು ತಪ್ಪು.

ಮಿಥ್ಯಾರೂಪದ ಗೊಡ್ಡು ಹರಟೆಯ ವಿರುದ್ಧ ಶಬ್ದಗಳಲ್ಲಿ ಪ್ರತ್ಯಾಪಾದನೆ ಮಾಡುವುದು ತಪ್ಪು.

ಗೊಡ್ಡು ಹರಟೆಯ ಇಡೀ ವಿಷಯ ಮನುಷ್ಯ ತನ್ನ ಸಮಯವನ್ನು ಹಾಳುಮಾಡುವ ಹಾಗೂ ಪ್ರಜ್ಞೆಯನ್ನು ಕೆಳ ಸ್ತರಕ್ಕೆ ತರುವ ಅತಿ ಕೆಟ್ಟ ರೀತಿ.

ಈ ಅಹಿತಕರ ರೂಢಿಯನ್ನು ವಾತಾವರಣದಿಂದ ನಿರ್ಮೂಲ ಮಾಡದಿದ್ದರೆ ಆಶ್ರಮವು ತನ್ನ ಗುರಿಯಾದ ದೈವೀ ಜೀವನವನ್ನು ಎಂದಿಗೂ ತಲುಪಲಾರದು.

**(CWM, 14/207)**

*

ಮಾತನಾಡಿದ ಪ್ರತಿಯೊಂದು ನಿರುಪಯುಕ್ತ ಶಬ್ದ ಅಪಾಯಕಾರಿ ಗೊಡ್ಡು ಹರಟೆಯದಾಗಿರುತ್ತದೆ.

ಮತ್ಸರದಿಂದ ಕೂಡಿದ ಪ್ರತಿಯೊಂದು ಶಬ್ದ, ಪ್ರತಿಯೊಂದು ಅಪನಿಂದೆ ಪ್ರಜ್ಞೆಯನ್ನು ಅವನತಿಯತ್ತ ಕೊಂಡೊಯ್ಯುತ್ತವೆ.

ಮತ್ತು ಈ ಅಪನಿಂದೆಯನ್ನು ಅಸಭ್ಯ ಭಾಷೆಯಲ್ಲಿ, ಅಸಹ್ಯಕರ ಪದಗಳಲ್ಲಿ ಅಭಿವ್ಯಕ್ತಪಡಿಸಿದಾಗ ಅದು ಆತ್ಮಹತ್ಯೆಗೆ ಸಮನಾದದ್ದು – ಮನುಷ್ಯನ ಆತ್ಮದ ಹತ್ಯೆಯಾಗುತ್ತದೆ.

*

ಅಜ್ಞಾನದಲ್ಲಿ ಮನುಷ್ಯ ಇತರರ ಬಗ್ಗೆ ಕೆಟ್ಟದಾದ ರೀತಿಯಲ್ಲಿ ಮಾತನಾಡಿದಾಗ ತನ್ನ ಪ್ರಜ್ಞೆಯನ್ನು ತಗ್ಗಿಸುತ್ತಾನೆ ಮತ್ತು ಆತ್ಮವನ್ನು ಕೀಳು ದರ್ಜೆಗೆ ಇಳಿಸುತ್ತಾನೆ.

*

ದೈವೀ ಸತ್ಯದ ಸೇವೆ ಮಾಡಲು ಜೀವಿಸುವವನು ಬಾಹ್ಯ ಪರಿಸ್ಥಿತಿಗಳಿಂದ ಪೀಡಿತನಾಗುವುದಿಲ್ಲ.

*

ನೀವು ಕೆಲವರ ಪರವಾಗಿ ಮತ್ತು ಇನ್ನು ಕೆಲವರ ವಿರುದ್ಧವಾಗಿ ಇರುವವರೆಗೆ ಅವಶ್ಯವಾಗಿ ದೈವೀಸತ್ಯದಿಂದ ಹೊರಗಿರುತ್ತೀರಿ.

*

ಮಾತಿನಲ್ಲಿ ಇಲ್ಲವೆ ಬರಹದಲ್ಲಿ ಸಾರ್ವಜನಿಕರ ಎದುರು ಜನರನ್ನು ಹೀಯಾಳಿಸುವ ಈ ಸರ್ವಸಾಮಾನ್ಯ ಅಸಭ್ಯ ರಾಜಕೀಯ ನಡವಳಿಕೆಯನ್ನು ಸಂಪೂರ್ಣವಾಗಿ ಬಿಟ್ಟುಕೊಡಿರಿ. ಮನುಷ್ಯ ವಿಚಾರಗಳ ಯುದ್ಧ ನಡೆಸಬೇಕು, ಅದರಿಂದಾಗಿ ಸತ್ಯ ಜಯಗಳಿಸುವಂತಾಗಬಹುದು, ವ್ಯಕ್ತಿಗಳ ಮಧ್ಯೆ ಯುದ್ಧವಿರಬಾರದು.

**(CWM, 14/205, 232, 268, 56)** – **ಶ್ರೀಮಾತೆ**

*

## ದೈವೀಸತ್ಯಕ್ಕೆ ಅಂಟಿಕೊಳ್ಳಿರಿ

**ಸತ್ಯ ಹಾಗೂ ಮಿಥ್ಯೆ ಇವುಗಳ ನಡುವಿರುವ ಭಿನ್ನತೆಯನ್ನು ಗುರುತಿಸುವುದು ಹೇಗೆ?**

ಅಂಧಕಾರ ಹಾಗೂ ಮಿಥ್ಯೆ ಇವುಗಳ ಶಕ್ತಿಗಳನ್ನು ಎದುರಿಸಿ ದೈವೀ ಪ್ರಕಾಶ ಹಾಗೂ ದೈವೀಸತ್ಯ ಇವು ಜಯಶಾಲಿಯಾಗುವುದಕ್ಕೆ ಸಹಾಯ ಮಾಡಲು ಇಚ್ಛಿಸುವವರು ಕೈಕೊಳ್ಳಬೇಕಾದುದು ಇದು: ತಮ್ಮ ಚಲನೆಗಳು ಆರಂಭವಾಗುವಂತೆ ಮಾಡುವ ಪ್ರಚೋದನೆಗಳನ್ನು ಲಕ್ಷ್ಯಪೂರ್ವಕವಾಗಿ ಅವಲೋಕನ ಮಾಡಬೇಕು, ದೈವೀಸತ್ಯದಿಂದ ಬರುವ ಮತ್ತು ಮಿಥ್ಯೆಯಿಂದ ಬರುವ ಪ್ರಚೋದನೆಗಳಲ್ಲಿರುವ ಭಿನ್ನತೆ ಗುರುತಿಸಬೇಕು, ಅದರಿಂದಾಗಿ ಮೊದಲನೆಯವುಗಳಿಗೆ ವಿಧೇಯವಾಗಿರಲು ಮತ್ತು ಎರಡನೆಯವುಗಳನ್ನು ತಿರಸ್ಕರಿಸಲು ಸಾಧ್ಯವಾಗುವುದು.

ಪೃಥ್ವಿಯ ವಾತಾವರಣದಲ್ಲಿ ದೈವೀಸತ್ಯದ ಪ್ರಕಾಶ ಆಗಮಿಸುವುದರಿಂದಾಗುವ ಮೊದಲ ಪರಿಣಾಮಗಳಲ್ಲಿ ಭಿನ್ನತೆ ಗುರುತಿಸುವ ಈ ಸಾಮರ್ಥ್ಯ ಕೂಡ ಒಂದು ಪರಿಣಾಮವಾಗಿರುತ್ತದೆ.



ದೈವೀಸತ್ಯದ ಪ್ರಚೋದನೆಗಳಿಂದ ಭಿನ್ನವಾಗಿರುವ ಮಿಥ್ಯೆಯ ಪ್ರಚೋದನೆಗಳನ್ನು ಪ್ರತ್ಯೇಕವಾಗಿರಿಸಿ ಗುರುತಿಸುವ ಕಾರ್ಯ ಬಹಳ ಕಠಿಣವಾದದ್ದು, ದೈವೀ ಪ್ರಕಾಶ ತಂದುಕೊಟ್ಟ ಭಿನ್ನತೆ ಗುರುತಿಸುವ ವಿಶೇಷ ಕೊಡುಗೆಯನ್ನು ಪಡೆದ ಮನುಷ್ಯ ಮಾತ್ರ ಆ ಕಠಿಣವಾದ ಕಾರ್ಯವನ್ನು ಕೈಕೊಳ್ಳಬಲ್ಲನು.

ಹಾಗಿದ್ದಾಗ್ಯೂ, ಪ್ರಾರಂಭದ ದೆಶೆಯಲ್ಲಿ ಸಹಾಯಕವಾಗಲೆಂದು ಮನುಷ್ಯ ಗಮನಿಸಬೇಕಾದ ಮಾರ್ಗದರ್ಶಕ ನಿಯಮ ಹೀಗಿದೆ: ತನ್ನೊಂದಿಗೆ ಶಾಂತಿ, ನಂಬಿಕೆ, ಸಂತೋಷ, ಸಾಮರಸ್ಯ, ವಿಸ್ತಾರ, ಏಕತೆ ಮತ್ತು ಆರೋಹಣ ಮಾಡುತ್ತಿರುವ ಅಭಿವೃದ್ಧಿ ಇವುಗಳನ್ನು ತರುವ ಇಲ್ಲವೆ ಸೃಷ್ಟಿಸುವುದೆಲ್ಲವೂ ದೈವೀಸತ್ಯದಿಂದ ಬರುತ್ತದೆ, ಅದು ಹಾಗಿರುವಾಗ ತನ್ನೊಂದಿಗೆ ತಳಮಳ, ಸಂಶಯ, ಸಂದೇಹವಾದ, ವೇದನೆ, ವಿವಾದ, ಸ್ವಾರ್ಥಪರ ಸಂಕುಚಿತತೆ, ಜಡತ್ವ, ಎದೆಗುಂದಿಸುವಿಕೆ ಮತ್ತು ನಿರಾಶೆ ಇವೆಲ್ಲವೂ ನೇರವಾಗಿ ಮಿಥ್ಯೆಯಿಂದ ಬರುತ್ತವೆ.

**(CWM, 12/302)**

*

**ದೈವೀ ಸತ್ಯವನ್ನು ವಿರೋಧಿಸುವುದರಿಂದ ಅಸಾಮರಸ್ಯ ಹಾಗೂ ಗೊಂದಲ ಮೇಲೆದ್ದು ಬರುತ್ತವೆ**

**ಪ್ರಶ್ನೆ :** *ಸದ್ಯದ ಸಮಯದಲ್ಲಿ ಆಶ್ರಮಕ್ಕೆ ಸಹಕಾರ ಹಾಗೂ ಅನ್ಯೋನ್ಯತೆ ಅವಶ್ಯವಾಗಿವೆ ಎಂಬುದು ನನಗೆ ತಿಳಿದಿದೆ, ನನಗೆ ಸಾಧ್ಯವಿದ್ದಷ್ಟು ಒಳ್ಳೆಯ ರೀತಿಯಲ್ಲಿ ಅದಕ್ಕಾಗಿ ಪ್ರಯತ್ನಿಸುತ್ತೇನೆ, ಆದರೆ ದುಃಖದಾಯಕ ರೀತಿಯಲ್ಲಿ ವಿಫಲನಾಗುತ್ತೇನೆ.*

**ಶ್ರೀಮಾತೆ :** ಅಸಾಮರಸ್ಯ ಹಾಗೂ ಗೊಂದಲ ಜಗತ್ತಿನ ಮೇಲೆಲ್ಲ ಪಸರಿಸಿಕೊಂಡಿವೆ, ಏಕೆಂದರೆ ದೈವೀಸತ್ಯದ ಕ್ರಿಯೆಗೆ ಮಿಥ್ಯೆಯ ಪ್ರತಿರೋಧವಿದೆ. ಇಲ್ಲಿ ದೈವೀಸತ್ಯದ ಕ್ರಿಯೆ ಹೆಚ್ಚು ಪ್ರಜ್ಞಾಪೂರ್ಣವಾದದ್ದರ ಮತ್ತು ಏಕಾಗ್ರತೆಯಲಿದ್ದುದರ ಕಾರಣದಿಂದಾಗಿ ಪ್ರತಿರೋಧ ಕೆರಳಿಕೊಂಡಿದೆ ಮತ್ತು ಈ ಭವ್ಯ ಗಲಭೆಯಲ್ಲಿ ಸಂಘರ್ಷದ ಶಕ್ತಿಗಳಿಂದ ವ್ಯಕ್ತಿಗಳು ಗೊಂಬೆಗಳ ರೀತಿಯಲ್ಲಿ ಚಲಿಸುವಂತೆ ಮಾಡಲಾಗುತ್ತದೆ.

**(CWM, 13/157)**

*

ಆಶ್ರಮದ ಪರಿಸ್ಥಿತಿಯನ್ನು ಕುರಿತು ಹೇಳುವುದಾದರೆ, ಅದು ನೀನು ಹೇಳಿದಂತಿದೆ, ಬಹುಶಃ ಅದಕ್ಕೂ ಕೆಟ್ಟದಾಗಿದೆ. ಶ್ರೀ ಅರವಿಂದರು ಹೇಳುವ ಹಾಗೆ ಪ್ರಜ್ಞೆ ಬದಲಾಗುವವರೆಗೆ ಯಾವುದನ್ನೂ ನಿಜವಾಗಿ ಕೈಕೊಳ್ಳಲಾಗದು ಎಂದು ನಾನು ಹೇಳುತ್ತೇನೆ.

ನೀನು ಮಧ್ಯೆ ಪ್ರವೇಶಿಸುತ್ತೀ – ಮತ್ತು ಉದಾಹರಣೆ ಹಾಗೂ ನಿದರ್ಶನದ ರೂಪದಲ್ಲಿ ಒಳ್ಳೆಯದು – ಆದರೆ ಮರುದಿನ ಅದು ಇನ್ನೂ ಹೆಚ್ಚು ಕೆಟ್ಟದ್ದಾಗುತ್ತದೆ.

ದೈವೀಸತ್ಯ ಪ್ರಕಟವಾಗಲೆಂದು ನಾವು ಅದಕ್ಕೆ ಕರೆ ಕೊಡುವ ಹಾಗೆಯೂ ಇಲ್ಲ. ಮಿಥ್ಯೆ ಎಷ್ಟೊಂದು ವಿಸ್ತಾರವಾಗಿ ಹಾಗೂ ಆಳವಾಗಿ ಹರಡಿಕೊಂಡಿದೆ ಎಂದರೆ ಆ ಪ್ರಕಟಣೆಯಿಂದಾಗುವ ಪರಿಣಾಮ ಸರ್ವನಾಶ ಕಂಡುಕೊಳ್ಳು–ವಂತಾಗಬಹುದು. ಆದಾಗ್ಯೂ ದೈವೀ ಕೃಪೆ ಅನಂತವಾಗಿದೆ, ಅದು ಮಾರ್ಗವೊಂದನ್ನು ಕಂಡುಕೊಳ್ಳಬಹುದು.

**(CWM, 13/157)**

*

**ದೈವೀಸತ್ಯ ಮಾತ್ರ ನಮ್ಮನ್ನು ಸಂರಕ್ಷಿಸಬಲ್ಲದು**

ಮಿಥ್ಯೆ ಮೃತ್ಯು ಹೊಂದುವುದಕ್ಕಿಂತ ಮೊದಲು ಪೂರ್ಣ ಆಂದೋಲನ–ದೊಂದಿಗೆ ಮೇಲಕ್ಕೆದ್ದು ಬರುತ್ತದೆ.

ಆದಾಗ್ಯೂ ಜನರು ಅನಾಹುತದಿಂದ ಕಲಿತುಕೊಳ್ಳುವ ಪಾಠವನ್ನು ಮಾತ್ರ ತಿಳಿದುಕೊಳ್ಳುತ್ತಾರೆ. ಅವರು ದೈವೀಸತ್ಯ ಕಣ್ತೆರೆಯುವುದರ ಮೊದಲು ಆ ಅನಾಹುತ ಬರಲೇಬೇಕಾಗಿದೆಯೆ?

ಅಂತಹ ಅನಾಹುತ ಆಗದಂತೆ ಮಾಡುವುದಕ್ಕಾಗಿ ನಾನು ಎಲ್ಲರ ಸಹಾಯ ಕೇಳುತ್ತಿದ್ದೇನೆ.

ಕೇವಲ ದೈವೀಸತ್ಯ ನಮಗೆ ರಕ್ಷಣೆ ನೀಡಬಲ್ಲದು, ಶಬ್ದಗಳಲ್ಲಿ ಸತ್ಯ, ಕ್ರಿಯೆಯಲ್ಲಿ ಸತ್ಯ, ಸಂಕಲ್ಪದಲ್ಲಿ ಸತ್ಯ, ಭಾವನೆಗಳಲ್ಲಿ ಸತ್ಯ ಇವುಗಳ ರೂಪದಲ್ಲಿ ಆ ದೈವೀಸತ್ಯವಿರಬೇಕು. ದೈವೀಸತ್ಯಕ್ಕೆ ಸೇವೆ ಸಲ್ಲಿಸುವುದು ಇಲ್ಲವೆ ನಾಶವಾಗಿ ಹೋಗುವುದು ಇವುಗಳ ನಡುವೆ ಆಯ್ದುಕೊಳ್ಳಬೇಕಾಗಿದೆ.

**(CWM, 13/217)** **– ಶ್ರೀಮಾತೆ**

*



ನಮ್ಮ ಮಿಥ್ಯೆಯನ್ನು ಭಗವಂತನಿಗೆ ಅರ್ಪಿಸೋಣ, ಅದರಿಂದಾಗಿ ಅವನು ಅದನ್ನು ಸಂತೋಷಕರ ದೈವೀಸತ್ಯವನ್ನಾಗಿ ಬದಲು ಮಾಡಬಹುದು.

**(CWM, 14/196)** **– ಶ್ರೀಮಾತೆ**

*

## ವಾರ್ತಾಪತ್ರ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ದಿನಾಂಕ 4ನೇ ಏಪ್ರಿಲ್ 2015 ರ ಶನಿವಾರದಂದು ಶ್ರೀ ಅರವಿಂದರು ಪಾಂಡಿಚೇರಿಗೆ ಆಗಮಿಸಿದ ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 10.00 ಗಂಟೆಯಿಂದ 10.20 ರ ವರೆಗೆ ಸಾಮೂಹಿಕ ಧ್ಯಾನ ಏರ್ಪಡಿಸಲಾಗಿತ್ತು. ನಂತರ 10.30 ರಿಂದ 12.00 ಗಂಟೆಯವರೆಗೆ "Symbolism in Veda and Savitri" ಎಂಬ ವಿಷಯದ ಬಗ್ಗೆ ಡಾ॥ ಆರ್.ಎಲ್. ಕಶ್ಯಪ್‌ರವರಿಂದ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು.

ದಿನಾಂಕ 24ನೇ ಏಪ್ರಿಲ್ 2015 ರ ಶುಕ್ರವಾರದಂದು ಶ್ರೀಮಾತೆಯವರು ಪಾಂಡಿಚೇರಿಗೆ ಆಗಮಿಸಿದ ದಿನವನ್ನಾಗಿ ಆಚರಿಸಲಾಯಿತು. ತತ್ಸಂಬಂಧ ಬೆಳಿಗ್ಗೆ 7.00 ಗಂಟೆಯಿಂದ 7.30 ರ ವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ನಂತರ ಸಾಯಂಕಾಲ 5.30 ರಿಂದ 7.00 ಗಂಟೆಯ ವರೆಗೆ ಶ್ರೀಯುತ ಭಾಸ್ಕರ ರೆಡ್ಡಿಯವರಿಂದ "The Ultimate Man - Hellenic and Beyond" – ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. 24ನೇ ಏಪ್ರಿಲ್ ನಿಂದ 9ನೇ ಜೂನ್ 2015 ರ ವರೆಗೆ "MATRIMANDIR" ಎಂಬ ವಿಷಯದ ಬಗ್ಗೆ ವಸ್ತು ಪ್ರದರ್ಶನವನ್ನು ಏರ್ಪಡಿಸಲಾಗಿದೆ.

ದಿನಾಂಕ 26ನೇ ಏಪ್ರಿಲ್ 2015 ರ ಭಾನುವಾರದಂದು ಸಾಯಂಕಾಲ 6 ಗಂಟೆಯಿಂದ 7.30 ರ ವರೆಗೆ ಡಾ॥ ಆನಂದ ರೆಡ್ಡಿ, ಶ್ರೀ ಅರವಿಂದೋ ಆಶ್ರಮ, ಪಾಂಡಿಚೇರಿ ಇವರಿಂದ "Savitri and Katha Upanishad" ಎಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಏರ್ಪಡಿಸಲಾಗಿತ್ತು. ಈ ಕಾರ್ಯಕ್ರಮಕ್ಕೆ ಅನೇಕ ಗುರು–ಬಂಧುಗಳು ಹಾಗೂ ಇತರರು ಹಾಜರಿದ್ದರು.



*None can reach heaven*
*who has not passed through hell.*

- Sri Aurobindo

**RNI No. 22511/1971**
No. of Pages **52 + 4 (Cov. Page)**
KAR Reg No : RNP/KA/BGS/368/2015-2017
Permitted to Post 10th of Every Month. Reg. Valid till : 31-12-2017
Licensed to Post at BG PSO, Mysore Road, Bengaluru - 560 026

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459628

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase,Bengaluru - 560 078. Phone : 080 - 2244 9882.